
ಐಕ್ಯರಂಗ


ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 35


ಆಗಸ್ಟ್ 31, 2003 ಬೆಲೆ ರೂ. 3.00



ನಿಂಬರ್ಗಾ : ಜಾತಿ ವೈಷಮ್ಯದ ಹುಣ್ಣು



ಅವಿಶ್ವಾಸ ನಿರ್ಣಯ : ಪ್ರಧಾನಿಗಳ ಬೂಟಾಟಿಕೆಗೆಲ್ಲಿ ಮಿತಿ ?!




ರಕ್ತಪಿಪಾಸು ಶೆರೂನ್ ಭೇಟಿ : ಭಾರತಕ್ಕೆ ಕಳಂಕ

ಸಿನಿಮಾ

ಪ್ರೀತಿ ಪ್ರೇಮ ಪ್ರಣಯ ಲವಲವಿಕೆ ಚಿತ್ರ

ಏನದು ಕೃತಕ ಮಳೆ?

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

41



ಹಿಂದಿನ ಸಂಚಿಕೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಆಂಧ್ರದ ಜನರು ಮತ್ತು ತೆಲಂಗಾಣದ ರೈತಾಪಿ ವರ್ಗ ಹಾಗೂ ಪಕ್ಷ ಅನುಭವಿಸಿದ ನೋವನ್ನು ಈ ಪ್ರಾಂತ್ಯಗಳಿಂದ ಹೊರಗಿರುವವರು ಸರಿಯಾಗಿ ತಿಳಿಯಲಿಲ್ಲ. ಅರ್ಥ ಮಾಡಿಕೊಳ್ಳಲಿಲ್ಲ. ನೆಹರೂ ಆಡಳಿತ ಹರಿಯಬಿಟ್ಟ ನಗ್ನ ಭಯೋತ್ಪಾದನೆ ಬಗ್ಗೆ ನಾಗ್ ವಿವರಿಸಿದ್ದು ಅತಿಶಯೋಕ್ತಿ ಎಂದು ಮೊದಲಿಗೆ ಅನಿಸಿತು. ಆದರೆ ಕ್ರಮೇಣ ವಾಸ್ತವ ಪರಿಸ್ಥಿತಿಯ ಮೇಜರ್ ಜಯಪಾಲ್‌ಗೆ ಅರಿವಾಯಿತು. ಮುಂದೆ ಓದಿ.....

ಕನ್ನಡಕ್ಕೆ: ವಿಶ್ವ ಕುಂದಾಪುರ

ನಾಜಿ ಜರ್ಮನಿ ಹೋಲುವ ನೆಹರೂ ಆಡಳಿತ...

ಒಂದು ವಸಾಹತುಶಾಹಿ ಸೇನೆಯ ಪರಿಚಯವಿಲ್ಲದ ಹಾಗೂ ಯುದ್ಧ ಹಾಗೂ ಶಾಂತಿಕಾಲದಲ್ಲಿ ಅವರ ಪಾತ್ರಗಳ ಬಗ್ಗೆ ಅರಿಯದ ಸಂಗಾತಿಗಳಿಗೆ ನಾನು ಮೇಲೆ ವಿವರಿಸಿದ್ದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಆ ನಗರದಲ್ಲಿನ ನಿಜವಾದ ಚಿತ್ರಣವನ್ನು ಪಡೆಯಬೇಕಾದರೆ ಯುದ್ಧಕಾಲದ ಮುಂಬಯಿ ಅಥವಾ ಕೊಲ್ಕತ್ತಾದ, ಅಥವಾ ಉತ್ತರ ಅಥವಾ ದಕ್ಷಿಣ ಭಾರತದ ಯಾವುದೇ ದೊಡ್ಡ ಪ್ರಾಂತೀಯ ನಗರದ ಅನುಭವವನ್ನು ನೆನಪಿಸಿಕೊಳ್ಳಬೇಕು.

ಭಾರಿ ವೇಗದಲ್ಲಿ ಮಿಲಿಟರಿ ಲಾರಿಗಳ ಓಡಾಟ, ರಜೆ ಮೇಲಿನ ಸೈನಿಕರು ಕುಡಿದು ತೂರಾಡುವುದು, ದೊಡ್ಡ ದೊಡ್ಡ ತಂಡಗಳನ್ನು ಆ ನಗರಗಳ ಒಳಗೆ ತರುವುದು ಹಾಗೂ ಹೊರಗೆ ಸಾಗಿಸುವುದು, ನಾಗರಿಕರು ಮತ್ತು ಮಿಲಿಟರಿ ಗುಂಡುಗಳ ಕಚ್ಚಾಟ... ಇದು ಅಂಥ ಸನ್ನಿವೇಶದ ಒಟ್ಟಾರೆ ಚಿತ್ರಣವನ್ನು ನೀಡುತ್ತದೆ.

ನಾನು ವಾಸ್ತವಗಳಿಗೆ ಕಣ್ತೆರೆಯತೊಡಗಿದೆ. ನನ್ನೊಳಗಿನ ಸೈನಿಕ ಎಚ್ಚರಿಕೆಯ ಗಂಟೆ ಬಾರಿಸಿದ. ನಾಗ್ ನೀಡಿದ್ದ ಎಚ್ಚರಿಕೆಯ ಮಹತ್ವ ಏನೆಂಬುದು

> **ಸಂಗಾತಿಗಳ ಬಂಧನದ ಸುದ್ದಿ ಪ್ರಕಟವಾದಾಗಲೆಲ್ಲ ಅವರಿಗೆ ಸರಕಾರ ಯಾವ ರೀತಿಯ ಶಿಕ್ಷೆ ವಿಧಿಸಲಿದೆ ಎಂದು ಕಾಮ್ರೇಡ್ ನಾಗ್ ಊಹೆ ಮಾಡುತ್ತಿದ್ದರು. 'ತೆಲಂಗಾಣ ಜನರ ಈ ವೀರ ನೇತಾರರನ್ನು ಅವರು ಗುಂಡಿಟ್ಟು ಕೊಲ್ಲುತ್ತಾರೆ' ಎಂದು ನಿಡು ಸುಯ್ಯುವಾಗ ಅವರ ಕಣ್ಣುಗಳು ಕೆಂಪಾಗಿರುತ್ತಿದ್ದವು, ನೀರು ತುಂಬಿಕೊಂಡಿರುತ್ತಿದ್ದವು.**

ಈಗ ಅರಿವಾಗತೊಡಗಿತು. ಏನೂ ಆಗಲಿಕ್ಕಿಲ್ಲ ಎಂಬ ನಿರಾಳ ಭಾವದ ಮೇಲೆ ಅಪಾರ ಪರಿಣಾಮ ಬೀರತೊಡಗಿತು.

ಅಪಾಯ ವಾಸನೆ ನನ್ನ ಮೂಗಿಗೆ ಬಡಿಯಿತು. ಒಂದು ಠಾಣದ ಮೇಲೆ ದಾಳಿ ನಡೆದು ಅಲ್ಲಿದ್ದವರನ್ನು ಒಂದು ಜಿಲ್ಲಾ ಅಥವಾ ಪ್ರಾಂತೀಯ ಸೆರೆಮನೆಗೆ ಕರೆದುಕೊಂಡು ಹೋಗುವ ಪ್ರಶ್ನೆ ಇದಲ್ಲ. ಫ್ಯಾಸಿಸ್ಟ್ ದಬ್ಬಾಳಿಕೆಯ ಕೂಪ, ಕ್ರಿಮಿನಲ್ ದೌರ್ಜನ್ಯದ ಯುದ್ಧ ವ್ಯವಸ್ಥೆ ನನ್ನನ್ನು ನುಂಗಿಹಾಕಿ ಬಿಡಬಹುದು. ಪ್ರತಿಭಟನೆ ಸೊಲ್ಲನ್ನು ಎತ್ತಲಿಕ್ಕೂ ಅವಕಾಶ ಕೊಡದೆಯೇ. ಸಾವಿರಾರು ಜನರನ್ನು ಅದು ಹಾಗೆ ನುಂಗಿ ಹಾಕಿಯಾಗಿದೆ. ಸಿಟ್ಟು, ಆಘಾತ ಮತ್ತು ಭವಿಷ್ಯವೇನೆಂಬುದು ಅರಿಯದ ಸ್ಥಿತಿ ಇವೆಲ್ಲವುಗಳ ಮಿಶ್ರಭಾವನೆಯಿಂದ ಉಂಟಾಗುವ ಒಂದು ರೀತಿಯ ರೋಗಲಕ್ಷಣದಿಂದ ನಾನು ಬಳಲಿದೆ. ಹೀಗಾದಾಗ ಹೊಟ್ಟೆ ತೊಳಸಿದಂತಾಗುತ್ತದೆ.

ಉಪನಗರ ರೈಲುಗಳಲ್ಲಿ ಗಿಜಿಗಿಡುವ ಜನಜಂಗುಳಿ ಇರಲಿಲ್ಲ. ಜನರು ಅವರವರ ಸೀಟುಗಳಲ್ಲಿ ನೀರವ ಮೌನ ತಳೆದು ಕುಳಿತಿದ್ದರು. ಪೊಲೀಸರು ಹಿಂಬಾಲಿಸುತ್ತಿರುವ ಭಯದಿಂದಾಗಿ ನಾಲಿಗೆ ಬಿಗಿ ಹಿಡಿದುಕೊಂಡಿದ್ದ ಜನರು ಪಿಸುಗುಟ್ಟಿ ಮಾತನಾಡುತ್ತಿದ್ದರು ಅಷ್ಟೆ. ನಿರೀಕ್ಷಿತ ಹಾಗೂ ಅನಿರೀಕ್ಷಿತ ಸ್ಥಳಗಳಲ್ಲಿ ಕರಾಳ ನೆರಳು ಮೂಡುವ ಭಯದಿಂದ ಅವರು ತತ್ತರಿಸಿ ಹೋಗಿದ್ದರು.

ಇದು ಹೈದರಾಬಾದ್‌ನ 'ವಿಮೋಚಿತ ಪ್ರದೇಶದಲ್ಲಿ' ಕಾರ್ಯಾಚರಣೆಯಲ್ಲಿದ್ದ 'ನೆಹರೂರವರ ಪ್ರಜಾಪ್ರಭುತ್ವ'ವಾಗಿತ್ತು. ನಾಜಿ ಆಡಳಿತದ ಬರ್ಲಿನ್ ನಗರದ ರೂಪವನ್ನು ಹೈದರಾಬಾದ್ ನಗರ ತಳೆದಿತ್ತು ಎಂದರೆ ಅದು ಖಂಡಿತಕ್ಕೂ ಅತಿಶಯೋಕ್ತಿಯಲ್ಲ. ಅಲ್ಲಿನ ವಾಸ್ತವಾಂಶಗಳೇ ಎಲ್ಲವನ್ನೂ ಹೇಳುತ್ತಿದ್ದವು.

ಆಂಧ್ರ ಮತ್ತು ತೆಲಂಗಾಣದ ಹೊರಗಡೆ ಬಂಡವಾಳಶಾಹಿ ಪತ್ರಿಕೆಗಳಲ್ಲಿ ಆಗಾಗ ದುಷ್ಕರ್ಮಿಗಳ ಬಗ್ಗೆ ಸುದ್ದಿಗಳು ಪ್ರಕಟವಾದವು. ಆಗೊಮ್ಮೆ ಈಗೊಮ್ಮೆ ಅಂಕಣಗಳಲ್ಲಿ ಬಂಡುಕೋರರ 'ಕೊಲೆಗಟುಕ ಚಟುವಟಿಕೆಗಳು', ಗುಂಡಿನ ಚಕಮಕಿ ನಂತರ ಪಲಾಯನ. ಪಲಾಯನ ಮಾಡಿದ ಬಂಡುಕೋರರು ಪೊಲೀಸ್ ಠಾಣೆ ಲೂಟಿ ಮಾಡಿದ ಸುದ್ದಿಗಳು ಪ್ರಕಟಗೊಳ್ಳುತ್ತಿದ್ದವು. ತೆಲಂಗಾಣದಲ್ಲಿ ಎಲ್ಲವೂ ಶಾಂತವಾಗಿದೆ, ಬಂಡುಕೋರರನ್ನು ನಿಯಂತ್ರಣಕ್ಕೆ ತರಲಾಗಿದೆ ಎಂಬಿತ್ಯಾದಿ ಅಧಿಕೃತ ಪತ್ರಿಕಾ ಹೇಳಿಕೆಗಳೂ ಬಂದವು. ತೆಲಂಗಾಣ ಕುರಿತ ಈ ರೀತಿಯ ಯೋಜಿತ ಸುದ್ದಿ ಪ್ರಸಾರದಿಂದಾಗಿ ಶತ್ರುಗಳ ದುಷ್ಟ ಉದ್ದೇಶ ಬಹುಮಟ್ಟಿಗೆ ಈಡೇರಿದಂತಾಯಿತು. ಮುಗ್ಧ ಹಾಗೂ ಗಲಿಬಿಲಿಗೊಂಡ ಜನರು ತೆಲಂಗಾಣದಲ್ಲಿ ಎಲ್ಲವೂ ಮುಗಿದುಹೋಯಿತು ಎಂದು ನಂಬಿಬಿಟ್ಟರು.

ಆದರೆ ನಗರದ ಸುತ್ತಮುತ್ತ ಸತತವಾಗಿ ಉರಿಯುತ್ತಿದ್ದ ಕ್ರಾಂತಿಯ ಜ್ವಾಲೆ ಮುಚ್ಚಿಡಲಾಗದಷ್ಟು ಪ್ರಖರವಾಗಿತ್ತು. ಸ್ಥಳೀಯ ಬಂಡವಾಳಶಾಹಿ ಪತ್ರಿಕೆಗಳು ಪ್ರತಿದಿನವೂ 'ಬಂಡುಕೋರ ಚಟುವಟಿಕೆಗಳ' ಬಗ್ಗೆ ಕಾಲಂಗಟ್ಟಲೆ ಸುದ್ದಿಗಳನ್ನು ಪ್ರಕಟಿಸುತ್ತಿದ್ದವು.

'ದೇಶಭ್ರಷ್ಟ ಭೂಮಾಲಿಕರು' ಪಾಳೇಗಾರಿ ಶೋಷಣೆಯ ನಾಶಗೊಂಡ ತಮ್ಮ ಕೋಟೆಗಳನ್ನು ತಮಗೆ ವಾಪಸು ಕೊಡಿಸಲು ವಿಫಲವಾದ ನೆಹರೂ ಸರಕಾರದ ವಿರುದ್ಧ ದಿನದಿನವೂ ಬೆಂಕಿಯುಗುಳುತ್ತಿದ್ದರು. ಭಯೋತ್ಪಾದಕರನ್ನು ಮಟ್ಟಹಾಕಲಾಗಿದೆ ಎಂಬ ಅಧಿಕೃತ ಹೇಳಿಕೆಗಳ ಸಿಂಧುತ್ವವನ್ನು ಪ್ರಶ್ನಿಸಿ ಕೆಲವರು ಪತ್ರಿಕೆಗಳಿಗೆ ಬರೆದರು. ಅಲ್ಲಿ ಎಲ್ಲವೂ ಮುಗಿದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಅವರು ಪುರಾವೆಗಳನ್ನು ಬಂಡವಾಳಶಾಹಿ ಪತ್ರಿಕೆಗಳಿಗೆ ಒದಗಿಸಿದರು.

"ಬಂಡುಕೋರರ ವಿರುದ್ಧ ಭಾರಿ ಯಶಸ್ಸು ಸಾಧಿಸಿರುವಾಗ ಹೈದರಾಬಾದ್ ರಾಜ್ಯವೊಂದರಲ್ಲೇ ಪೊಲೀಸ್ ಪಡೆಗಳ ವೆಚ್ಚವನ್ನು 92 ಲಕ್ಷ ರೂಪಾಯಿಗಳಿಂದ ಐದು ಕೋಟಿ ರೂಪಾಯಿಗೆ ಏರಿಸಿದ್ದು ಏಕೆ?" ಎಂದು ಒಬ್ಬರು ಕಮ್ಯುನಿಸ್ಟ್ ವಿರೋಧಿ ಪತ್ರಿಕೆಯ ಅಂಕಣದಲ್ಲಿ ಪ್ರಶ್ನಿಸಿದರು. ಮರುಳು ಗೊಳಿಸುವ ಆಶ್ವಾಸನೆಗಳನ್ನು ಹಾಗೂ ವಂಚಿಸುವ ಸುಳ್ಳುಗಳನ್ನು ಹೇಳದಿರಿ ಎಂದೂ ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಬಂಡುಕೋರರನ್ನು ಸಮೂಹ ನಾಶ ಮಾಡಲು ಇನ್ನಷ್ಟು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಿ ಎಂದು ಸಲಹೆ ಮಾಡಿದರು.

ನಾನಿನ್ನೂ ಅಲ್ಲಿ ಸಂಪರ್ಕಕ್ಕಾಗಿ ಕಾಯುತ್ತಿದ್ದ ವೇಳೆ ವೈರಿ ಪಡೆಗಳ 'ವಶವಾದ' ತೆಲಂಗಾಣ ಕುರಿತ ರವಿನಾರಾಯಣದ ದಸ್ತಾವೇಜನ್ನು ಸ್ಥಳೀಯ ಪತ್ರಿಕೆ ಪೂರ್ಣವಾಗಿ ಪ್ರಕಟಿಸಿತು. ಈ ಮುಂಚೆ ಇರಲಿಲ್ಲ ಎಂದು ತಿಳಿಯಲಾಗಿದ್ದ ಗೆರಿಲ್ಲಾಗಳ ವಿರುದ್ಧ ಅಪಾರ ಶಸ್ತ್ರವನ್ನು ಪಡೆಯಲಾಗಿದೆ ಎಂಬ ಖುಷಿಯಿಂದ ಅದನ್ನು ಪ್ರಕಟಿಸಿದಂತಿತ್ತು.

ಈ ದಸ್ತಾವೇಜಿಗೆ 'ಪ್ರಭುತ್ವದ ಭೂಮಾಲಿಕರು' ನೀಡಿದ ವ್ಯಾಪಕ ಹಾಗೂ ಅಬ್ಬರದ ಪ್ರಚಾರ ವೈಖರಿ ನೋಡಿದರೆ ತೆಲಂಗಾಣದಲ್ಲಿ ಎಲ್ಲವೂ ಮುಗಿದಿದೆ ಎಂಬ ಈ ಮುಂಚಿನ ಹೇಳಿಕೆಗಳ ವಿಚಾರದಲ್ಲಿ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡುವ ಉದ್ದೇಶ ಹೊಂದಿರಲಿಲ್ಲ. ಹೋರಾಟದ ದುರ್ಬಲ ಅಂಶಗಳತ್ತ ಕೇಂದ್ರ ಸರಕಾರದ ಗಮನ ಸೆಳೆಯುವುದು, ಅದರ ದಬ್ಬಾಳಿಕೆ ಕಾರ್ಯಾಚರಣೆಯನ್ನು ತೀವ್ರಗೊಳಿಸುವಂತೆ ಒತ್ತಡ ಹೇರುವುದು ಇದರ ಮುಖ್ಯ ಉದ್ದೇಶವಾಗಿತ್ತು. ಹಾಗೂ ಅದನ್ನು 'ಕಮ್ಯುನಿಸ್ಟ್ ಪಕ್ಷದ ಒಳಗಡೆಯಿಂದಲೇ ವಿವೇಕವಂತ ಜನರ ಯುಕ್ತಿಯಿಂದ ಕೂಡಿದ ಉದಾರವಾದಿ ನಿರ್ವಹಣೆಯೊಂದಿಗೆ' ಜತೆ ಸೇರಿಸುವಂತೆ ಒತ್ತಾಯಿಸುವುದು ಉದ್ದೇಶವಾಗಿತ್ತು.

ಈ ರೀತಿಯಾಗಿ, ಯೋಜಿತ ಮೌನದ ಮೂಲಕ ತೆಲಂಗಾಣವನ್ನು 'ಕೊಲ್ಲುವುದು' ಪತ್ರಿಕಾ ಮಾಲೀಕರ ಬಯಕೆಯಾದರೂ, 'ತಂಟೆಕೋರರನ್ನು' ದಮನಿಸಲು ಪತ್ರಿಕೆಗಳು ಕೂಗಾಡುತ್ತಿದ್ದವು, ಹೋರಾಟವನ್ನು ಆದಷ್ಟು ಬೇಗ ಮಟ್ಟಹಾಕಲು ಒತ್ತಾಯಿಸಿದವು. ಆ ವೇಳೆಗಾಗಲೇ ಸಂಘರ್ಷವನ್ನು ದಮನಿಸಲಾಗಿದೆ ಎಂದು ಹೇಳಿಕೊಳ್ಳಲಾಗಿತ್ತು.

ಸ್ಥಳೀಯ ಪತ್ರಿಕೆಗಳ ಈ ಧೋರಣೆಯ ನಡುವೆಯೂ ನಮ್ಮ ಸಂಗಾತಿಗಳಿಗೆ ನೀಡಲಾಗುತ್ತಿರುವ ಹಿಂಸೆ ಹಾಗೂ ಸಂಗಾತಿಗಳ ಹತ್ಯೆಯ ಸುದ್ದಿ ಆಂಧ್ರ ಮತ್ತು ಹೈದರಾಬಾದ್ ರಾಜ್ಯದ ನಗರಗಳಿಂದ ಹರಿದು ಬರತೊಡಗಿದವು. ಸಂಗಾತಿಗಳ ಬಂಧನದ ಸುದ್ದಿ ಪ್ರಕಟವಾದಾಗಲೆಲ್ಲ ನಾಗ್ ಕುಳಿತುಕೊಂಡು ಈ ಸಂಗಾತಿಗಳ ವಿರುದ್ಧ ಸರಕಾರ ತೆಗೆದುಕೊಳ್ಳಬಹುದಾದ ಕ್ರಮಗಳೇನಿರಬಹುದು ಎಂದು ಊಹಿಸುವ ಕಷ್ಟದಾಯಕ ಕೆಲಸದಲ್ಲಿ ತೊಡಗುತ್ತಿದ್ದರು.

"ತೆಲಂಗಾಣ ಜನತೆಯ ಈ ವೀರ ನಾಯಕರನ್ನು ಅವರು ಗುಂಡಿಟ್ಟು ಕೊಲ್ಲುತ್ತಾರೆ" - ಎಂದವರು ನಿಟ್ಟುಸಿರು ಬಿಡುತ್ತಿದ್ದರು, ಅವರ ಕಣ್ಣುಗಳು ಕೆಂಪಾಗಿರುತ್ತಿದ್ದವು, ನೀರು ತುಂಬಿಕೊಂಡಿರುತ್ತಿತ್ತು.

ನಾವು 'ಊಹೆ ಮಾಡಿದ' ಪಟ್ಟಿಯಲ್ಲಿದ್ದ ಪೈಕಿ ಶೇಕಡ 90 ರಷ್ಟು ಸಂಗಾತಿಗಳನ್ನು ಕ್ರೂರವಾಗಿ ಗುಂಡಿಕ್ಕಿ ಸಾಯಿಸಲಾಗಿದೆ ಅಥವಾ ವಿಶೇಷ ಪೊಲೀಸ್ ಶಿಬಿರಗಳ ಯಾತನಾ ಕೋಣೆಗಳಲ್ಲಿ ಕ್ರಮೇಣ ಸಾಯುವಂತೆ ಮಾಡಲಾಗಿದೆ.

ತೆಲಂಗಾಣ ಹೋರಾಟವನ್ನು ದಮನಿಸಲಾಗಿದೆ ಎಂಬ ಭಾವನೆ ಬರುವಂತೆ ಬಂಡವಾಳಶಾಹಿ ಪತ್ರಿಕೆಗಳ ಮೂಲಕ ಸಾಕು-ಬೇಕಾದಷ್ಟು ಪ್ರಚಾರ ಮಾಡಲಾಯಿತು. ಆದರೆ ಈ ಕ್ರಾಂತಿಯ ಪ್ರಖರ ಜ್ವಾಲೆಯನ್ನು ಅಡಗಿಸಿಡುವುದು ಪ್ರಭುತ್ವಕ್ಕೆ ಸಾಧ್ಯವಾಗಲಿಲ್ಲ. ವಾಸ್ತವವಾಗಿ ವಿವೇಕವಂತ ಜನರೇ, ಬಂಡಾಯವನ್ನು ದಮನಿಸಲಾಗಿದೆ ಎಂಬ ಸರಕಾರದ ಹೇಳಿಕೆಗಳ ಸಿಂಧುತ್ವವನ್ನು ಪ್ರಶ್ನಿಸಿದರು. ಸುಳ್ಳುಪೊಳ್ಳು ಹೇಳಬೇಡಿ ಎಂದು ಎಚ್ಚರಿಕೆ ನೀಡಿದರು.

ಕಾಡಿಗೆ 200 ಮೈಲು ಪಯಣ.....

ರೈತ ಹೋರಾಟದ ಪ್ರದೇಶದ ಪ್ರಾದೇಶಿಕ ಸಮಿತಿ ಕಾರ್ಯದರ್ಶಿಯವರ ಜತೆ ಒಂದು ಸಂಜೆ ನಾನು ಹೊರಬಿದ್ದೆ. ಊಳಿಡುವ ಬಂಡವಾಳಶಾಹಿ ಪತ್ರಿಕೆ ಹಾಗೂ ಶಸ್ತ್ರಾಸ್ತ್ರ ಪಟ್ಟಣವನ್ನು ಅದರ ಭ್ರಮಿತ ಶಾಂತಿಯೊಂದಿಗೆ ಇರಬಿಟ್ಟು ನಾನು ಹೊರಟೆ. ನಗರದಿಂದ 20 ಮೈಲು ದೂರ ನಮ್ಮನ್ನು ಕರೆದೊಯ್ಯಲು 'ದೂತ'ನೊಬ್ಬ ಬಂದಿದ್ದ. ಅಲ್ಲಿ ತಲುಪಿದ ಮೇಲೆ ತಂಡವೊಂದು ನಮ್ಮ ಉಸ್ತುವಾರಿ ನೋಡಿಕೊಳ್ಳಲಿತ್ತು.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಆಗಸ್ಟ್ 16 ರಿಂದ 31, 2003**
  ಕೇಂದ್ರ ಸರ್ಕಾರದ ಅಮೆರಿಕ ಪರ ವಿದೇಶಿ ನೀತಿ, ಜನವಿರೋಧಿ ನೀತಿ ಹಾಗೂ ಕೋಮುವಾದೀಕರಣದ ವಿರುದ್ಧ ಪ್ರಚಾರಾಂದೋಲನ
- ಸೆಪ್ಟೆಂಬರ್ 9 ರಂದು ಬೆಂಗಳೂರಿನಲ್ಲಿ ರ್‍ಯಾಲಿ
- ಸೆಪ್ಟೆಂಬರ್ 18 ರಂದು ಮಂಗಳೂರಿನಲ್ಲಿ ರ್‍ಯಾಲಿ
- **ಆಗಸ್ಟ್ 29, 2003**
  ಮೈಸೂರು-ಬೆಂಗಳೂರು ಜಾಥಾದ ಸಮಾರೋಪ ಸಭೆ, ಸಂಜೆ 7 ಗಂಟೆಗೆ ಐಟಿಸಿ ಕಾಲೋನಿಯಲ್ಲಿ
- **ಸೆಪ್ಟೆಂಬರ್ 05, 2003**
  ಡಾ. ಜಿ.ರಾಮಕೃಷ್ಣ ಅಭಿನಂದನಾ ಸಮಾರಂಭ, ಸೆನೆಟ್ ಹಾಲ್
- **ಸೆಪ್ಟೆಂಬರ್ 13, 2003**
  ಮೇರಿ ದೇವಾಸಿಯಾ ಸ್ಮರಣ
  ರಾಜ್ಯ ಸರ್ಕಾರಿ ನೌಕರರ ಚಳುವಳಿಯ ಸಮರಶೀಲ ನಾಯಕಿ ಮೇರಿ ದೇವಿಸಿಯಾ ನಿಧನರಾಗಿ ಹತ್ತು ವರ್ಷಗಳಾದ ಸಂದರ್ಭದಲ್ಲಿ ಸ್ಮರಣೆ.
- **ಸೆಪ್ಟೆಂಬರ್ 10, 2003**
  ಕ್ಯಾನ್‌ಕುನ್‌ನಲ್ಲಿ ನಡೆಯಲಿರುವ WTO ಸಭೆಯಲ್ಲಿ ಅಂಗೀಕರಿಸಲಿರುವ ಜನ ವಿರೋಧಿ ಅಂಶಗಳ ವಿರುದ್ಧ ರಾಜ್ಯ ಮಟ್ಟದ ಪ್ರತಿಭಟನಾ ಪ್ರದರ್ಶನ.
  ಸ್ಥಳ:ಬಸವೇಶ್ವರ ಸರ್ಕಲ್, ಬೆಂಗಳೂರು
  ಬೆಳಿಗ್ಗೆ: 11.30 ಕ್ಕೆ ಚಿಕ್ಕಲಾಲ್‌ಬಾಗ್ ನಿಂದ ಮೆರವಣಿಗೆ ಆರಂಭ
- **ಸೆಪ್ಟೆಂಬರ್ 11, 2003**
  ಸಿಐಟಿಯು ದ.ಕ. ಜಿಲ್ಲಾ ಸಮ್ಮೇಳನ

"ದೇಶ ರಕ್ಷಣೆ ಅಪಾಯದಲ್ಲಿ..." - ಕಾಂ. ವಿ.ಜೆ.ಕೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ನೀತಿಗಳನ್ನು ವಿರೋಧಿಸಿ, ಪರ್ಯಾಯ ನೀತಿಗಳಿಗಾಗಿ ಆಗ್ರಹಿಸಿ ಸಿಪಿಐ(ಎಂ) ದೇಶವ್ಯಾಪಿ ಕೈಗೊಂಡಿರುವ ಜನಾಂದೋಲನ ಜಾಥಾ ಕಾರ್ಯಕ್ರಮದ ಮೈಸೂರು ಜಿಲ್ಲಾ ಜಾಥಾವನ್ನು ಸಿ.ಪಿ.ಐ.ಎಂ. ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ ನಾಯರ್ ಉದ್ಘಾಟಿಸಿದರು.

ಅನಂತರ ಮಾತನಾಡಿದ ಅವರು, ಕೇಂದ್ರದ ಬಿಜೆಪಿ ಸರ್ಕಾರವು ದೇಶದ ರಕ್ಷಣೆಯನ್ನು ಅಪಾಯದಂಚಿಗೆ ಕೊಂಡೊಯ್ದಿದೆ ಎಂದು ತಿಳಿಸಿದರು.

ಸ್ವಾತಂತ್ರ್ಯವನ್ನು ಬಹಳಷ್ಟು ಕಷ್ಟದಿಂದ ಸಂಪಾದಿಸಿದ ಈ ದೇಶವನ್ನು ಮತ್ತೆ ವಿದೇಶಿಯರ ಕೈಗೆ ನೀಡಲು ಕೇಂದ್ರ ಸರ್ಕಾರ ಹುನ್ನಾರ ನಡೆಸುತ್ತಿದೆ. ವಿದೇಶಿ ಕಂಪನಿಗಳಿಗೆ ಇಲ್ಲಿ ಸ್ಥಾನ


ಮೈಸೂರಿನಲ್ಲಿ...

ನೀಡುವ ಮೂಲಕ ವ್ಯವಸ್ಥೆಯನ್ನು ಅವರ ಕೈವಶ ಮಾಡುತ್ತಿದೆ ಎಂದರು.

ಕೇಂದ್ರ ಸರ್ಕಾರದ ಅಮೇರಿಕ ಪರ ವಿದೇಶಾಂಗ ನೀತಿ ಬದಲಾಗಬೇಕು, ಇರಾಕಿಗೆ ಭಾರತದ ಸೈನ್ಯ ಕಳಿಸಬಾರದು, ಭಾರತಕ್ಕೆ ಸ್ವತಂತ್ರವಾದ ಅಲಿಪ್ತ ವಿದೇಶಾಂಗ ನೀತಿ ಇರಬೇಕು ಎಂದು ಅವರು ಆಗ್ರಹಿಸಿದರು.

ಲಾಭದಾಯಕ ಸಾರ್ವಜನಿಕ ರಂಗದ ಕೈಗಾರಿಕಾ ಘಟಕಗಳನ್ನು ಖಾಸಗೀಕರಣ ಮಾಡುವುದು ನಿಲ್ಲಬೇಕು, ಖಾಸಗೀಕರಣಗೊಂಡ ಘಟಕಗಳಲ್ಲಿ ಎಸ್.ಸಿ., ಎಸ್.ಟಿ., ಮತ್ತು ಹಿಂದುಳಿದವರಿಗೆ ಮೀಸಲಾತಿ ಮುಂದುವರೆಯಬೇಕೆಂಬುದು ಈ ಆಂದೋಲನದ ಮುಖ್ಯ ಉದ್ದೇಶ ಎಂದು ಅವರು ನುಡಿದರು.

ಬಡ ರೈತರ ಸಾಲ ಮನ್ನಾ, ಗ್ರಾಮೀಣ ಉದ್ಯೋಗ ಸೃಷ್ಟಿ, ಕೃಷಿ ಉತ್ಪನ್ನಗಳ ಬೆಲೆ ಕುಸಿತಕ್ಕೆ ತಡೆ, ನೀರಾವರಿ, ಬರಪರಿಹಾರ ಮೊದಲಾದವುಗಳ ಕಡೆ ಗಮನ ಹರಿಸಬೇಕೆಂದು ಅವರು ಹೇಳಿದರು.

. ಪಡಿತರ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದು, ಶಿಕ್ಷಣದ ವ್ಯಾಪಾರೀಕರಣಕ್ಕೆ ತಡೆಯೊಡ್ಡುವುದು, ಶಾಸನ ಸಭೆಯಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ, ಸರ್ಕಾರದ ರೇಷ್ಮೆ ಕೇಂದ್ರ ಖಾಸಗೀಕರಣ ವಿರೋಧ ಮೊದಲಾದವುಗಳು ಆಂದೋಲನದ ಉದ್ದೇಶ ಎಂದು ಅವರು ತಿಳಿಸಿದರು.

ರಾಜ್ಯದಾದ್ಯಂತ ಜಾಥಾಗಳ ಆರಂಭ

ಸಿ.ಪಿ.ಐ(ಎಂ) ನ ಜಾಥಾವು ಜನರ ನಡುವೆ ಸಂಚರಿಸಲಿದ್ದು ದೇಶ ಎದುರಿಸುತ್ತಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಎಲ್ಲರೂ ಈ ಆಂದೋಲನ ಬೆಂಬಲಿಸುವಂತೆ ಅವರು ಕೋರಿದರು.


ಜಾಥಾವು ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು ತಾಲ್ಲೂಕುಗಳಲ್ಲಿ ಸಂಚರಿಸಲಿದೆ ಎಂದು ಮೈಸೂರು ಜಿಲ್ಲಾ ಸಿಪಿಐಎಂ. ಕಾರ್ಯದರ್ಶಿ ಎನ್.ಎಸ್.ಪ್ರಭಾಕರ್ ತಿಳಿಸಿದರು.

ಈ ಸಂದರ್ಭದಲ್ಲಿ ಬೆಂಗಳೂರು ಜಿಲ್ಲಾ ಸಿ.ಪಿ.ಎಂ ಕಾರ್ಯದರ್ಶಿ ಕೆ. ಪ್ರಕಾಶ್, ರಾಜ್ಯ ಸಮಿತಿ ಕಾರ್ಯದರ್ಶಿಮಂಡಳಿ ಸದಸ್ಯ ಜೆ.ಸಿ.ಬಯ್ಯಾರೆಡ್ಡಿ ಮೊದಲಾದವರು ಹಾಜರಿದ್ದರು.

'ಗೋಮುಖ ವ್ಯಾಘ್ರ ನೀತಿ ಅರಿಯಬೇಕು' ಹೊಸಪೇಟೆಯಲ್ಲಿ ಜನಾಂದೋಲನ ಜೀಪ್ ಜಾಥಾ ಉದ್ಘಾಟನೆ

ಹೊಸಪೇಟೆ ಆಗಸ್ಟ್ 17 ಕೇಂದ್ರ ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳನ್ನು ವಿರೋಧಿಸಿ ಪರ್ಯಾಯ ನೀತಿಗಳಿಗಾಗಿ ಆಗ್ರಹಿಸಿ ಸಿಪಿಐ(ಎಂ) ನ ದೇಶವ್ಯಾಪಿ ಜನಾಂದೋಲನ ಕಾರ್ಯಕ್ರಮದ ಜೀಪ್ ಜಾಥಾದ ಉದ್ಘಾಟನೆ ನಗರದ ಹಳೇ ಬಸ್ ನಿಲ್ದಾಣದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ಉದ್ಘಾಟಿಸಿದ ರಾಜ್ಯ ಸೆಕ್ರಟಾರಿಯೇಟ್ ಸದಸ್ಯರಾದ ಎಸ್.ವೈ.ಗುರುಶಾಂತ್ ಮಾತನಾಡುತ್ತಾ ಕೇಂದ್ರದ ವಾಜಪೇಯಿ ಸರ್ಕಾರವು ಅಲಿಪ್ತ ವಿದೇಶಾಂಗ ನೀತಿಗೆ ತಿಲಾಂಜಲಿ ಇಡುವ ಮೂಲಕ ಅಮೇರಿಕಾ ಸಾಮ್ರಾಜ್ಯಶಾಹಿಗೆ ತನ್ನ ಗುಲಾಮಗಿರಿಯನ್ನು ತೋರಿ ದೇಶದ ಘನತೆಗೆ ಕುಂದು ತಂದಿದೆ. ಅಲ್ಲದೇ ದೇಶದಲ್ಲಿ ಲಕ್ಷಾಂತರ ಟನ್‌ಗಳಷ್ಟು ಅಹಾರ ವಸ್ತುಗಳ ದಾಸ್ತಾನು ಇರುವಾಗಲೂ ಸಹಿತ ಜನರು ಹಸಿವು ಬರಗಾಲದಂತಹ ಗಂಭೀರ ಪರಿಸ್ಥಿತಿಗಳನ್ನೆದುರಿಸುತ್ತಿರುವುದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿರುವುದಕ್ಕೆ ಪ್ರಮುಖ ಕಾರಣವಾಗಿದೆ ಎಂದರು. ಮುಂದುವರೆದು ಮಾತನಾಡಿದ ಅವರು ಭಾರತದಂತಹ ವಿಭಿನ್ನ ಸಾಂಸ್ಕೃತಿಕ ನೆಲೆಯುಳ್ಳ ಈ ದೇಶದಲ್ಲಿ ಕೋಮುವಾದಿ ಫ್ಯಾಸಿಸ್ಟ್ ಆಕ್ರಮಣ ಹಬ್ಬಿಸಲಾಗುತ್ತಿದೆ. ವಾಜಪೇಯಿ ಸರ್ಕಾರವು ಹೈನುಗಾರಿಕೆ ಕ್ಷೇತ್ರವನ್ನು ವಿದೇಶಿಯರಿಗೆ ನೀಡುವ ಮೂಲಕ ಒಂದು ಕಡೆ ಪಶುಸಂಗೋಪನೆಯನ್ನು ನಾಶಪಡಿಸುತ್ತಿದೆ. ಆದರೆ ಮತ್ತೊಂದೆಡೆ ಗೋವುಗಳ ಸಂರಕ್ಷಣೆ ಕುರಿತು ಕಾನೂನು ರಚಿಸಲು ಹೊರಟಿರುವುದು ರಾಜಕೀಯ ವಂಚಕತನ ಪ್ರಮುಖ ಸಾಕ್ಷಿಯಾಗಿದೆ ಎಂದರು. ಸಂಜೆ ನಡೆದ ಈ ಸಭೆಯಲ್ಲಿ 500 ಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಯು.ಬಸವರಾಜು, ಮಾತನಾಡಿ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸತತ ಬರಗಾಲವಿರುವಾಗ ಸಹಿತ ರಾಜ್ಯ ಎಸ್.ಎಂ.ಕೃಷ್ಣ ಸರ್ಕಾರವು ಬರಗಾಲ ಕಾಮಗಾರಿಗಳನ್ನು ನಡೆಸುವುದಕ್ಕೆ ವಿಫಲವಾಗಿದೆ ಅಲ್ಲದೇ ಅದರಲ್ಲಿಯೂ ಸಹಿತ ವ್ಯಾಪಕ ಭ್ರಷ್ಟಾಚಾರ ನಡೆಸುತ್ತಿದೆ ಎಂದರು. ಅಲ್ಲದೆ ಗ್ರಾಮೀಣ ಕೃಪಾಂಕ ನೌಕರರ ಕುರಿತು ಪರ್ಯಾಯ ಕ್ರಮ ಕೈಗೊಳ್ಳದೇ


ಹೊಸಪೇಟೆಯಲ್ಲಿ....

ಇರುವುದನ್ನು ಅವರು ಖಂಡಿಸಿದರು.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಿ.ವೆಂಕಟರಮಣರವರು ವಹಿಸಿದ್ದರು. ವೇದಿಕೆಯಲ್ಲಿ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಎಸ್.ಪ್ರಸನ್ನ ಕುಮಾರ್, ವೈ. ರಾಮಚಂದಿರ, ಕೆ. ರಮೇಶ್ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಕ್ರಾಂತಿಗೀತೆಗಳನ್ನು ಕರುಣಾನಿಧಿ, ಗೋಪಾಲ್ ಹಾಗೂ ಸಂಗಡಿಗರು ಹಾಡಿದರು. ಎಲ್.ಮಂಜುನಾಥ್ ನಿರೂಪಿಸಿದರು. ಕೊನೆಯಲ್ಲಿ ಜಿ.ವಿ.ರಮೇಶ್ ವಂದಿಸಿದರು.

ಈ ಜಾಥಾ ಹೊಸಪೇಟೆ ತಾಲೂಕಿನಾದ್ಯಂತ ಸಂಚರಿಸಿ, ಬಳ್ಳಾರಿ, ಮೊಳಕಾಲ್ಮೂರು, ಚಿತ್ರದುರ್ಗ, ದಾವಣಗೆರೆ ಹರಪನಹಳ್ಳಿ, ಹಡಗಲಿಯಿಂದ 29 ರಂದು ಹಗರಿಬೊಮ್ಮನಹಳ್ಳಿಯಲ್ಲಿ ಸಮಾರೋಪಗೊಳ್ಳಲಿದೆ.


ಗುಲ್ಬರ್ಗಾದಲ್ಲಿ...

ಜನರ ನಡುವೆ ಸತ್ಯಸಾರಲು ಹೊರಟಿರುವ ಜಾಥಾಗಳು

ಕೃತಕ ಮಳೆಯದ್ದೇ ಮಾತು! ಆದರೆ ಬರದಲ್ಲಿ ಬಿರಿದ ನೆಲದ ಬಿರುಕು ಮುಚ್ಚಲಿಲ್ಲ, ಜನ-ದನಕರುಗಳ ಆಕ್ರಂದನ ನಿಲ್ಲಲಿಲ್ಲ, ಬರದ ಅಧ್ಯಯನದ ನಾಟಕ ತಂಡ ಬಂತು ಹೋಯಿತು. ಅವರ ಮಹಾಶೋಧನೆಯೆಂದರೆ 'ಬರವಿದೆ ಎಂಬ ಮಹಾವಾಣಿ. ಆದರೇನು? ವಲಸೆ ನಿಂತಿಲ್ಲ.

ರೈತಪ್ರೀತಿಯನ್ನು ಈಗೀಗ ಮುಖ್ಯಮಂತ್ರಿಗಳು ತೋರುತ್ತಿದ್ದರೂ ರೈತರ ಆತ್ಮಹತ್ಯೆಗಳು ನಿಂತಿಲ್ಲ. ಹಸಿವಿನ ಹಾಹಾಕಾರ ಕೊನೆಯಾಗಲಿಲ್ಲ. ಇಂದು ಮಳೆ ಆಗಿದೆ ಬೀಜವನ್ನಾದರೂ ಬಿತ್ತೋಣ ಎಂದರೆ ಬೀಜವೂ ಸಿಗುತ್ತಿಲ್ಲ. ಸಾಲವೂ ಸಿಗುತ್ತಿಲ್ಲ, ಮುಚ್ಚಿಹೋದ ಕೈಗಾರಿಕೆಗಳು ತುಕ್ಕು ಹಿಡಿಯುತ್ತಿವೆ. ಕಾರ್ಮಿಕರ ಬದುಕು ಮಣ್ಣುಗೂಡಾಗುತ್ತಿದೆ.

ಜನರಲ್ಲಿ ಹತಾಶೆ, ಮೌಢ್ಯತೆಗಳು, ಆದರೂ ಬದುಕು ಸಾಗಿಸುವ ದಬಾವಣೆ. ನಿಲ್ಲದ ನಿಟ್ಟುಸಿರು ಇದು ಎಲ್ಲಾ ವಿಭಾಗಗಳಲ್ಲಿಯೂ.

ಇಂತಹ ಸಂದರ್ಭದಲ್ಲಿ ಸಿಪಿಐ(ಎಂ) ನ ಜನಾಂದೋಲನದ ಜಾಥಾಗಳು ನಾಡಿನ ತುಂಬಾ ನಡಿಗೆ ಆರಂಭಿಸಿವೆ. ದುಡಿವ ಜನತೆಯ ಬದುಕು - ಬವಣೆ ಅರಿಯುತ್ತಾ, ಸಂಕಟಗಳ ಈ ಸಾಗರದ ಭಾರತ- ನಲುಗುವ ಜೀವನದ ಸ್ಥಿತಿಗೆ ಮೂಲ ಕಾರಣಗಳನ್ನು ಬಿಚ್ಚಿಡುತ್ತಾ ಆತ್ಮಹತ್ಯೆಯನ್ನು ತಿರಸ್ಕರಿಸಿ ಆತ್ಮವಿಶ್ವಾಸ ಮೂಡಿಸುತ್ತಿವೆ.


ದೊರೆತ ವರದಿಗಳಂತೆ ಜನರದ್ದು ಅಪೂರ್ವ ಸ್ಪಂದನ. ಕಾಂಗ್ರೆಸ್- ಬಿಜೆಪಿಗಳ ಠಕ್ಕು ಮಾತುಗಳನ್ನು ಸಮಾರಂಭದಲ್ಲಿ, ನಡೆಯುವ ನಾಟಕಗಳಲ್ಲಿ ಜನರು ಸಿಪಿಐ(ಎಂ) ಹೇಳುತ್ತಿರುವ ನಿತ್ಯ ನಿಜ ಕಾಳಜಿಯನ್ನು ಗುರುತಿಸುತ್ತಿದ್ದಾರೆ.

ಈ ವಾರದಲ್ಲಿ ಆರಂಭಗೊಂಡ ಪ್ರಾದೇಶಿಕ ಜಾಥಾಗಳು

ಗುಲಬರ್ಗಾದಲ್ಲಿ 16 ರಂದು ಸುಪರ್ ಬಜಾರ್‌ನಲ್ಲಿ ಸಿಪಿಐ(ಎಂ) ರಾಜ್ಯ ಸೆಕ್ರಾಟರಿಯೇಟ್ ಸದಸ್ಯರಾದ ಮಾರುತಿ ಮಾನ್ಪಡೆ ಉದ್ಘಾಟಿಸಿದ್ದಾರೆ. ರಾಜ್ಯ ಸೆಕ್ರಾಟರಿಯೇಟ್ ಸದಸ್ಯೆ ನೀಲಾ.ಕೆ., ಮೇಘರಾಜ್ ಮುಂತಾದವರು ಮಾತನಾಡಿದ್ದಾರೆ. ಚಿಕ್ಕಮಗಳೂರಿನಿಂದ ಹೊರಟ ಜಾಥಾವನ್ನು 18 ರಂದು ಉದ್ಘಾಟನೆ ಮಾಡಿದವರು ಮಾಜಿ ಶಾಸಕರೂ, ರಾಜ್ಯ ಸಮಿತಿ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿಯವರು, ರಾಜ್ಯಸಮಿತಿ ಸದಸ್ಯ, ಮಲೆನಾಡು ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ವಿ.ಸುಕುಮಾರ್ ಮುಂತಾದವರಿದ್ದರಲ್ಲದೆ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಹಾಸನದಿಂದ ಕೋಲಾರದವರೆಗೆ ಜಾಥಾದಲ್ಲಿ ಭಾಗಿಯಾಗಿದ್ದಾರೆ.

21 ರಂದು ದಾಂಡೇಲಿಯಿಂದ ಹೊರಟಿದ್ದ ಜಾಥಾವನ್ನು ಸೆಕ್ರೆಟಾರಿಯೇಟ್ ಸದಸ್ಯರಾದ ನಿತ್ಯಾನಂದ ಸ್ವಾಮಿ ಉದ್ಘಾಟಿಸಿದ್ದಾರೆ.

ಇನ್ನು ಕಾರವಾರದ ಜಾಥಾ 24 ರಂದು ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಬಿ.ಮಾಧವರಿಂದ ಉದ್ಘಾಟನೆ. ಹೀಗೆ ನಾಡಿನ ತುಂಬಾ ಜನರ ನಡುವೆ ಯಶಸ್ವಿ ಜಾಥಾಗಳು ಹೊರಟಿವೆ, ಜನರಲ್ಲಿ ಜಾಗೃತಿ ಮೂಡಿಸುತ್ತಿವೆ. ಸೆಪ್ಟೆಂಬರ್ 9ರ ಬೃಹತ್ ರ‍್ಯಾಲಿಗೆ ಜನತೆಯನ್ನು ಅಣಿನೆರೆಸಲಿವೆ.



ಸಾಂತ್ವನದ ನಾಟಕ

ಕಲ್ಲಡ್ಕ: ಬಿಜೆಪಿ ರಾಜಕೀಯಕ್ಕೆ ಬಲಿ

ದ.ಕ.ದ ಕಲ್ಲಡ್ಕದಲ್ಲಿನ್ನೂ ಶಾಂತಿ ನೆಲೆಗೊಂಡಿಲ್ಲ. ಬಿಜೆಪಿ-ಸಂಘ ಪರಿವಾರದ ಹಲವಾರು ಷಡ್ಯಂತ್ರಗಳು ಬಯಲಾಗುತ್ತಲೇ, ಮುಖ ಉಳಿಸಿಕೊಳ್ಳಲು ಅಪಾಯಕಾರಿ ಆಟಕ್ಕೆ ಇಳಿದಿದೆ. ಅಮಾಯಕ ವೃದ್ಧ ಇಸುಬುವಿನ ಕೊಲೆ! ಪ್ರಸ್ತುತ ವಿದ್ಯಮಾನಗಳತ್ತ ಈ ವರದಿ...

ಆಗಸ್ಟ್ ರಂದು ರಾತ್ರಿ 9 ಗಂಟೆಗೆ ಮಂಗಳೂರಿನ ಕಲ್ಲಟ್ಕದಲ್ಲಿ ಓರ್ವ ಅಮಾಯಕ ಸೈಕಲ್ ರಿಪೇರಿ ಅಂಗಡಿ ಮಾಲಿಕ ಇಸುಬುರವರ ಕೊಲೆಯೊಂದಿಗೆ ಕಲ್ಲಡ್ಕದಿಂದ ಬಿಜೆಪಿ ಪ್ರಾರಂಭಿಸಬೇಕೆಂದಿರುವ ಗುಜರಾತ್ ಮಾದರಿಗೆ ಪ್ರಥಮ ಬಲಿಯಾಯಿತು. ಈಗಾಗಲೇ ಈ ಪತ್ರಿಕೆಯಲ್ಲಿ ವರದಿಯಾದಂತೆ ಎರಡು ಅಲ್ಪ ಸಂಖ್ಯಾತ ಸಮುದಾಯದ ನಾಯಕರ ಕೊಲೆ ಸಂಚು ವಿಫಲಗೊಂಡ ಮೇಲೆ ಒಂದೇ ಸವನೆ ಜಿಲ್ಲಾ ಪೋಲೀಸು ಅಧಿಕಾರಿ ಸೀಮಂತ್ ಸಿಂಗ್‌ರವರ ಮೇಲೆ ಅಶ್ಲೀಲ, ಅವಾಚ್ಯ ಮಾತುಗಳಿಂದ ಮೂದಲಿಸುತ್ತಿರುವ ಭಾರತೀಯ ಸಂಸ್ಕೃತಿಯ ಗುತ್ತಿಗೆದಾರರು ಹೇಗಾದರೂ ಮಾಡಿ ಕೋಮುದಳ್ಳುರಿ ಪ್ರಾರಂಭವಾಗಬೇಕೆಂದು ಮಾಸ್ಟರ್ ಪ್ಲ್ಯಾನ್ ಮಾಡಿದ್ದರು. ಇಸುಬುರವರ ಕೊಲೆ ಈ ಉದ್ದೇಶದಿಂದಲೇ ನಡೆಯಿತು. ಆದರೆ ಈ ಕೊಲೆ ನಡೆದ ಅರ್ಧ ತಾಸಿನಲ್ಲೇ ಕಲ್ಲಡ್ಕ ತಲುಪಿದ ಎಸ್.ಪಿ.ಯವರು ಆದಾಗಲೇ ಜಮಾಯಿಸಿದ ಅಲ್ಪಸಂಖ್ಯಾತ ಸಮುದಾಯದವರನ್ನು ಸ್ಥಳದಿಂದ ಚದುರಬೇಕೆಂದು ವಿನಂತಿಸಿಕೊಂಡು ಬೃಹತ್ ಪ್ರಮಾಣದಲ್ಲಿ ಪೋಲೀಸ್ ರಕ್ಷಣೆ ನೀಡಿ ಯಾವುದೇ ಅಹಿತಕರ ಘಟನೆ ನಡೆಯಲು ಬಿಡಲಿಲ್ಲ. ಕಲ್ಲಡ್ಕದಲ್ಲಿ ನಾಲ್ಕೈದು ದಿನ ಸ್ಮಶಾನ ಮೌನ. ಮನಸ್ಸು ಮಾಡಿದ್ದೇ ಆದಲ್ಲಿ ಕೋಮುಗಲಭೆಯನ್ನು ಯಾವ ರೀತಿ ನಡೆಯದಂತೆ ತಡೆಯಬಹುದೆಂಬುದಕ್ಕೆ ಇಸುಬುರವರ ಕೊಲೆಗೆ ಸಂಬಂಧಿಸಿ ಪೋಲೀಸರ ಕ್ರಿಯಾಶೀಲತೆಯೇ ಉಜ್ವಲ ಉದಾಹರಣೆಯಾಗಿದೆ.

ಇಸುಬುರವರ ಕೊಲೆಗೆ ಸಂಬಂಧಿಸಿ ಟೈಲ್ ಫ್ಯಾಕ್ಟರಿಯ ಮಾಲೀಕ ಹಾಗೂ ಆರ್.ಎಸ್.ಎಸ್. ಸಂಯೋಜಿತ ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಾಜಿ,ರವರಲ್ಲದೆ ವಸಂತ ಎಂಬುವವರನ್ನು ಬಂಧಿಸಲಾಗಿದೆ. ಸ್ಥಳೀಯ ಬಾರ್‌ನ ಮಾಲಿಕ ಹಾಗೂ ಆರ್.ಎಸ್.ಎಸ್ ಒಲವಿನ ರತ್ನಾಕರ ಶೆಟ್ಟಿ ಮತ್ತು ಬಿ.ಜೆ.ಪಿ.ಯ ಜಿಲ್ಲಾ ಪಂಚಾಯತ್ ಸದಸ್ಯ ಕೆ.ಪದ್ಮನಾಭ ಕೊಟ್ಟರಿ (ಈ ಮೊದಲಿನ ಪ್ರಕರಣದಲ್ಲೂ ಆರೋಪಿ) ಮೊದಲಾದವರು ಕೊಲೆಗೆ ಪ್ರಚೋದನೆ ನೀಡಿದ ಬಗ್ಗೆ ಕೇಸು ದಾಖಲಿಸಲಾಗಿದೆ. ನೇರವಾಗಿ ಭಾಗಿಯಾದ ಆರೋಪಿಗಳ ಬಂಧನ ಇನ್ನಷ್ಟೇ ಆಗಬೇಕಾಗಿದೆ.

ಬಿಜೆಪಿಯ ಜಿಲ್ಲಾಮಟ್ಟದ ಪ್ರತಿಭಟನೆ

ಕಲ್ಲಡ್ಕದಲ್ಲಿ ಕೊಲೆಗಾಗಿ ಸೇರಿದ್ದ ಆರೋಪಿಗಳನ್ನು ಬಂಧಿಸಿದ್ದನ್ನು ಪೋಲೀಸ್ ದೌರ್ಜನ್ಯವೆಂದು ಚಿತ್ರಿಸಿ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಪಡೆದುಕೊಂಡ ಸಂಘ ಪರಿವಾರ ಮೂರು ವಿಧದ ಪ್ರತಿಭಟನೆ ನಡೆಸಿತು. ಕಲ್ಲಡ್ಕದ ದೌರ್ಜನ್ಯಕ್ಕೊಳಗಾದ ಮನೆಯ ಮಹಿಳೆಯರಿಂದ ಜಿಲ್ಲಾಧಿಕಾರಿ ಎದುರು ಪ್ರತಿಭಟನೆ ಎಂದು ಹೇಳಿ ಸುಮಾರು 1000 ದಷ್ಟು ಮಹಿಳೆಯರನ್ನು ಸೇರಿಸಿ ಬಿಜೆಪಿ ಮತ್ತು ಸಂಘ ಪರಿವಾರದ ನಾಯಕರು ಕೋಮು ಪ್ರಚೋದಕ ಭಾಷಣ ಮಾಡಿದರು. ಇದಾದ ನಂತರ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲೂ ಎಸ್.ಪಿ.ಯವರ ವಜಾ ಒತ್ತಾಯಿಸಿ ಧರಣಿ ಸಂಘಟಿಸಿತು. ಕೊನೆಯದಾಗಿ ಆಗಸ್ಟ್ 14 ರಂದು ಮಂಗಳೂರಿನಲ್ಲಿ ಎಸ್.ಪಿ.ಯವರ ವಜಾಕ್ಕೆ ಒತ್ತಾಯಿಸಿ ಬೃಹತ್ ಪ್ರತಿಭಟನೆಗೆ ಕರೆ ನೀಡಿದ್ದು 15 ಸಾವಿರ ಜನ ಭಾಗವಹಿಸಲಿದ್ದಾರೆಂದು ಅಬ್ಬರದ ಪ್ರಚಾರ ನಡೆಸಿತು. ಬೃಹತ್ ಗಾತ್ರದ ಪೋಸ್ಟರ್ ವೊಂದನ್ನು ಮಾಡಿ ಪೋಲಿಸು ಅಧಿಕಾರಿಯನ್ನು ಭಯಾನಕವಾಗಿ ಚಿತ್ರಿಸಿತು. ಮಾತ್ರವಲ್ಲ ಪ್ರಚೋಧನಾಕಾರಿಯಾದ ಬರಹಗಳನ್ನು ಅದು ಒಳಗೊಂಡಿತ್ತು. ನಿರೀಕ್ಷೆಯಂತೆ ಜನ ಸೇರಿಸುವಲ್ಲಿ ವಿಫಲರಾದ ಬಿಜೆಪಿ ಪರಿವಾರ ಕೇವಲ 6 ಸಾವಿರದಷ್ಟು ಮಾತ್ರ ಜನರಿದ್ದರು. ಆದರೆ ಪೋಲೀಸ್ ಇಲಾಖೆ ಹಿಂದೆಂದೂ ಕಂಡರಿಯದಂತಹ ಭದ್ರತೆ ರೂಪಿಸಿ ಸವಾಲಾಗಿ ನಿಂತರು. ಅನಂತ್‌ಕುಮಾರ್, ಯಡಿಯೂರಪ್ಪ, ಧನಂಜಯ ಕುಮಾರ್ ಮೊದಲಾದ ಬಿಜೆಪಿ ನಾಯಕರು ಭಾಷಣ ಮಾಡಿದ ಶೈಲಿಯಂತೂ ಕೆಟ್ಟದ್ದಾಗಿತ್ತು. ಎಸ್.ಪಿ.ಯವರ ವಿರುದ್ಧ, ಮುಸ್ಲಿಂ ಮತಸ್ಥರ ವಿರುದ್ಧ ಹಾಗೂ ಕಾಂಗ್ರೆ ನಾಯಕರ ವಿರುದ್ಧ ಅಸೂಯೆ ದ್ವೇಷಪೂರಿತ ಭಾಷಣ ಮಾಡಿದರು. ಆಗಸ್ಟ್ 26 ರ ಒಳಗೆ ಎಸ್.ಪಿ.ಯವರ ವರ್ಗ ವಜಾ ಆಗದಿದ್ದಲ್ಲಿ ಜಿಲ್ಲಾ ಬಂದ್ ನಡೆಸುವ ಬೆದರಿಕೆಯೊಡ್ಡಿದ್ದಾರೆ.

ನಿದ್ದೆಯಿಂದ ಎದ್ದ ಉಸ್ತುವಾರಿ ಸಚಿವರು

ಕೊನೆಗೂ ಉಸ್ತುವಾರಿ ಸಚಿವರಿಗೆ ಓಟ್‌ಬ್ಯಾಂಕ್ ರಾಜಕೀಯದಿಂದ ಕಿರಿಕಿರಿಯಾಗಿ ಬಹಿರಂಗ ಪತ್ರಿಕಾ ಹೇಳಿಕೆಯೊಂದನ್ನು ನೀಡಿ ಎಸ್.ಪಿ.ಯವರ ವಜಾ ಸಾಧ್ಯವಿಲ್ಲವೆಂದು ಹೇಳಿ ಬಿಜೆಪಿಯ ಎಲ್ಲಾ ಸವಾಲು ಸ್ವೀಕರಿಸುತ್ತೇನೆಂದು ಪತ್ರಿಕಾ ಗೋಷ್ಠಿಯಲ್ಲಿ ಸಾರಿದ್ದಾರೆ. ಇನ್ನು ಕ್ರಿಯೆಗೆ ಇಳಿಯುವುದನ್ನು ಕಾದು ನೋಡಬೇಕು.

ಎಸ್.ಪಿ. ಮತ್ತು ಡಿ.ಐ.ಜಿ.ಯವರ ಬಳಿಗೆ ಸಿ.ಪಿ.ಐ(ಎಂ) ನಿಯೋಗ

ಒಂದೇ ಸವನೆ ಬಿಜೆಪಿಯ ಧಾಳಿಗೊಳಗಾಗಿರುವ ಎಸ್.ಪಿ.ಸೀಮಂತ್ ಸಿಂಗ್‌ರವರ ಬಳಿ ಸಿಪಿಐ(ಎಂ) ಪಕ್ಷದ ನಿಯೋಗವೊಂದು ಭೇಟಿ ನೀಡಿ ಕಲ್ಲಡ್ಕದ ಘಟನೆಗೆ ಸಂಬಂಧಿಸಿ ಎಸ್.ಪಿ.ಯವರಿಗೆ ಬೆಂಬಲ ನೀಡುವುದಾಗಿ ಘೋಷಿಸಲಾಯಿತು. ಕಲ್ಲಡ್ಕದಲ್ಲಿ ಆರ್.ಎಸ್.ಎಸ್.ನವರು ಮೂವತ್ತು ವರ್ಷಗಳಿಂದ ಸಾಮ್ರಾಜ್ಯ ರೂಪಿಸಿ ಅಲ್ಪಸಂಖ್ಯಾತರರು ಭಯದಿಂದ ಬದುಕುವಂತೆ ಮಾಡಿದ್ದು ಅವರ ಕೋಮು ರಾಜಕೀಯಕ್ಕೆ ತಡೆಯಾದಾಗ ಪೋಲೀಸರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ಸಿಪಿಐ(ಎಂ) ನ ಮನವಿಯಲ್ಲಿ ವಿವರಿಸಲಾಗಿತ್ತು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್. ಶ್ರೀಯಾನ್, ಬಿ.ಮಾಧವ, ಕೆ.ಯಾದವ ಶೆಟ್ಟಿ ಅಲ್ಲದೆ ಕೃಷ್ಣಪ್ಪ ಕೊಂಚಾಡಿ ಮತ್ತು ನಾಗೇಶ್ ಕುಮಾರ್‌ರವರು ಇದ್ದರು.

ಜನಾರ್ಧನ ಪೂಜಾರಿಯವರ ಮಾಮೂಲಿ ರಾಜಕೀಯ

'ಕೂಗಾಟದ ರಾಜಕೀಯಕ್ಕೆ ಹೆಸರಾದ ಪ್ರಸ್ತುತ ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಬಿ.ಜನಾರ್ಧನ ಪೂಜಾರಿಯವರು ಮೃತ ಇಸುಬುರವರ ಮನೆಗೆ ತನ್ನ ಪರಿವಾರದೊಂದಿಗೆ ಧಾವಿಸಿ " ಒಂದು ಲಕ್ಷ ರೂಪಾಯಿ"ಯ ಪರಿಹಾರ ಘೋಷಿಸಿದ್ದಾರೆ. ಕೋಮು ದ್ವೇಷ ಹೊಗೆಯಾಡುತ್ತಿರುವಾಗ ಹಿಂದೂ ಓಟ್ ಬ್ಯಾಂಕ್ ತನ್ನ "ಕೈ" ಗೆ ಮುಳುವಾಗಬಾರದೆಂದು ನಿರ್ಲಪ್ತತೆಯಿಂದ ಇದ್ದ ಕಾಂಗ್ರೆ "ಕೊಲೆಯಾಗುವುದನ್ನೆ" ಕಾದು ಕುಳಿತ್ತಿತ್ತೊ ಎಂಬ ಗುಮಾನಿ ಬರುತ್ತಿದೆ. ಕೋಮುವಾದವನ್ನು ಒಂದಲ್ಲ ಒಂದು ರೀತಿಯಲ್ಲಿ ಬೆಳೆಯಲು ಪ್ರೋತ್ಸಾಹಿಸುತ್ತಿರುವ ಕಾಂಗ್ರೆ ' ಜಬ್ಬಾರ್ ಹತ್ಯೆಯ" ಸಂದರ್ಭದಲ್ಲಿ ಮಾಡಿರುವುದು ಕೇವಲ 1 ಲಕ್ಷ ರೂಪಾಯಿ ಪರಿಹಾರ ಇಲ್ಲೂ ಇದೇ ಮೊತ್ತದ ಪರಿಹಾರ ಹೇಗಿದೆ ಪೂಜಾರಿಯವರು ಕೋಮುವಾದವನ್ನು ಎದುರಿಸುವ ಪರಿ.

ವರದಿಗಾರ, ಮಂಗಳೂರು



ಮಾರಾಕಾಯುಧಗಳೊಂದಿಗೆ ಸಿಕ್ಕಿಬಿದ್ದ ಕೋಮುವಾದಿಗಳು

ಕೋಕಾಕೋಲಾ – ಪೋಲಾ ಪೋಲಾ : ಪೆಪ್ಸಿ ಪೇಯ ಮುಲ್ತು ಪೋಯ

ಪೆಪ್ಸಿ-ಕೋಕಾಕೋಲ ಪಾನೀಯಗಳಲ್ಲಿ ವಿಷಯುಕ್ತ ಕೀಟನಾಶಕ ಅಂಶ ಕಂಡು ಬಂದಿರುವ ಹಿನ್ನೆಲೆಯಲ್ಲಿ, ಈ ಪಾನೀಯಗಳನ್ನು ಕೂಡಲೇ ನಿಷೇಧಿಸಬೇಕೆಂದು ಒತ್ತಾಯಿಸಿ, ಡಿ.ವೈ.ಎಫ್.ಐ ಕಾರ್ಯಕರ್ತರು ಮಂಗಳೂರಿನಲ್ಲಿ ವಿನೂತನ ಶೈಲಿಯ ಪ್ರತಿಭಟನೆ ನಡೆಸಿದರು.

ಡಿ.ವೈ.ಎಫ್.ಐ ನಗರ ಸಮಿತಿ ಆಶ್ರಯದಲ್ಲಿ ಜರುಗಿದ ಪ್ರತಿಭಟನೆಯ ಪ್ರಾರಂಭದಲ್ಲಿ ನೂರಾರು ಕಾರ್ಯಕರ್ತರ ಆಕರ್ಷಕ ಮೆರವಣಿಗೆ ಸ್ಟೇಟ್‌ಬ್ಯಾಂಕ್‌ನಿಂದ ಹೊರಟು ನಗರದಾದ್ಯಂತ ಸಂಚರಿಸಿತು. ಸಾವಿರಾರು ಕಣ್ಣುಗಳು ಈ ವಿನೂತನ ಶೈಲಿಯ ಹೋರಾಟವನ್ನು ವೀಕ್ಷಿಸಿ ಬೆಂಬಲ ನೀಡಿತು.

ಬೆನ್ನಿಗೆ ಕಾಲ್ಪನಿಕವಾಗಿ ಕಟ್ಟಿಕೊಂಡ ಡಿ.ಡಿ.ಟಿ. ಸಿಂಪಡಿಸುವ ಪುಟ್ಟ ಸಿಲಿಂಡರ್ ರಾಕ್ಷಸರನ್ನು ಹೋಲುವ ಪೆಪ್ಸಿ ಕೋಲಾ-ವಿಶೇಷ ಆಕರ್ಷಣೆಗೊಳಪಟ್ಟರೆ, ಯೆ ದಿಲ್ ನಹೀಂ ಮಾಂಗೇ ಜೆಹರ್, ಕೊಳಚೆಯುಕ್ತ ಪರಿಸರಕ್ಕೆ ಸಿಂಪಡಿಸಿರಿ ಪೆಪ್ಸಿ ಕೋಲಾ, ಕೋಕಾ ಕೋಲಾ ಪೋಲಾ ಪೋಲಾ (ಹೋಗು, ಹೋಗು), ಪೆಪ್ಸಿ ಪೇಯ ಮುಲ್ತು ಪೋಯ (ಇಲ್ಲಿಂದ ಹೋಗು), ಮುಂತಾದ ತುಳು ಮಿಶ್ರಿತ ಫಲಕಗಳು ಜನರ ಗಮನ ಸೆಳೆದವು. 'ಟಾಯ್ಲೆಟ್, ಬಾತ್‌ರೂಂ ಸ್ವಚ್ಛತೆಗಾಗಿ ಉಪಯೋಗಿಸಿರಿ ಪೆಪ್ಸಿ ಕೋಲಾ, ಆರೋಗ್ಯಕ್ಕೆ ಹಾನಿಕಾರವಾದ ಪೆಪ್ಸಿ ಕೋಲಾ ಬೇಡವೇ ಬೇಡ' ಮುಂತಾದ ಘೋಷಣೆಗಳು ಮುಗಿಲು ಮುಟ್ಟಿದವು.

ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್‌ರವರು "ಜಗತ್ತಿನ ಮೇಲೆ ಅಧಿಪತ್ಯ ಸಾಧಿಸಲು ಹೊರಟ ಅಮೇರಿಕಾವು ತನ್ನ ಸರಕು ಸಂಸತಿಯನ್ನು ತೃತೀಯ ಜಗತ್ತಿನ ಮೇಲೆ ಹೊರಿಸಲು ಪೆಪ್ಸಿ ಕೋಲಾವನ್ನು ತನ್ನ ಸಾಧನವನ್ನಾಗಿ ಮಾಡಿದೆ. ಜಾಹೀರಾತಿನ ಮೂಲಕ ಕೋಟಿಗಟ್ಟಲೆ ಹಣ ವ್ಯಯಿಸಿ, ಪೆಪ್ಸಿ ಕೋಲಾವೊಂದೇ ನಮ್ಮ ಜೀವನದ ಅವಿಭಾಜ್ಯ ಅಂಗವೆನ್ನುವಂತೆ ಬಿಂಬಿಸುವ ಮೂಲಕ ಜನತೆಯ ಮನಸ್ಸನ್ನೇ ವಿಕೃತಗೊಳಿಸಲು ಹವಣಿಸುತ್ತಿದೆ. ಈ ಮೂಲಕ ನಮ್ಮನ್ನು ಭಾರತೀಯರನ್ನಾಗಿ ಮಾಡದೆ ಅಮೇರಿಕಾದ ದಾಸರನ್ನಾಗಿ ಮಾಡಲಾಗುತ್ತಿದೆ" ಎಂದು ಅಮೇರಿಕಾದ ವಿರುದ್ಧ ಕಟುವಾಗಿ ಟೀಕಿಸಿದರೆ, ಜಿಲ್ಲಾಧ್ಯಕ್ಷರಾದ ಕೃಷ್ಣಪ್ಪ ಕೊಂಚಾಡಿಯವರು 70ರ ಕಾಲಘಟ್ಟದಲ್ಲಿ ದೇಶದಲ್ಲಿ ನಿಷೇಧಕ್ಕೊಳಗಾಗಿದ್ದ ಪೆಪ್ಸಿಕೋಲಾ ಇಂ[illegible] ರಾಜಾರೋಷವಾಗಿ ಸಮಾಜದಲ್ಲಿ ಮಾರಾಟವಾ[illegible] ಬೇಕಾದರೆ, ಅದರ ಹಿಂದಿರುವ ಕೇಂದ್ರದ ಆಳು[illegible] ವರ್ಗಗಳ ಪಿತೂರಿಯನ್ನು ಬಯಲಿಗೆಳೆ[illegible] ಬೇಕಾಗಿದೆ" ಎಂದು ಕೇಂದ್ರ ಸರ್ಕಾರದ ವಿರು[illegible] ಕಿಡಿಕಾರಿದರು.

ಸಿಪಿಐ(ಎಂ) ಮುಖಂಡರಾದ ಯಾದವ[illegible] ಯವರು "ರಾಜ್ಯ ಸರ್ಕಾರವು ಈ ಮೊದ[illegible] ಉಚಿತವಾಗಿ ಎಕರೆಗಟ್ಟಲೆ ಭೂಮಿಯನ್ನು ಹಾ[illegible] ತೆರಿಗೆಯನ್ನು ವಿನಾಯಿತಿ ಮಾಡುವ ಮೂಲ[illegible] ಬಹುರಾಷ್ಟ್ರೀಯ ಕಂಪೆನಿಗಳಿಗೆ ಹಸೆಮಣೆಹಾ[illegible] ಆದರೆ ಈಗ ನಿಷೇದಿಸಬೇಕೆಂಬ [illegible] ನಾಟಕವನ್ನಾಡುತ್ತಿದೆ" ಎಂದು ವ್ಯಂಗ್ಯವಾಡಿ[illegible]

ಪುಟ

ಅವಿಶ್ವಾಸ ನಿರ್ಣಯ

ಪ್ರಧಾನಿಗಳ ಬೂಟಾಟಿಕೆ ಮತ್ತು ಕಪಟತನ

ಬೂಟಾಟಿಕೆ ಮತ್ತು ಕೃತಕ ಆಡಂಬರ ಮಾತುಗಳೇ - ಸಂಘ ಪರಿವಾರ- ಬಿಜೆಪಿಗಳ ಜೀವಾಳ. ಅವಿಶ್ವಾಸ ನಿರ್ಣಯದ ಸಂದರ್ಭದಲ್ಲಿ ಪ್ರಧಾನಿಗಳು ಯಾವೊಂದು ಪ್ರಶ್ನೆಗೂ ನಿಖರ ಉತ್ತರ ನೀಡದೇ ಕಪಟತನ ತೋರಿದರು.

ಅವಿಶ್ವಾಸ ನಿರ್ಣಯದ ಮತದಾನದಲ್ಲಿ ಭಾಜಪ ನೇತೃತ್ವದ ವಾಜಪೇಯಿ ಸರ್ಕಾರ ಗೆಲುವನ್ನು ಸಾಧಿಸಿರಬಹುದು. ಆದರೆ ತನ್ನ ಪ್ರತಿಷ್ಠೆ ಹಾಗೂ ಗೌರವಗಳೆರಡನ್ನೂ ಅದು ಕಳೆದುಕೊಂಡಿದೆ. ದೇಶದ ಹಾಗೂ ಜನತೆಯ ಬದುಕನ್ನು ತಟ್ಟುವ ಬಹುಮುಖ್ಯ ವಿಷಯಗಳನ್ನು ವಿರೋಧ ಪಕ್ಷಗಳು ಪ್ರಸ್ತಾಪಿಸಿದ್ದವು ಸ್ವತಃ ಪ್ರಧಾನಿಯವರು ಕೂಡಾ ಆ ವಿಷಯಗಳ ಗೋಜಿಗೇ ಹೋಗಲಿಲ್ಲ. ಒಬ್ಬ ಕಟ್ಟಾ ಪ್ರಚಾರಕನ ದಾಟಿಯಲ್ಲೇ ಮಾತನಾಡುತ್ತಾ(1951ರಲ್ಲಿ ಆರ್.ಎಸ್.ಎಸ್.ನ ರಾಜಕೀಯ ಅಂಗವಾಗಿ ಭಾರತೀಯ ಜನ ಸಂಘವನ್ನು ರೂಪಿಸಲೋಸುಗ ಅವರನ್ನು ಗೋಲ್ವಾಲ್ಕರ್ ಕಳುಹಿಸಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು) ಪ್ರಧಾನ ಮಂತ್ರಿ ವಾಜಪೇಯಿಯವರು ವಿರೋಧ ಪಕ್ಷಗಳು ಪ್ರಸ್ತಾಪಿಸಿದ ಪ್ರಮುಖ ವಿಷಯಗಳನ್ನೆಲ್ಲಾ ಬದಿಗೆ ಸರಿಸುವ ವಿಫಲ ಪ್ರಯತ್ನ ನಡೆಸಿದರು. ಜನರ ಬವಣೆಗಳು ಮತ್ತು ದೇಶದ ಹಿರಿಮೆಯ ಬಗ್ಗೆ ಈ ಸರ್ಕಾರದ ನಿಷ್ಕಾಳಜಿ ಎಷ್ಟಿದೆಯೆಂದರೆ, ದೇಶ ಮತ್ತು ಜನರನ್ನು ಕಂಗೆಡಿಸುತ್ತಿರುವ ಪ್ರಮುಖ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳುವುದಕ್ಕೂ ಅದು ನಿರಾಕರಿಸುತ್ತದೆ.

ಬೂಟಾಟಿಕೆ

ದೇಶದ ಮೂರನೇ ಎರಡು ಭಾಗದಷ್ಟು ಜನತೆಗೆ ಆಸರೆಯನ್ನಿತ್ತಿರುವ ಕೃಷಿ ಕ್ಷೇತ್ರ ಹಾಗೂ ರೈತಾಪಿಜನ, ಸ್ವಾತಂತ್ರ್ಯ ಬಂದು 56 ವರ್ಷಗಳಾದ ನಂತರವೂ, ಅತ್ಯಂತ ಕಳವಳಕಾರಿ ಬಿಕ್ಕಟ್ಟನ್ನು ಎದುರಿಸುತ್ತಿರುವುದರ ಬಗ್ಗೆ ಪ್ರಧಾನಿಯವರು ಮೌನವಾಗಿದ್ದರು. ಕಳೆದ ಸಾಲಿನಲ್ಲಿ ಆಹಾರ ಉತ್ಪಾದನೆಯಲ್ಲಿ ಶೇ. 14 ರಷ್ಟು ತೀವ್ರ ಕುಸಿತ ಉಂಟಾಗಿದೆ. ಆಹಾರ ಧಾನ್ಯಗಳ ತಲಾವಾರು ಲಭ್ಯತೆ (ಬಳಕೆಯಲ್ಲ!) ಎರಡನೇ ಮಹಾಯುದ್ಧದ ಕಾಲಘಟ್ಟದಲ್ಲಿ, ಅಂದರೆ ಸುಮಾರು 60 ವರ್ಷಗಳ ಹಿಂದೆ ಇದ್ದುದಕ್ಕಿಂತಲೂ ಇಂದು ಕಡಿಮೆಯಾಗಿದೆ. ಈ ಸರ್ಕಾರ ಗೋರಕ್ಷಣೆಯ ಬಗ್ಗೆ ಕಪಟ ಕಳಕಳಿ ತೋರಿಸುತ್ತಲೇ, ಜಾನುವಾರು ಆಧಾರಿತ ಹೈನುಗಾರಿಕಾ ಉದ್ಯಮದ ಅವನತಿಗೆ ಕಾರಣವಾಗುವ ನೀತಿಗಳನ್ನು ಜಾರಿಗೆ ತರುತ್ತಿದೆ. ಹಾಲಿನ ಉತ್ಪನ್ನ ಹಾಗೂ ಉಪ ಉತ್ಪನ್ನಗಳೆಲ್ಲವನ್ನೂ ಅತ್ಯಂತ ಹೆಚ್ಚು ಸಹಾಯಧನ ನೀಡುತ್ತಿರುವ ಪಾಶ್ಚಿಮಾತ್ಯ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

ಹೈನುಗಾರಿಕಾ ಉದ್ಯಮವನ್ನು ಪೋಷಿಸಿ ಬೆಳೆಸುವ ನೀತಿಗಳನ್ನು ಕೈಗೊಳ್ಳದೇ ಹೋದಲ್ಲಿ, ಗೋರಕ್ಷಣೆಯ ಮಾತು ಬರಿಯ ಬೂಟಾಟಿಕೆ ಮಾತ್ರವಾಗುತ್ತದೆ. ವಾಸ್ತವವಾಗಿ, ಇಂತಹ ಬೂಟಾಟಿಕೆ ಮತ್ತು ಕೃತಕ ಆಡಂಬರದ ಮಾತುಗಳೇ ಆರ್.ಎಸ್.ಎಸ್. ಭಾಜಪ ಇತ್ಯಾದಿಗಳಿಗೆ ಜೀವಾಳ, ಗೋರಕ್ಷಣೆಯ ಮಾತುಗಳು ಏನಿದ್ದರೂ ಸಹ ಕೋಮುಭಾವನೆಗಳನ್ನು ಕೆರಳಿಸಿ ರಾಜಕೀಯ ಲಾಭವನ್ನು ಪಡೆಯುವುದಕ್ಕೆ ಮಾತ್ರ. ಈ ನಡುವೆ ... ಪ್ರಾಣಿಗಳು ದಾರುಣಾವಸ್ಥೆಯಲ್ಲಿ ... ಗೀಡಾದರೂ ಚಿಂತೆಯಿಲ್ಲ.

ಎಲ್ಲಿದೆ ನಿಜ ಕಾಳಜಿ?

ಈ ಸರ್ಕಾರಕ್ಕೆ, ಭಾರತದ ಕೋಟ್ಯಾಂತರ ಯುವಕರು ಉದ್ಯೋಗವಿಲ್ಲದೆ ಅಲೆಯುತ್ತಿರುವುದರ ಬಗ್ಗೆಯೂ ಕಳಕಳಿ ಕಂಡುಬರಲಿಲ್ಲ. ಯುವ ಜನತೆಯ ಶಕ್ತಿ ಸಾಮರ್ಥ್ಯಗಳನ್ನು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸುವ ಅವಕಾಶಗಳೇ ಇಲ್ಲವಾಗಿ, ಸಮಾಜ ವಿರೋಧಿ ಹಾಗೂ ಅಪರಾಧಿ ಶಕ್ತಿಗಳ ತೆಕ್ಕೆಗೆ ಅವರನ್ನು ದೂಡಲಾಗುತ್ತಿದೆ. ವರ್ಷಕ್ಕೆ ಒಂದು ಕೋಟಿ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಸ್ವತಃ ವಾಜಪೇಯಿಯವರೇ ನೀಡಿದ್ದ ಚುನಾವಣಾ ಭರವಸೆಗಳು ಒತ್ತಟ್ಟಿಗಿರಲಿ. ಈ ಸರ್ಕಾರ ಅನುಸರಿಸುತ್ತಿರುವ ನೀತಿಗಳು ಎಷ್ಟು ಕೆಟ್ಟದ್ದಾಗಿವೆಯೆಂದರೆ, ಉದ್ಯೋಗಸ್ಥರೂ ಕೂಡಾ ಬೀದಿಪಾಲಾಗಿ, ನಿರುದ್ಯೋಗಿಗಳ ಪಡೆಗೆ ಸೇರ್ಪಡೆಯಾಗುತ್ತಿದ್ದಾರೆ. ಅತ್ಯಂತ ಬೇಜವಾಬ್ದಾರಿ ಖಾಸಗೀಕರಣದ ನೀತಿಗಳೇ ಇದಕ್ಕೆ ಕಾರಣ.

ಭ್ರಷ್ಟತೆ ಉತ್ತುಂಗ

ವಾಜಪೇಯಿ ನೇತೃತ್ವದ ಆಡಳಿತ ನಿರ್ವಹಣೆಯಲ್ಲಿ ರಾಜಕೀಯ ನೈತಿಕತೆ ತೀವ್ರ ಮಟ್ಟದಲ್ಲಿ ಕುಸಿಯುತ್ತಿರುವುದರ ಬಗ್ಗೆಯೂ ಕಳಕಳಿ ವ್ಯಕ್ತವಾಗಲಿಲ್ಲ. ಭ್ರಷ್ಟಾಚಾರ ಉತ್ತುಂಗಕ್ಕೇರಿರು ವುದರ ಬಗ್ಗೆ ಅಥವಾ ಹೊಣೆಗಾರಿಕೆ ರಹಿತ ಮತ್ತು ಪಾರದರ್ಶಕತೆ ಇಲ್ಲದ ಆಡಳಿತ ನಿರ್ವಹಣೆಯ ಬಗ್ಗೆಯಂತೂ ಕಿಂಚಿತ್ತೂ ಕಾಳಜಿ ಕಾಣಲಿಲ್ಲ. ಕಾಳಜಿ ಏಕಿಲ್ಲವೆಂದರೆ, ಸಾಂಸದಿಕ ಪ್ರಜಾಪ್ರಭುತ್ವದ ಇಂತಹ ಅಧಃಪತನವನ್ನೇ ವಾಜಪೇಯಿ ನೇತೃತ್ವದಲ್ಲಿ ಆರ್‌ಎಸ್‌ಎಸ್ ಭಾಜಪಗಳು ಬಯಸುತ್ತವೆ. ಈ ವ್ಯವಸ್ಥೆ ಎಷ್ಟು ತೀವ್ರವಾಗಿ ಕಳಂಕಿತಗೊಳ್ಳುತ್ತದೋ, ಅಷ್ಟೇ ಹೆಚ್ಚಾಗಿ ಭಾರತೀಯ ಗಣತಂತ್ರದ ಧರ್ಮ ನಿರಪೇಕ್ಷ ಪ್ರಜಾಪ್ರಭುತ್ವವಾದಿ ಲಕ್ಷಣಗಳನ್ನು ಆರ್‌ಎಸ್‌ಎಸ್ ಶೈಲಿಯ ನಿರಂಕುಶ 'ಹಿಂದೂರಾಷ್ಟ್ರ'ವನ್ನಾಗಿ ಪರಿವರ್ತಿಸುವ ಅವರ ಪ್ರಯತ್ನಗಳಿಗೆ ಇಂಬು ಸಿಗುತ್ತದೆ. ಆ ಕಾರಣದಿಂದಾಗಿ ತನ್ನ ಪಕ್ಷ ಸಾಂವಿಧಾನಿಕ ಅಧಿಕಾರದ ಪ್ರತಿಯೊಂದು ಅಂಗದ ಚುನಾವಣಾ ಆಯೋಗ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ಕೆಲವೊಂದು ಸಂದರ್ಭಗಳಲ್ಲಿ ಸರ್ವೋಚ್ಚ ನ್ಯಾಯಾಲಯ, ಸಂಸದೀಯ ಸಮಿತಿಗಳು-ವಿರುದ್ಧ ಸೆಣಸಬೇಕಾಗಿರುವುದು ಏಕೆ ಎಂಬುದನ್ನು ವಿವರಿಸುವ ಪ್ರಯತ್ನವನ್ನೇ ಪ್ರಧಾನಿಯವರು ಮಾಡಲಿಲ್ಲ. ತನ್ನ ಸರ್ಕಾರದ ಉತ್ತರದಾಯಿತ್ವ ದೇಶಕ್ಕಾಗಲೀ, ಜನರಿಗಾಗಲೀ ಅಲ್ಲ, ಕೇವಲ ಆರ್‌ಎಸ್‌ಎಸ್‌ಗೆ ಮತ್ತು ಅದರ ರಾಜಕೀಯ ಕಾರ್ಯಸೂಚಿಯ ಮುಂದುವರಿಕೆಗೆ ಮಾತ್ರ ಎಂಬುದನ್ನು ವಾಜಪೇಯಿ ಸರ್ಕಾರ ನಿಚ್ಚಳವಾಗಿ ರೂಪಿಸಿಬಿಟ್ಟಿತು.

ಕುಟಿಲತೆ

ವಾಜಪೇಯಿಯವರ ಇಬ್ಬಂದಿತನದ ಕುಟಿಲತೆ ಅವಿಶ್ವಾಸ ನಿರ್ಣಯದ ಮೇಲಿನ ಅವರ ಉತ್ತರದಲ್ಲಿ ಸ್ಪಷ್ಟವಾಗಿಯೇ ವ್ಯಕ್ತವಾಯಿತು. ಹಿಂದೊಮ್ಮೆ ಭಾರತ ತನ್ನ ಭವಿಷ್ಯವನ್ನು ನಿಖರವಾಗಿ ಗುರುತಿಸಿಕೊಂಡಿದ್ದ 'ನಡುರಾತ್ರಿ'ಯ ಸಮಯದಲ್ಲೇ ವಾಜಪೇಯಿಯವರು ಭಾರತದ ಗಣತಂತ್ರ ಹಾಗೂ ಅದರ ಗುರಿಗಳ ಆಮೂಲ ಪರಿವರ್ತನೆಗಾಗಿ ತನ್ನ ಸರ್ಕಾರ ಪಣತೊಟ್ಟಿದೆ ಎಂಬುದನ್ನು ಪುನರುಚ್ಚಿಸಿದರು. ಈ ಪರಿವರ್ತನೆಯಾದರೋ ಎಂತಹುದು? ಭಾರತವನ್ನು ಹಾಗೂ ಅದರ ಶ್ರೀಮಂತ ವೈವಿಧ್ಯತೆಯನ್ನು ಸಂಪೂರ್ಣವಾಗಿ ನಾಶಗೊಳಿಸುವ ಅತ್ಯಂತ ಭಯಾನಕ ಪರಿವರ್ತನೆ.

ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ಒಟ್ಟಾರೆಯಾಗಿ, ಸರ್ಕಾರದ ಎಲ್ಲಾ ಕಾರ್ಯಕ್ಷೇತ್ರ ಗಳ, ಅದರಲ್ಲೂ ಮುಖ್ಯವಾಗಿ ದೇಶದ ಧರ್ಮ ನಿರಪೇಕ್ಷತೆಯ ಚೌಕಟ್ಟನ್ನೇ ಅಭದ್ರಗೊಳಿಸುವ ಕೋಮುವಾದೀ ಕಾರ್ಯಾಚರಣೆಯ, ನೇರವಾದ ದೋಷಣೆ ಆಗಿತ್ತು. ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣದ ಬಗ್ಗೆ ವಾಜಪೇಯಿಯವರ ಇಬ್ಬಂದಿತನದ ಮಾತುಗಳು, ಈ ಸರ್ಕಾರ ಸಂವಿಧಾನವನ್ನು ಗೌರವಿಸುವ ಸೋಗು ಹಾಕುತ್ತಲೇ, ವಾಸ್ತವದಲ್ಲಿ ಅದನ್ನು ಛಿದ್ರಗೊಳಿಸುವ ಕಾಯಕವನ್ನು ಮುಂದುವರಿಸುತ್ತಿದೆ ಎಂಬುದನ್ನು ಶ್ರುತಪಡಿಸುತ್ತವೆ. ತನ್ನ ನಿಜವಾದ ಕಾರ್ಯಸೂಚಿ ಮತ್ತು ಉದ್ದೇಶಗಳೇನು ಎಂಬುದನ್ನು ಜನರಿಗೆ ವಿವರಿಸಿ ಹೇಳುವುದರ ಔಚಿತ್ಯವನ್ನು ಒಂದು ಗಳಿಗೆಯಾದರೂ ಈ ಸರ್ಕಾರ ಪರಿಗಣಿಸಿಲ್ಲ ಎಂಬ ವಾಸ್ತವ ಆಡಳಿತ ಪಕ್ಷದ ಸದಸ್ಯರ ಪ್ರತಿಕ್ರಿಯೆಗಳಿಂದಲೇ ನಿಚ್ಚಳವಾಯಿತು.

ವಿರುದ್ಧ ಕಾರ್ಯ

ಈ ರೀತಿಯ ನಡವಳಿಕೆಯಲ್ಲೇ ಸರ್ಕಾರದ ನಿಜವಾದ ಕಾರ್ಯಸೂಚಿ ಅಡಕವಾಗಿರುವುದು. ಅದೆಂದರೆ ಜನರನ್ನು ನಿರಂತರ ದಾರಿತಪ್ಪಿಸುವುದು, ಕೋಮುಭಾವನೆಗಳನ್ನು ಉದ್ರೇಕಿಸುವುದು ಮತ್ತು ಭಾರತೀಯ ಸಂವಿಧಾನ ರೂಪಿಸಿರುವ ಲಕ್ಷಣಗಳಿಗೆ ಸಂಪೂರ್ಣವಾಗಿ ವಿರುದ್ಧವಾದ ಕಾರ್ಯಸೂಚಿ ಯೊಂದರ ಅನಾವರಣಕ್ಕೆ ಮತದಾರರ ಬೆಂಬಲವನ್ನು ಪಡೆಯುವುದು.

ನಿಸ್ಸಂದೇಹವಾಗಿ, ಈ ಸರ್ಕಾರ ಎಲ್ಲಾ ರಂಗಗಳಲ್ಲೂ ವಿಫಲವಾಗಿದೆ. ಹಸಿವಿನಿಂದ ಸಾವು ಹಾಗೂ ದುಸ್ಥಿತಿಯ ಆತ್ಮಹತ್ಯೆಗಳು - ಸ್ವಾತಂತ್ರ್ಯದ 56 ವರ್ಷಗಳಾದ ನಂತರವೂ-ಸರ್ವಥಾ ಅಪೇಕ್ಷಣೀಯವಲ್ಲ!

ಸಮಯಸಾಧಕರು

ಅತ್ಯಂತ ಶೋಚನೀಯವಾದ್ದುದ್ದೆಂದರೆ ರಾಷ್ಟ್ರೀಯ ಮೈತ್ರಿಕೂಟ (ಎನ್.ಡಿ.ಎ) ಭಾಜಪದ ಮಿತ್ರ ಪಕ್ಷಗಳು ವಹಿಸಿದ ಪಾತ್ರ. ತನ್ನ ಧರ್ಮನಿರಪೇಕ್ಷತೆಗೆ ರುಜುವಾತುಗಳನ್ನು ಒದಗಿಸುವ ಸಲುವಾಗಿಯೇ ಮೈತ್ರಿಕೂಟದಲ್ಲಿ ಭಾಗವಹಿಸದೇ ಇರುವ ನಾಟಕವಾಡುತ್ತಿದ್ದ ತೆಲುಗು ದೇಶಂ ಪಕ್ಷ, ಈ ಬಾರಿ ಮೈತ್ರಿಕೂಟದ ಸಭೆಗಳಲ್ಲಿ ಭಾಗವಹಿಸಿದ್ದು ಮಾತ್ರವಲ್ಲ, ಅದರ ಸಂಸದೀಯ ನಾಯಕರು ಎಲ್ಲರನ್ನೂ ಮೀರಿಸುವ ರೀತಿಯಲ್ಲಿ ಮಾತನಾಡಿ ತಮ್ಮ ನೈಜ ನಿಷ್ಠೆಯನ್ನು ಪ್ರದರ್ಶಿಸಿಬಿಟ್ಟರು. ತೆಲುಗು ದೇಶಂನ ಅತೀವ ಸಮಯಸಾಧಕತನ ಬಟಾಬಯಲಾಗಿ ನಿಂತಿದೆ.

ಇತರ ಮಿತ್ರ ಪಕ್ಷಗಳ ಸ್ಥಿತಿಯಂತೂ ಇನ್ನೂ ದಯನೀಯ. ಸರ್ಕಾರವೇನಾದರೂ ಬಿದ್ದುಹೋಗಿ, ಮುಂಚಿತವಾಗಿಯೇ ಚುನಾವಣೆಗಳು ನಡೆದಲ್ಲಿ ಹೆಚ್ಚುಕಡಿಮೆ ಈ ಪಕ್ಷಗಳೆಲ್ಲಾ ಧೂಳೀಪಟವಾಗುತ್ತಿ ದ್ದವು. ಒರಿಸ್ಸಾದಲ್ಲಿನ ಬಿಜು ಜನತಾದಳ, ತಮಿಳುನಾಡಿನಲ್ಲಿ ದ್ರಾಮುಖ(ಡಿಎಂಕೆ), ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್, ಕರ್ನಾಟಕದಲ್ಲಿ ಸಂಯುಕ್ತ ಜನತಾದಳ, ಬಿಹಾರದಲ್ಲಿ ಸಮತಾಪಕ್ಷ, ಪಂಜಾಬಿನಲ್ಲಿ ಅಕಾಲಿದಳ, ಹರಿಯಾಣದಲ್ಲಿ ಅಖಿಲ ಭಾರತ ಲೋಕದಳ-ಈ ಎಲ್ಲಾ ರಾಜಕೀಯ ಶಕ್ತಿಗಳು ಸರ್ಕಾರ ಉಳಿಯಬೇಕೆಂದೇ ಬಯಸುತ್ತವೆ. ಇಲ್ಲದೆ ಹೋದಲ್ಲಿ ರಾಜಕೀಯ ವಿಸ್ಮೃತಿಯ ಹೀನ ಪರಿಸ್ಥಿತಿಯನ್ನು ಈ ಪಕ್ಷಗಳು ಎದುರಿಸ ಬೇಕಾಗು ತ್ತದೆ. ಈ ಮಿತ್ರಪಕ್ಷಗಳು ಪ್ರದರ್ಶಿಸುತ್ತಿರುವ ಇಂತಹ ಕೀಳುಮಟ್ಟದ ಸಮಯಸಾಧಕತನ ಹಾಗೂ ಅಧಿಕಾರಲಾಲಸೆ ಭಾರತದ ಪ್ರಜಾಸತ್ತೆಯಲ್ಲಿಯೇ ಅತ್ಯಂತ ನಾಚಿಕೆಗೇಡಿನ ಅಭಿವ್ಯಕ್ತಿಯಾಗಿದೆ.

ಶರಣಾಗತಿಗೆ ಸಮರ್ಥನೆ !

ಅಮೇರಿಕನ್ ಸಾಮ್ರಾಜ್ಯಶಾಹಿಗೆ ಈ ಸರ್ಕಾರ ಡೊಗ್ಗುಸಲಾಮು ಹಾಕುತ್ತಿರುವುದನ್ನು ಚರ್ಚೆಯಲ್ಲಿ ಪ್ರಸ್ತಾಪಿಸಿದ್ದರೂ ಸಹ, ಪ್ರಧಾನಮಂತ್ರಿಗಳು ತಮ್ಮ ಉತ್ತರದಲ್ಲಿ ಅದನ್ನು ನಿರಾಕರಿಸುವ ಪ್ರಯತ್ನ ಮಾಡಲಿಲ್ಲ ಬದಲಾಗಿ ತಮ್ಮ ಸರಕಾರ ಅನುಸರಿಸುತ್ತಿರುವ ಹೀನ ಶರಣಾಗತಿಯ ಕ್ರಮಗಳನ್ನು ಸಮರ್ಥಿಸಲು ತಿಣುಕಾಡಿದರು.

ಆಳುವ ಪಕ್ಷದ ಸದಸ್ಯರ ಹಾವಭಾವಗಳು ಮತ್ತು ವರ್ತನೆಗಳಿಂದಾಗಿ ಒಂದಂತೂ ನಿಚ್ಚಳವಾಗಿದೆ. ತಾವು ತೊಲಗುವ ಸಮಯ ಸನ್ನಿಹಿತವಾಗಿದೆ ಎಂಬ ವಾಸ್ತವ ಅವರನ್ನು ತಟ್ಟಿದೆ. ಇದು ಎಷ್ಟು ಬೇಗ ಸಾಧ್ಯವಾಗುತ್ತದೋ, ಭಾರತ ಮತ್ತು ಅದರ ಜನತೆಗೆ ಅಷ್ಟೂ ಒಳ್ಳೆಯದು. ●

ರೋಮ್ ನಗರ ಬೆಂಕಿಯಲ್ಲಿ ಧಗಧಗಿಸುತ್ತಿದ್ದಾಗ, ಪಿಟೀಲು ಬಾರಿಸುತ್ತಿದ್ದ ನೀರೋ ಚಕ್ರವರ್ತಿಯ ಹಾಗೆಯೇ, ಭಾರತ ಮತ್ತು ದೇಶದ ಜನ ಅತೀವ ಸಂಕಷ್ಟದಲ್ಲಿರುವಾಗ ವಾಜಪೇಯಿ ವರ್ತಿಸುತ್ತಿದ್ದಾರೆ. ಈ ದೇಶದ ಜನತೆ ತಮಗೆ ಸಿಕ್ಕ ಅವಕಾಶವನ್ನು ಬಿಡದೆ ಉಪಯೋಗಿಸಿ ಕೊಂಡು ವಾಜಪೇಯಿ, ಆರ್.ಎಸ್.ಎಸ್. ಮತ್ತು ಭಾಜಪಗಳನ್ನು ಖಂಡಿತವಾಗಿಯೂ ಒದ್ದೋಡಿಸಲಿದ್ದಾರೆ.




ಗುಲ್ಬರ್ಗಾ ಜಿಲ್ಲೆಯ ನಿಂಬರ್ಗಾ ಗ್ರಾಮ ಮತ್ತೇ ಸತತ ಸುದಿಯಲ್ಲಿದೆ. ಕಳೆದ ಹಲವಾರು ತಿಂಗಳಿಂದ ಅಲ್ಲಿ ದಲಿತ ಮತ್ತು ಮೇಲ್ಜಾತಿ ಜನರ ನಡುವೆ ನಿರಂತರ ಘರ್ಷಣೆಗಳು ನಡೆಯುತ್ತಿವೆ. ಈ ಘಟನೆಗಳ ಮೂಲವನ್ನು ಪತ್ತೆ ಹಚ್ಚಿ ಸಮಸ್ಯೆ ಇತ್ಯರ್ಥಗೊಳಿಸಿ. ಅನ್ಯಾಯಕ್ಕೊಳಗಾದವರಿಗೆ ನ್ಯಾಯ ದೊರಕಿಸಿ ಸಾಮರಸ್ಯ ಕಾಪಾಡಲು ಸರ್ಕಾರದ ಪ್ರಯತ್ನ ಸಾಲುತ್ತಿಲ್ಲ. ಅಲ್ಲಿನ ಶಾಸಕರಿಗೆ, ಉಸ್ತುವಾರಿ ಸಚಿವರಿಗೆ ಇಂತಹದ್ದು ಬೇಕಿಲ್ಲ. ಬೆಂಕಿ ಬಿದ್ದ ಮನೆಯಿಂದ ಗಳ ಹಿರಿಯುವ ರಾಜಕೀಯವು ಪರಿಸ್ಥಿತಿಯನ್ನು ಉಲ್ಬಣಗೊಳಿಸಿದೆ. ನಿಂಬರ್ಗಾದ ಪರಿಸ್ಥಿತಿಯ ಕುರಿತ ವಿವರವಾದ ವಿಶ್ಲೇಷಣೆ ಇಲ್ಲಿದೆ.

ನಿಂಬರ್ಗಾ ಕಲಬುರ್ಗಿ ಜಿಲ್ಲೆಯ ಅಳಂದ ತಾಲ್ಲೂಕಿನ ಒಂದು ಸರ್ಕಲ್ ಕೇಂದ್ರ. ಅಲ್ಲಿ ಒಂದು ಜ್ಯೂನಿಯರ್ ಕಾಲೇಜು ಇದೆ. ಹೆಚ್.ಕೆ.ಇ. ಶಿಕ್ಷಣ ಸಂಸ್ಥೆಯ ಒಂದು ಐ.ಟಿ.ಐ ಇದೆ. ಒಂದು ಪೊಲೀಸ್ ಸ್ಟೇಷನ್ ಕೂಡಾ ಇದೆ. ಮುಖ್ಯವಾಗಿ ಕೃಷಿ ಪ್ರಧಾನವಾದ ದೊಡ್ಡ ಹಳ್ಳಿ, ಸಾಮಾನ್ಯವಾಗಿ ಅಲ್ಲಿಯ ಜನರು ಗಾಂಧಿ ಸ್ಮರಣೆಗೆ ಹೆಸರಾದವರು. ಈ ಊರಿನ ಇನ್ನೊಂದು ವಿಶೇಷವೆಂದರೆ ಕಲ್ಬುರ್ಗಿ ಶರಣ ಬಸವೇಶ್ವರ ಗುಡಿಯ ಮಾದರಿಯಲ್ಲಿಯೇ ಹೆಚ್ಚು ಕಡಿಮೆ ತದ್ರೂಪಿಯನ್ನಬಹುದಾದ ಒಂದು ಶರಣ ಬಸವೇಶ್ವರ ಗುಡಿಯನ್ನು ಕಟ್ಟಿಕೊಂಡಿದ್ದಾರೆ. ಊರಲ್ಲಿಯ ಬಹುಸಂಖ್ಯಾತರು ಈ ಶರಣರ ಭಕ್ತರು.

ಸಕಲ ಜೀವಿಗಳಿಗೆ ಲೇಸನ್ನೇ ಬಯಸಿದ್ದ ಶರಣ ದಾರಿಯಲ್ಲಿ ಬಹು ಗಟ್ಟಿ ಹೆಜ್ಜೆ ಇಟ್ಟಿದ್ದಾರೆ. ಕಲಬುರ್ಗಿ ಶರಣರ ಅನುಯಾಯಿಗಳ ಈ ಊರಲ್ಲಿ ಎರಡುವರೆ ತಿಂಗಳ ಅವಧಿಯಲ್ಲಿಯೇ ಎರಡು ಜಾತಿ ಜಗಳ ಕಾಣಿಸಿಕೊಂಡಿದೆ.

ಹೃಗ್ಗೋಚರ ಹಿನ್ನೆಲೆ

ಇಬ್ಬರು ದಲಿತರು ಕುಡಿದು ನೇಕಾರರ ಹೆಣ್ಣುಮಗಳೊಂದಿಗೆ ಅಸಭ್ಯವಾಗಿ ವರ್ತಿಸಿದ ಕಾರಣವೇ ಮೂಲವಾಗಿ, ಒಳಗೊಳಗೆ ಬುಸುಗುಡುತ್ತಿದ್ದ ಜಾತಿಯ ಹೊಗೆ ಮೇ 29 ರಂದು ದಲಿತ ವಿದ್ಯಾರ್ಥಿ ಒಬ್ಬ ಮೇಲ್ಜಾತಿಯ



ಹಲ್ಲೆಗೊಳಗಾಗಿರುವ ಶಾಂತಪ್ಪ


ವಿದ್ಯಾರ್ಥಿನಿಗೆ ಚುಡಾಯಿಸಿದನೆಂಬ ಸುದ್ದಿ ಸ್ಫೋಟಗೊಂಡು ಹೊಗೆಯಾಡುತ್ತಿದ್ದ ಬೆಂಕಿ ಜಗ್ಗಿಸಿ ಹೊತ್ತಿಕೊಂಡಿತು ಊರಲ್ಲಿಯ ಬಹುಸಂಖ್ಯಾತ ಲಿಂಗಾಯತರು ಮತ್ತು ದಲಿತರ ನಡುವೆ ಬೀದಿ ಕಾಳಗ ಏರ್ಪಟ್ಟಿತು. ದಲಿತರ ಮೇಲೆ ಹಲ್ಲೆಗಳಾದವು ಪ್ರತಿಯಾಗಿ ಮೇಲ್ಜಾತಿಯವರ ಮೇಲೆ ದಲಿತ ದೌರ್ಜನ್ಯದ ಮೊಕದ್ದಮೆಗಳನ್ನು ಹಾಕಲಾಯಿತು. ದಲಿತರು ಸಾಮಾಜಿಕ ಬಹಿಷ್ಕಾರಕ್ಕೊಳಗಾದರು. ಸಾಮಾನ್ಯವಾಗಿ ಕೃಷಿ ಕೂಲಿಕಾರರಾಗಿರುವ ದಲಿತರ ಕೈಗೆ ಕೆಲಸವಿಲ್ಲದೇ ನಿರ್ಗತಿಕರಾದರೂ ಸರ್ಕಾರವೇನೋ ಒಂದಿಷ್ಟು ಕೆಲಸ ಒದಗಿಸಿದಂತೆ ಮಾಡಿ ನೆಪಕ್ಕೆ ಶಾಂತಿ ಸಮಿತಿ ರಚಿಸಿ ಎಲ್ಲವನ್ನು ಮರೆತುಬಿಟ್ಟಿತು. ಆದರೆ ಕೇಸುಗಳ ಅಡಿಯಲ್ಲಿ ತತ್ತರಿಸಿದ್ದ ಮೇಲ್ಜಾತಿಯವರು, ಮತ್ತು ಬಹಿಷ್ಕಾರಕ್ಕೊಳಗಾಗಿ ಸಂಕಟಕ್ಕೊಳಗಾಗಿದ್ದ ದಲಿತರ ಮಧ್ಯ ವೈಷಮ್ಯ ಜೀವಂತವಾಗಿಯೇ ಇತ್ತು. ಅದಕ್ಕೇ ಅವಕಾಶ ಸಿಕ್ಕೊಡನೇ ಅದು ಚಿಗಿತು ಟಿಸಿಲೊಡೆದು ಪಸರಿಸುವ ಎಲ್ಲಾ ಸಾಧ್ಯತೆಗಳು ಇದ್ದವು, ಹೀಗಿದ್ದು ದಲಿತ ನಾಯಕರಾಗಲಿ ವೀರಶೈವ ಮುಖಂಡರಾಗಲಿ ಸಮಸ್ಯೆಗೆ ಅಂತಿಮ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಿಲ್ಲ. ದುರಂತವೆಂದರೆ ತಾಲ್ಲೂಕಿನ ರಾಜಕೀಯ ನಾಯಕರು ಈ ಬಗ್ಗೆ ಹೆಚ್ಚು ತಲೆ ಕೆಡೆದುಕೊಳ್ಳಲಿಲ್ಲ. ಇವೆಲ್ಲವುದರ ಪರಿಣಾಮ ಎಂಬಂತೆ 12 ಆಗಸ್ಟ್ ರಂದು ಜಾತಿ ಜಗಳ ಮತ್ತೇ ಸ್ಫೋಟಗೊಂಡಿದೆ.

ಸ್ಫೋಟಕ್ಕೆ ಕಾರಣಗಳು

ಒಂದು ಹೇಳಿಕೆಯ ಪ್ರಕಾರ ಸ್ಥಳೀಯ ಜ್ಯೂನಿಯರ್ ಕಾಲೇಜಿನಲ್ಲಿ ಕಲಾ ವಿದ್ಯಾರ್ಥಿಯಾಗಿರುವ ಲಕ್ಷ್ಮೀಕಾಂತ ಎನ್ನುವ ದಲಿತ ವಿದ್ಯಾರ್ಥಿ ವಿಜ್ಞಾನ ವಿಭಾಗದ ಕಂಪ್ಯೂಟರ್ ಕೊಠಡಿಯಲ್ಲಿ ಒಬ್ಬ ಹುಡುಗಿಯನ್ನು ಚುಡಾಯಿಸಿದ ಎಂಬುದು. ಇದಕ್ಕೆ ವ್ಯತಿರಿಕ್ತವಾಗಿ ಇನ್ನೊಂದು. ವಿವರಣೆಯೂ ಇದೆ. ಅದರ ಪ್ರಕಾರ ಸದರಿ ದಲಿತ ಯುವಕ ಮೇಲ್ಜಾತಿಯ ಹುಡುಗಿಯೊಂದಿಗೆ ಮಾತಾಡುವ ಸವಾಲುಹಾಕಿ ಅದಕ್ಕೆ ಮುಂದಾದುದ್ದೇ ರಾದ್ದಾಂತಕ್ಕೆ ಕಾರಣ. ಇದಕ್ಕಿಂತಲೂ ಭೀನ್ನವಾದ ಇನ್ನೊಂದು ಕಥೇ ದಲಿತಯುವಕರು ಹೇಳುತ್ತಿದ್ದಾರೆ. ಕಾಲೇಜಿನಲ್ಲಿ ಮೇಲ್ಜಾತಿಯ ಒಬ್ಬ ವಿದ್ಯಾರ್ಥಿ ಜೈ. ಹನುಮಾನ ಪ್ರಸನ್ನ ಎಂದು ಬರೆದುದ್ದರ ಪಕ್ಕದಲ್ಲಿಯೇ ದಲಿತ ವಿದ್ಯಾರ್ಥಿಯೊಬ್ಬ ಜೈಬೀಮ ಎಂದು ಬರೆದ, ಅದಕ್ಕಾಗಿ ಬಾಯಿಗೆ ಬಾಯಿ ಹತ್ತಿ ಮಾತು ಬೆಳೆದು ದಲಿತ ವಿದ್ಯಾರ್ಥಿಮೇಲೆ ಹಲ್ಲೆಯಾಯಿತು. ಇದನ್ನು ತುಸು ಮುಂದುವರೆಸುವ ಮೇಲ್ಜಾತಿಯವರು , ಹಲ್ಲೆಗೊಳಗಾದ ಹುಡುಗ ಹರಿಜನ ಕೇರಿಗೆ ಹೋಗಿ ಹತ್ತಾರು ಹುಡುಗರನ್ನು ಕರೆದುಕೊಂಡು ಬಂದು ಗದ್ದಿಗೆ ಮಠದ ಹತ್ತಿರ ಸಿಕ್ಕ ಸಿಕ್ಕವರ ಮೇಲೆ ಕಲ್ಲು ತೂರುವುದಕ್ಕೆ ಪ್ರಚೋದನೆ ನೀಡಿದ ಸುದ್ದಿ ಪೊಲೀಸ್ ಠಾಣೆಗೆ ತಿಳಿದು ಇನ್ಸ್‌ಪೆಕ್ಟರ್ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಬರುವುದರಲ್ಲಿಯೇ ದೊಡ್ಡ ಜನ ಜಂಗುಳಿಯೇ ನೆರದು ಪರಸ್ಪರ ಕಲ್ಲು ತೂರಾಟದಲ್ಲಿ ತೊಡಗಿದ್ದರು. ಪರಿಸ್ಥಿತಿ ನಿಭಾಯಿಸಲು ಪೊಲೀಸರು ನಾಲ್ಕು ಸುತ್ತು ಗಾಳಿಯಲ್ಲಿ ಗುಂಡುಹಾರಿಸಿದರು. ಲಘು ಲಾಠಿ ಪ್ರಹಾರವನ್ನು ಮಾಡಿದರು. ರೊಚ್ಚಿಗೆದ್ದ ಮೇಲ್ಜಾತಿ ಯುವರು ಇನ್ನೊಂದು ಹರಿಜನ ಕೇರಿಯಾದ ಸಿದ್ದಾರ್ಥ ನಗರಕ್ಕೆ ನುಗ್ಗಿ ಮನಬಂದಂತೆ ಹಲ್ಲೆ ಮಾಡಿದರು. ವಿಚಿತ್ರವೆಂದರೆ ವಾಸ್ತವವಾಗಿ ಸಿದ್ದಾರ್ಥನಗರ ಮತ್ತು ಈ ಗಲಭೆಗೆ ಸಂಬಂಧವೇ ಇರಲಿಲ್ಲ ಆದರೂ ದೊಂಭಿಕೋರರು ಸಿದ್ದಾರ್ಥನಗರಕ್ಕೆ ನುಗ್ಗಿದ್ದೇಕೇ?

ಶಾಸಕನ ಕಟ್ಟಾ ಬೆಂಬಲಿಗ ಧರ್ಮಣ್ಣನ, ಧರ್ಮ ದುರಂತ

ಅಶೋಕ ನಗರದಲ್ಲಿ ಧರ್ಮಣ್ಣನೆಂಬ ದಲಿತನ ಕುಟುಂಬವಿದೆ. ಅವನು ಒಕ್ಕಲುತನ ಮಾಡಿಕೊಂಡು ಒಂದಿಷ್ಟು ಆರ್ಥಿಕವಾಗಿ ಸದೃಢವಾಗಿದ್ದಾನೆ. ಯಾವ ಕಾರಣಕ್ಕೊ ಗೊತ್ತಿಲ್ಲ. ಶಾಸಕ ಸುಭಾಷ ಗುತ್ತೇದಾರರನ್ನು ದೇವರೆಂದು ಭಾವಿಸಿ ಪೂಜಿಸತೊಡಗಿದ. ಪ್ರತಿಯಾಗಿ ಶಾಸಕನ ಬೆಂಬಲ ತನಗಿದೆ ಎಂಬ ಹಮ್ಮಿನಿಂದಲೋ ಏನೋ ಊರಲ್ಲಿ ಪರಿಣಾಮವಾಗಿಯೇ ಪೊಲೀಸರು ಗ್ರಾಮದಲ್ಲಿ ಘರ್ಷಣೆ, ದೊಂಬಿಗಳನ್ನು ನಿಭಾಯಿಸುತ್ತಿದ್ದಾಗ ಇನ್ನೊಂದು 100-150 ಪಡ್ಡೆ ಹುಡುಗರ ಪಡೆ ಹಿಂದಿನಿಂದ ಸಿದ್ದಾರ್ಥ ನಗರಕ್ಕೆ ದಾಳಿಇಟ್ಟಿತು. ಈ ಮುಂಚೆ ಒಮ್ಮೆ ವೈಯಕ್ತಿಕವಾಗಿ ಹಲ್ಲೆಗೊಳಗಾಗಿ ತಲೆ ಒಡೆಸಿಕೊಂಡಿದ್ದ ಧರ್ಮಣ್ಣನ ಮೇಲೆ ಮತ್ತೊಮ್ಮೆ ದಾಳಿ ಮಾಡುವುದೇ ಈ ದಾಳಿಯ ಉದ್ದೇಶವಾಗಿತ್ತೆಂದು ಕಾಣುತ್ತದೆ.




ಖರ್ಗೆಯವರ ಮೂಗಿನ ಕೆಳಗೆ ದುಷ್ಟ ಸಂತಾನ ತೊಟ್ಟಿಲು ಕಟ್ಟುತ್ತಿದೆ

ಸಿದ್ದಾರ್ಥನಗರದ ಮೇಲೆ ದುರಾಕ್ರಮಣ ಮಾಡಿದ್ದೇ ತಡ ಕೈಗೆ ಸಿಕ್ಕವರನ್ನೇ ಮನಬಂದಂತೆ ಹೊಡೆಯ ತೊಡಗಿದರು. ಭಯದಿಂದ ಓಡಿಹೋದ ದಲಿತರ ಮನೆಗಳಿಗೆ ನುಗ್ಗಿ ಒಳಗಿದ್ದ ಸಾಮಾನು ಸರಂಜಾಮುಗಳನ್ನು

ನಿಂಬರ್ಗ: ಜಾತಿ

ಒಂದು ಸಣ್ಣ ಪ್ರಕರಣದಲ್ಲಿ ತನ್ನ ದರ್ಪವನ್ನು ತೋರಿದ್ದ ಸರ್ಜಪ್ಪಗೌಡ ಎನ್ನುವವರ ದನಗಳು ಧರ್ಮಣ್ಣ ಸಾಗರನ ಹೊಲದಲ್ಲಿ ಮೇಯ್ದಿ ಬೆಳೆ ಹಾಳು ಮಾಡಿದ್ದಕ್ಕೆ ರೂ. 2500 ಕ್ಕೆ. ದಂಡವನ್ನೂ ಕಟ್ಟಿಸಿದ್ದ. ಅದಕ್ಕೆ ವಿರುದ್ಧವಾಗಿ ಸರ್ಜಪ್ಪಗೌಡ ತಮ್ಮ ಪಂಡಿತ ಎಂಬ ಹುಡುಗನ ಮೇಲೆ ಧರ್ಮಣ್ಣನ ಮಕ್ಕಳು ಕೈ ಮಾಡಿದ್ದಕ್ಕೆ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಮಾಡಿದ ಖರ್ಚಿನ ಬಾಬತ್ತು 200 ರೂ. ವಸೂಲಿಗೆ ಟೊಂಕಕಟ್ಟಿ ನಿಂತರು. ಸರ್ಜಪ್ಪಗೌಡ, ಸಕುಟುಂಬದ ಹಿರಿಯ ಮಗ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ. ಅವನನ್ನು ಕರೆಸಿಕೊಂಡು ತಮಗಾದ ಅವಮಾನಕ್ಕೆ ಸೇಡು ತೀರಿಸಿ ಕೊಳ್ಳಲು ಪ್ರಯತ್ನಿಸಿದ್ದು, ಸರ್ಜಪ್ಪಗೌಡ ಕುಟುಂಬ, ಆ ಸೇಡಿನ ಅಡಿ ಉಲ್ಬಣಿಸಿದ್ದು ಮೊನ್ನೆ ಆಗಸ್ಟ್ 12 ರಂದು ಅದರ



ನಂಬಿದವರು ನಡುನೀರಿನಲ್ಲಿ, ಶಾಸಕರು ದಡ ಸೇರುವ ಆಟದಲ್ಲಿ...

ತಂದು ಅವುಗಳನ್ನು ಜಜ್ಜಿ ನೊಜ್ಜು ಗುಜ್ಜು ಮಾಡಿದ್ದಾರೆ. ಸೂಟಕೇಸು ಟ್ರಂಕ್‌ಗಳನ್ನು ಬೀದಿಗೆಸೆದು ಅವುಗಳ ಮೇಲೆ ದೊಡ್ಡ ದೊಡ್ಡ ಕಲ್ಲು ಚಪ್ಪಡಿಗಳನ್ನು ಹಾಕಿ ಮುರಿದು ಹಾಕಿದ್ದಾರೆ. ಹಂಡೆ, ಭಾಂಡೆ, ಪಾತ್ರೆ, ಕರಾತ, ಮುಂತಾದವುಗಳನ್ನು ಅಂಗಳಕ್ಕೂ ತಂದು ಕಲ್ಲಿನಿಂದ ಕುಟ್ಟಿದ್ದಾರೆ. ಮನೆ ಮನೆಯ ಬಾಗಿಲುಗಳನ್ನು ಹಿಡಿಗಲ್ಲುಗಳಿಂದ ಒಡೆದುಕೊಂಡಿ ಕೀಲಿಗಳನ್ನು ಮುರಿದಿದ್ದಾರೆ. ಮನೆಯ ಮುಂದಿನ ನೀರಿನ ಹೌಜುಗಳನ್ನು ಒಡೆದು ಹಾಕಿದ್ದಾರೆ. ಇನ್ನೂ ಪ್ಲಾಸ್ಟಿಕ್ ಸಾಮಾನುಗಳನ್ನು ಒಡೆದು ಚೂರು ಚೂರು ಮಾಡಿದ್ದಾರೆ. ಮನೆಯ ಮುಂದಿದ್ದ ಒಂದು ಸೈಕಲ್ ಅನ್ನು ಮುರಿದು ಹಾಕಿದ್ದಾರೆ. ಪಂಚಾಯ್ತಿ ಉಪಾಧ್ಯಕ್ಷ ದತ್ತಪ್ಪಾನ ಮನೆಯ ಮುಂದಿನ ಮೋಟರ್ ಸೈಕಲ್ ಪುಡಿಮಾಡಿದ್ದಾರೆ. ದಲಿತ ವಿದ್ಯಾರ್ಥಿಗಳು ಓದುತ್ತಿದ್ದ ಸರ್ಕಾರಿ ಐ.ಬಿ.ಗೆ ನುಗ್ಗಿ ಅಲ್ಲಿದ್ದ ಎಲ್ಲಾ ಸಾಮಾನುಗಳಿಗೆ ಬೆಂಕಿ ಇಟ್ಟಿದ್ದಾರೆ. ಪುಸ್ತಕ, ನೋಟ್‌ಬುಕ್, ಇತ್ಯಾದಿಗಳು ಸುಟ್ಟು ಕರಕಲಾಗಿವೆ. ಕೆಲವು ವಿದ್ಯಾರ್ಥಿಗಳ ಮಾರ್ಕ್ಸ್ ಕಾರ್ಡ್ ಸರ್ಟಿಫಿಕೇಟ್ ಸುಟ್ಟುಹೋಗಿವೆ. ಗೋಡೆಗೆ ತೂಗಿಹಾಕಿದ್ದ ಶರ್ಟು ಪ್ಯಾಂಟುಗಳನ್ನು ಸುಟ್ಟು ಬೂದಿ ಮಾಡಿದ್ದಾರೆ. ಆ ಮೇಲೆ ಪಶು ಚಿಕಿತ್ಸಾಲಯದ ಕಟ್ಟಡದಲ್ಲಿ ಭಯ ದಿಂದ ಅಡಗಿ ಕುಳಿತಿದ್ದ ದಲಿತ ಮಹಿಳೆ ಮಕ್ಕಳನ್ನು ಹೊರೆಗೆಳೆದು ಮನಬಂದಂತೆ ಥಳಿಸಿದ್ದಾರೆ. ಕಟ್ಟಡದ ಎಲ್ಲಾ ಬಾಗಿಲುಗಳನ್ನು ಮುರಿದು ಹಾಕಿದ್ದಾರೆ. ಅಲ್ಲಿದ್ದ ದಲಿತಯುವಕ ಶಾಂತಪ್ಪನನ್ನು ಬೀದಿಗೆಳೆದು ಮರಣಾಂತಿಕ ಹಲ್ಲೆ ನಡೆಸಿದ್ದಾರೆ. ಶಾಂತಪ್ಪನ ರಕ್ತ ಒಂದೇ ಸಮನೆ ಹರಿಯಲಿದ್ದುದ್ದನ್ನು ಕಂಡು ಅವನ ಸಹಾಯಕ್ಕೆ ಬಂದ ಅವನ ಅಕ್ಕ ಹಾಗೂ ಇನ್ನೊಬ್ಬ ಮಗಳ ಮೇಲೂ ಗಂಭೀರ ಸ್ವರೂಪದಲ್ಲಿ ಹಲ್ಲೆ ಮಾಡಿದ್ದಾರೆ. ಭಾಗಮ್ಮಳಿಗೆ ಟೊಂಕದ ಮೇಲೆ ಭಾರಿ ಪೆಟ್ಟು ಬಿದ್ದರೆ, ಪಾರ್ವತಿ ಚಂದ್ರಕ್ಕ ಮೊಳಕಾಲು ಮೇಲೆ ಗಂಭೀರ ಸ್ವರೂಪದ ಗಾಯವಾಗಿದೆ. ಅಲ್ಲಿಯೇ ಸಮೀಪದಲ್ಲಿದ್ದ ಒಂದು ಸಣ್ಣ ಹೊಟೇಲ್ ಅನ್ನು ಕೊಳ್ಳೆ ಹೊಡೆದಿದ್ದಾರೆ. ಹೊಟೇಲ್‌ನ ಮಾಲಕಿ ಮಹಾಪುರಿ, ತಂದೆ ರೇವಪ್ಪನಿ ಪೆಟ್ಟುಗಳೇನೂ ಬಿದ್ದಲ್ಲಿವಾದರೂ ಅವಳ ಸಣ್ಣ ಉದ್ಯಮವನ್ನು ಧ್ವಂಸಗೊಳಿಸಿ ದ್ದಾರೆ. ಧರ್ಮಯ್ಯ

ಸಮಸ್ಯೆಯ ವಾಸ್ತವ ಮೂಲ

ಗ್ರಾಮದ ಬಹುಸಂಖ್ಯಾತ ದಲಿತ ಮಹಿಳೆಯರು ಹೇಳುವಂತೆ ಮತ್ತು ಗ್ರಾಮದ ಹಿರಿಯ ವಯೋವೃದ್ಧ ಮುಖಂಡ ಚನ್ನಪ್ಪ ಸಾಹು ಹೇಳುವಂತೆ ಅದಕ್ಕೆ ಸಿದ್ರಮಪ್ಪ ನಾಗೇಶಪ್ಪ ಸಮ್ಮತಿ ಸೂಚಿಸುವಂತೆ ಹಿಂದೆಂದೂ ಈ ಊರಿನಲ್ಲಿ ಜಾತಿಯ ಜಗಳ ಆಗಿದ್ದಿಲ್ಲ. ಜಾತಿ ದ್ವೇಷ ಕೋಮು ಗಲಭೆ ಎಂಬುದು ಅವರು ಕನಸು ಮನಸ್ಸಿನಲ್ಲಿಯೂ ಕಂಡಿರಲಿಲ್ಲ. ಇಂತಹ ಸೌಹಾರ್ದಯುತ ಸಾಮಾಜಿಕ, ಸ್ನೇಹಶೀಲ ಗ್ರಾಮದಲ್ಲಿ ಒಮ್ಮಿಂದೊಮ್ಮೆ ಜಾತಿ ಜಗಳದ ದಳ್ಳುರಿ ಕಾಣಿಸಿಕೊಳ್ಳಲು ಕಾರಣವೇನು? ಇದು ಪ್ರಜ್ಞಾವಂತರನ್ನು ಕಾಡುತ್ತಿರುವ ಪ್ರಶ್ನೆ ಹಿಂದೊಮ್ಮೆ ಚೌಡಮ್ಮದೇವಿ ಮೆರವಣಿಗೆಯ ಸಂದರ್ಭದಲ್ಲಿ ಸಣ್ಣ ಕಿಡಿಯಾಗಿ ಕಾಣಿಸಿಕೊಂಡ ಜಾತಿಯ ಜಗಳ ಈಗ ಮತ್ತು ಶ್ರಾವಣ ಮಾಸದ ಶರಣ ಸಪ್ತಾಹ ಕಾರ್ಯಕ್ರಮದ ಸಂದರ್ಭದಲ್ಲಿ ಉಲ್ಬಣಗೊಂಡಿದೆ. ಸಾಮಾನ್ಯವಾಗಿ ಸಭೆ ಸಮಾರಂಭ, ಹಬ್ಬ ಹರಿದಿನಗಳ ಭಾವನಾತ್ಮಕ ಸನ್ನಿವೇಶಗಳನ್ನು ಕೋಮುಗಲಭೆ ಜಾತಿ ದಂಗೆಗಳಿಗೆ ತಿರುಗಿಸುವ ಬಹುಸಂಖ್ಯಾತ ಅಲ್ಪಸಂಖ್ಯಾತರ ನಡುವೆ ಹಸಿಬಿಸಿ ಸುಳ್ಳಿನ ವದಂತಿಗಳ ಮೂಲಕ ವೈಷಮ್ಯ ಹುಟ್ಟಿಸುವ ದುಷ್ಟ ಕೆಲಸ ಕೋಟಾ ದೇಶಭಕ್ತರಾದ ಸಂಘಪರಿವಾರವೇ ಎಂಬುದು ಅನೇಕ ಸಲ ಸಾಬೀತಾಗಿದೆ. ಇಲ್ಲಿಯೂ ಕೂಡ ಅದರ ಕೈವಾಡ ಇರಬಹುದೇ? ಕೆಲವು ದಿನಗಳ ಹಿಂದೆ ಅಳಂಧದಲ್ಲಿ ಕೋಮುಗಲಭೆ ಎಬ್ಬಿಸಲು ಆರ್‌ಎಸ್‌ಎಸ್ ಮತ್ತು ಅದರ ವಿಷ ಕೂಸುಗಳಾದ ಬಜರಂಗದಳ ವಿ.ಹೆಚ್.ಪಿಗಳು ಪ್ರಯತ್ನಿಸಿದನ್ನು ನೋಡಿದರೆ ಇದು ಅಸಾಧ್ಯವೆಂದು ಹೇಳಲಾಗದು. ಗ್ರಾಮದಲ್ಲಿಯ ಸುನೀಲ್ ಕುಲ್ಕರ್ಣಿ ಎಂಬ ಬಿ.ಸಿ.ಎ ವಿದ್ಯಾರ್ಥಿ ಚಟುವಟಿಕೆಗಳು ಇದಕ್ಕೆ ಸಾಕಷ್ಟು ಬೆಂಬಲ ನೀಡುತ್ತಿವೆ. ಧರ್ಮಣ್ಣನ ವಿರುದ್ಧ ಸರ್ಜಪ್ಪಗೌಡ ಕುಟುಂಬವನ್ನು ಎತ್ತಿ ಕಟ್ಟುವದರಲ್ಲಿಯೂ ಈ ಕುಲ್ಕರ್ಣಿಯ ಕರಾಮತ್ತು ಇತ್ತು ಎಂದು ಗ್ರಾಮದಲ್ಲಿಯ ಅನೇಕ ಹಿರಿಯರು ಹೇಳುತ್ತಿದ್ದಾರೆ. ಜಿಲ್ಲಾ ಆಡಳಿತದ ನಿದ್ದೆಗೆಡಿಸಿರುವ ಗೃಹಮಂತ್ರಿ ಮುಖಕ್ಕೆ ನಿತ್ಯ ಮಂಗಳಾರತಿ ಯಾಗಿರುವ ಇದೆಲ್ಲಕ್ಕೂ ಮಿಗಿಲಾಗಿ ಗ್ರಾಮದ ಮೇಲ್ಜಾತಿ ಮತ್ತು ದಲಿತರ ಇಬ್ಬರ ಬದುಕನ್ನು ದಾರುಣ ದುರಂತಕ್ಕೆ ತಳ್ಳುತ್ತಿರುವ ಈ ಘಟನೆಯ ಮೂಲ ನೆಲೆಸೆಲೆ ಹುಡುಕುವುದು ಪೊಲೀಸರ ಆದ್ಯ ಕರ್ತವ್ಯವಾಗಬೇಕು.

ಮನೆಗೆ ನುಗ್ಗಿ ಸೂಟಕೇಸ್, ಟ್ರಂಕ್ ಇತ್ಯಾದಿಗಳನ್ನು ಜಜ್ಜಿ ಜಾಲಾಡಿದ್ದಾರೆ.

ರಾಕ್ಷಸಿ ಪ್ರವೃತ್ತಿಯ ದೊಂಬಿಗಳ ನಡುವೆ ಒಂದು ಸೋಜಿಗ

ದಲಿತರ ಬದುಕಿಗೆ ಆಧಾರವಾಗಿದ್ದ ಎಲ್ಲವನ್ನೂ ಧ್ವಂಸಗೊಳಿಸಿದ್ದು ಕಣ್ಣಿಗೆ ಕಾಣಿಸುತ್ತಿದ್ದರೂ, ಸಂಕಟಕ್ಕೆ ಒಳಗಾದ ದಲಿತರು ತಮಗಾದ ಅನ್ಯಾಯ ಮತ್ತು ನೋವಿಗಾಗಿ ರೋಧಿಸುತ್ತಿದ್ದರೆ ವಿನಃ ಕುತ್ಸಿತ ಬುದ್ಧಿಯಿಂದ ಒಂದೇ ಒಂದು ಸುಳ್ಳು ಹೇಳುತ್ತಿಲ್ಲ. ಈ ಕುಟುಂಬಗಳ ಜನ ತಮ್ಮ ಮನೆಯಲ್ಲಿ ದುಡ್ಡು ಬೆಳ್ಳಿ ಬಂಗಾರ ಕಳುವಾಗಿದೆ ಎಂದು ಹೇಳುತ್ತಿಲ್ಲ. ದಲಿತರು ಬಯಸಿದರೆ ತಾವು ...ಂದಿಷ್ಟು ಹಣ ಬೆಳ್ಳಿ ಬಂಗಾರ ...ೆದುಕೊಂಡಿರುವುದಾಗಿ ಯಾರೂ ...ಬಹುದಾದ ಸುಳ್ಳು ಹೇಳಬಹುದಾಗಿತ್ತು. ...ದು ಅಜ್ಜಿಯ ಮನೆಯಲ್ಲಿ 5 ಗ್ರಾ. ಬಂಗಾರದ ...ರಾಮಣಿ' ಹೋಗಿದೆ ಎಂಬುವುದನ್ನು ಬಿಟ್ಟರೆ

...ಘರ್ಷಣದ ಹುಣ್ಣು

...ವ ದಲಿತರು ತಮ್ಮ ಮನೆ ಲೂಟಿಯಾಗಿದೆ ...ದು ಹೇಳುತ್ತಿಲ್ಲ. ಧರ್ಮಣ್ಣ ಮಾತ್ರ ತನ್ನ ...ನೆಯಲ್ಲಿಯ ರೂ. 35 ಸಾವಿರ ಕಳುವಾಗಿದೆ ...ದು ಹೇಳುತ್ತಿದ್ದಾನೆ. ಈ ಕುರಿತು ಸಮಗ್ರ ...ಖೆಯಾದಲ್ಲಿ ಅದರ ಸತ್ಯಸತ್ಯತೆ ಹೊರಬೀಳಲು ...ರ್ಯ.

...ರು ಸುಟ್ಟ ಮೇಲೆ ಹನುಮ ಹಾಜರು!

...ಸುದ್ದಿ ತಿಳಿದೊಡನೆ ಜಿಲ್ಲಾಧಿಕಾರಿ, ಜಿಲ್ಲಾ ...ಣಾಧಿಕಾರಿ, ಮತ್ತು ಎ.ಎಸ್.ಪಿ. ...ಂತಾದವರು ಅಲ್ಲಿಗೆ ಧಾವಿಸಿದ್ದಾರೆ. ಐ.ಜಿ.ಪಿ ...ಪಯ್ಯನವರು ಕೂಡ ಬೇಟಿಕೊಟ್ಟು ಬಂದಿದ್ದಾರೆ. ...ಎಸ್.ಪಿ. ಡಿ. ಪ್ರಕಾಶ್ ಎರಡು-ಮೂರು ...ಗಳಗಳೊಂದಿಗೆ ಅಲ್ಲಿಯೇ ಠಿಕಾಣಿ ಹೂಡಿದ್ದಾರೆ ...ರ ಪ್ರಕಾರ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಆದರೆ ...ಸ್ಯೆ ಮಾತ್ರ ಉಲ್ಬಣಗೊಳ್ಳುತ್ತಲೇ ಇದೆ. ಅದಕ್ಕೆ ...ಣ ದಲಿತರು ಮೇಲ್ಜಾತಿಯವರು ಎಷ್ಟು ...ಣವೋ ಪೋಲೀಸ್ ಇಲಾಖೆ ಅಷ್ಟೇ ಕಾರಣ ...ದು ಹೇಳಬೇಕಾಗುತ್ತದೆ. ಕೆಲವು ಜನ ...ೋಪಿಗಳ ಹೆಸರುಹಾಕಿ ಮತ್ತು ಇತರರು ಎಂದು ...ು ದಾಖಲಿಸಿಕೊಂಡಿರುವುದರಿಂದ ತಮ್ಮ ...ಬಂದವರನ್ನು ಬಂಧಿಸಿ ಜೈಲಿಗಟ್ಟಿದ್ದಾರೆಂದು ...ಸ್ಸರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ...ತ್ರಿ ಮಾನ್ಯರನ್ನು ಖುಷಿಪಡಿಸಲು ...ಲ್ಜಾತಿಯವರನ್ನು ಹಿಡಿದು ಬಳ್ಳಾರಿ ಜೈಲಿಗೆ ...ಸಿದರೆ ಬಹುಶಃ ಶಾಸಕರನ್ನು ಸಂತೋಷ ...ಸಲು ದಲಿತ ಯುವಕರನ್ನು ಹಿಡಿದು ...ದ್ದಾರೆ. ಆಳಂದ ಶಾಸಕ ಹೇಳಿ ಕೇಳಿ ಒಬ್ಬ ...ಪ್ರಭಾವಿ ರಾಜಕಾರಣಿ ಅವರ ಚಿಂತೆ ...ದಿನ ಚುನಾವಣೆ. ಹೀಗಾಗಿ ಅವರಿಗೆ ...ಸಂಖ್ಯಾತ ಮೇಲ್ಜಾತಿಯವರ ಪರವಾಗಿಯೇ ...ವುದು ಸಹಜ, ನಿಂತಿರುವುದು ಸ್ವಾಭಾವಿಕ, ...ಪಾಲಿಗೆ ಶಾಸಕ ದೇವತೆ ಎಂದು ತಿಳಿದಿದ್ದ ...ಣ್ಣ ಈಗ ಉಪ್ಪು ತಿಂದ ಬೆಪ್‌ನಂತಾಗಿದ್ದಾನೆ. ...ಯಲ್ಲಿ ಬಾಬಾ ಸಾಹೇಬರ ಜೊತೆ ಶಾಸಕರ ...ಫೋಟೋವನ್ನು ಹಾಕಿ ಆರಾಧಿಸುತ್ತಿರುವ ...ರ್ಮಣ್ಣನ ದೇವರು. ಈಗ ದೆವ್ವವಾಗಿ ...ತ್ತಿದ್ದರೇ ಆಶ್ಚರ್ಯ ಪಡಬೇಕಾಗಿಲ್ಲ.

...ರ ಮೌನ ತುಂಬಿ ತುಳುಕುತ್ತಿದೆ

...ಊರಲ್ಲಿ ಒಂದಿಬ್ಬರು ಹಿರಿಯರು, ಸಣ್ಣ ಸಣ್ಣ ...ು ಮಹಿಳೆಯರನ್ನು ಬಿಟ್ಟರೇ ಯಾರೊಬ್ಬ ...ನವನು ನೋಡಲು ಸಿಗುತ್ತಿಲ್ಲ. ಹೊಟೆಲ್ ...ಅಂಗಡಿ ಮುಂತಾದವು ಮುಚ್ಚಿಕೊಂಡಿವೆ. ...ಪುದಕ್ಕಿಂತ ಊರಲ್ಲಿ ಜಾರಿಗೊಳಿಸಿದ

ನಿಷೇದಾಜ್ಞೆಯ ನೆಪದಲ್ಲಿ ಪೋಲೀಸರೇ ಮುಚ್ಚಿಸಿದ್ದಾರೆ. ಹೀಗಾಗಿ ಊರ ವ್ಯವಹಾರವೆಲ್ಲ ನಿಂತು ಹೋಗಿದೆ. ಜನರ ಬದುಕು ಉದ್ವಸ್ಥ ಗೊಂಡಿದೆ. ಇನ್ನು ದಲಿತರ ಸ್ಥಿತಿ ಹೇಳತೀರದು. 2-3 ತಿಂಗಳಿಂದ ಸಾಮಾಜಿಕ ಬಹಿಷ್ಕಾರಕ್ಕೊಳಗಾಗಿ ಕೈಗೆ ಕೆಲಸವಿಲ್ಲದೇ ಕಂಗಾಲಾಗಿದ್ದ ದಲಿತರು ಅನ್ನ ನೀರು ಕಾಣದ ಸ್ಥಿತಿಗೆ ತಲುಪಿದ್ದಾರೆ. ಅಲ್ಲಿಯ ಕೆಲವರು ಸಾಮಾನ್ಯವಾಗಿ ಮುಂಬೈಯಲ್ಲಿ ಇಟ್ಟಿಗೆ ಭಟ್ಟಿಗಳಲ್ಲಿ ದಿನಗೂಲಿಗಳಾಗಿ ಕೆಲಸ ಮಾಡುವವರು. ಅಲ್ಲಿ ವಿಪರೀತ ಮಳೆ ಬಿದ್ದು ಕೆಲಸ ನಿಂತು ಹೋಗಿದ್ದರಿಂದ ತಿರುಗಿ ಊರಿಗೆ ಬಂದರೆ ಊರಲ್ಲಿ ಬಹಿಷ್ಕಾರದ 'ಮಾರಿ' ತಗುಲಿಕೊಂಡಿದೆ. ಇನ್ನೊಂದು ವಿಶೇಶವೆಂದರೆ ಸಾಮಾನ್ಯವಾಗಿ ಮೇಲ್ಜಾತಿಯವರು ತಿಳಿದು ಕೊಂಡಂತೆ ಪೋಲಿಸರ ಉಪಟಳ ಅವರಿಗೆ ಮಾತ್ರ ಸೀಮಿತವಾಗಿಲ್ಲ. ಎ.ಎಸ್.ಪಿ. ಡಿ. ಪ್ರಕಾಶ್ ದೊಡ್ಡ ಕಾರಣ ಮಾಡಿ ಪೋಲೀಸರು ದಲಿತರ ಕೇರಿಯೊಳಗೆ ಹೊಕ್ಕು ಮನಬಂದವರನ್ನು ಥಳಸಿ ತದುಕಿದ್ದಾರೆ. ಭೀತಿಯಿಂದ ದಲಿತ ಯುವಕರು ಮನೆ ಮಾರುಬಿಟ್ಟು ಹೋಗಿ ಅಡವಿ ಸೇರಿಕೊಂಡಿದ್ದಾರೆ. ದಲಿತರ ಕೇರಿಯಲ್ಲಿಯೂ ನಿಮಗೆ ಒಬ್ಬನೇ ಒಬ್ಬ ದಲಿತ ಯುವಕ ಕಾಣಲು ಸಿಗಲಿಲ್ಲ.

ಮನೆ ಒಡೆದು ಹೋಗಿದೆ ಮನ ಬೆಸೆಯುವ ಕೆಲಸ ಆಗಬೇಕಾಗಿದೆ.

ಮೇ 29 ರಂದು ನಡೆದ ಜಾತಿಯ ಗಲಭೆಗೆ ಕಾರಣಗಳನ್ನು ಶೋಧಿಸಿ ಬೇರು ಸಹಿತ ನಿರ್ನಾಮಿಸಿದರೆ ಈಗಿನ ದುರಂತ ಸಂಭವಿಸುತ್ತಿರಲಿಲ್ಲ. ಪ್ರತಿನಿತ್ಯ ಬಸವಾದಿ ಶರಣರ ಬಗ್ಗೆ ಮಾತನಾಡುತ್ತಾ ಶರಣರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದ್ದನ್ನು ಅಭಿಮಾನದಿಂದ ಹೇಳುತ್ತಾ ಶರಣರ ಸಂದೇಶದ ಪ್ರಸ್ತುತೆಯನ್ನು ದಣಿವಿಲ್ಲದೇ ಪ್ರಸಾರ ಮಾಡುತ್ತಿರುವ ವೀರಶೈವ ಮುಖಂಡರು ನಿಂಬರ್ಗಾ ಗ್ರಾಮದ ದಲಿತ ಮತ್ತು ವೀರಶೈವರ ನಡುವಿನ ವೈಷಮ್ಯಕ್ಕೆ ಕಾರಣಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲೇ ಇಲ್ಲ. ಸರಕಾರದ ಮೇಲಿನ ಸೇಡಿಗೆ ಬದಲಾಗಿ ದಲಿತರ ವಿರುದ್ಧ ಸೆಡ್ಡು ಹೊಡೆದು ನಿಂತರೇ ವಿನಃ ಸರ್ಕಾರವೆಂಬುದು ಇಬ್ಬರನ್ನೂ ಒಡೆದಾಳಲು ಪ್ರಯತ್ನಿಸುತ್ತಿದೆ. ಎಂಬ ಸೂಕ್ಷ್ಮವನ್ನೂ ಅರಿಯುವ ಗೋಜಿಗೆ ಹೋಗಲಿಲ್ಲ. ಬದಲಾಗಿ ದಲಿತರ ವಿರುದ್ಧ ಕಲ್ಬುರ್ಗಿ ಬಂದ್‌ಗೆ ಕರೆಕೊಟ್ಟಿದ್ದು ಉಂಟು. ಬಸವರೆಡ್ಡಿ ಇಟಗಿ ಮುಂತಾದವರ ಜಾಗೃತೆಯಿಂದಾಗಿ ಅದು ಘಟಿಸಲಿಲ್ಲ ಆ ಮಾತು ಬೇರೆ.

ಈ ಕ್ಷಣದ ತುರ್ತು

ತಮ್ಮ ಚುನಾವಣಾ ರಾಜಕೀಯ ಪಗಡೆಯಾಟದಲ್ಲಿ ಒಮ್ಮೆ ದಲಿತರನ್ನು ಇನ್ನೊಮ್ಮೆ ಮೇಲ್ಜಾತಿಯವರನ್ನು ಒಮ್ಮೆ ಹಿಂದುಳಿದವರನ್ನು ಮತ್ತೊಮ್ಮೆ ಅಲ್ಪಸಂಖ್ಯಾತರನ್ನು ದಾಳವಾಗಿ ಬಳಸುತ್ತಿರುವ ಅಧಿಕಾರಸ್ಥ ರಾಜಕಾರಣಿಗಳ ಹುನ್ನಾರ ಈಗಲಾದರೂ ಬಯಲಾಗಬೇಕಾಗಿದೆ. ಹಿಂದೆ ಸುಮಾರು ತಿಂಗಳುಗಟ್ಟಲೆ ಜೈಲು ಕಂಡು ಬಂದಿರುವ ಶ್ರೀಮಂತ ವಾಗ್ದರಿ ಮತ್ತು ಸಂಗಡಿಗರು ಆಗ ಕಷ್ಟ ಅನುಭವಿಸಿದರೆ ಈಗ ಅನೇಕ ಜನ ಲಿಂಗಾಯತ ಯುವಕರು ಮತ್ತು ಮೇಲ್ಜಾತಿಯ ಯುವಕರು ಪೊಲಿಸರ ಭೀತಿಯಿಂದ ಅಡವಿಯಲ್ಲಿ ಅಡ್ಡಾಡುತ್ತಿದ್ದಾರೆ. ಶಾಸಕ ತಮ್ಮನ್ನು ರಕ್ಷಿಸುತ್ತಾನೆ ಎಂದು ನಂಬಿರುವ ಮೇಲ್ಜಾತಿಯವರಿಗೆ ಈಗ ಶಾಸಕರ ನಿಜ ಬಣ್ಣಗೊತ್ತಾಗಿದೆ. ಅವರು ಯಾರ ರಕ್ಷಕರೂ ಅಲ್ಲ, ತಮ್ಮ ಖುರ್ಚಿ ಭದ್ರ ಕಾರ್ಯಕ್ರಮವೇ ಅವರಿಗೆ ಪರಮ ಪವಿತ್ರ ಕಾರ್ಯವಾಗಿದೆ ಎಂಬುದು ಈಗ ದಲಿತ ಮತ್ತು ಮೇಲ್ಜಾತಿಯ ಎಲ್ಲರಿಗೂ ಅಂಗೈ ಹುಣ್ಣಾಗಿ ಕಾಣುತ್ತಿದೆ. ಅದಕ್ಕೆ ಕನ್ನಡಿಯಾಕೆ? ಆದ್ದರಿಂದ ಜಿಲ್ಲೆಯ ಉಭಯ ಜನಾಂಗಗಳ ಜನರೂ ಮುಖಂಡರು ಒಟ್ಟುಗೂಡಿ ಪ್ರಗತಿಪರ ರಾಜಕೀಯ ಶಕ್ತಿಗಳ ನೇತೃತ್ವದಲ್ಲಿ ಒಡೆದ ಮನ ಬೆಸೆಯುವ ಕಾರ್ಯ ತುರ್ತಾಗಿ ಆಗಬೇಕಾಗಿದೆ. ಯಾಕೆಂದರೆ ಹಿಂದೆ ಐ.ಜಿ.ಪಿ. ಕೆಂಪಯ್ಯನವರು ಶಾಂತಿ ಸಮಿತಿ ರಚಿಸಿ ಸಮಸ್ಯೆ ಬಗೆಹರಿಸಿದ್ದಾಗಿ ಹೇಳಿದ್ದರೂ ಗೃಹ ಮಂತ್ರಿಗಳ ಮೂಗಿನ ಕೆಳಗೆ ದಲಿತರ ಬಹಿಷ್ಕಾರ ನಿರಂತರವಾಗಿ ಜಾರಿಯಲ್ಲಿತ್ತು ಮತ್ತು ಈಗಲೂ ಇದೆ. ಬಹಿಷ್ಕಾರವೆನ್ನವುದು ಅನಾಗರಿಕವಾದದ್ದು ಮತ್ತು ಅಮಾನವೀಯವಾದ್ದದು. ಪ್ರಜಾಸತ್ತೆಯಲ್ಲಿ ಅದಕ್ಕೆ ಕಿಂಚಿತ್ತು ಸ್ಥಾನವಿಲ್ಲ ಹೀಗಿದ್ದು, ಬಹಿಷ್ಕಾರಕ್ಕೊಳಗಾದ ದಲಿತರ ಬವಣೆಯನ್ನೂ ಇಂದು ಸರ್ಕಾರಾಧಿಯಾಗಿ ಸರ್ವರು ಮನಗಾಣಬೇಕಾದ ಅವಶ್ಯಕತೆ ಇದೆ. ಒಂದಡೆ ಕಾನೂನಿನ ಕ್ರಮ ಜರುಗಿಸುವುದರ ಜೊತೆಗೆ ಸಾಮಾಜಿಕ ಸೌಹಾರ್ದತೆಯನ್ನೂ ಕುದುರಿಸುವ ಕೆಲಸವು ನಡೆಯಬೇಕಾಗಿದೆ. ಶರಣ ಸಂಸತಿಯ ಮಹಾನ್ ಪರಂಪರೆ ಇರುವ ಎಲ್ಲರೂ ಇದನ್ನು ಮಾಡಲು ಮುಂದಾಗಬೇಕು. ಜಾತಿ ವಿನಾಶ ಅವರ ಪವಿತ್ರ ಕರ್ತವ್ಯವಾಗಬೇಕು. ಬುದ್ಧ, ಬಸವ, ಅಂಬೇಡ್ಕರರಿಗೆ ಜಯವಾಗಲಿ ಎಂಬ ಘೋಷಣೆ ನಿಜವಾಗಿಯೂ ಇಬ್ಬರ ಅಂತರಾಳದಿಂದ ಹೊರ ಹೊಮ್ಮುವಂತಾಗಬೇಕು. ಅಂದಾಗ ಮಾತ್ರ ಅಬ್ಬರಿಗೂ ನೆಮ್ಮದಿ, ಉಳಿಗಾಲ ಇಲ್ಲದಿದ್ದರೋ ಇವರಿಬ್ಬರ ಗೋರಿಯ ಮೇಲೆ ಇನ್ನಾವನೋ ಒಬ್ಬ ತನ್ನ ಗುಡಿ ಕಟ್ಟುವುದು ಖಚಿತ.

■ ವರದಿಗಾರ

ನಿಯೋಗ ಭೇಟಿ

ಈ ಪ್ರದೇಶಕ್ಕೆ ಸಿಪಿಐ(ಎಂ) ನಾಯಕ ಮಾನ್ವಡೆ, ಜೆಡಿ(ಎಸ್). ನಾಯಕರಾದ ಬಿ.ಆರ್.ಪಾಟೀಲರ ನೇತೃತ್ವದ ನಿಯೋಗ ಭೇಟಿ ನೀಡಿ ಬಂದಿದೆ.

ಏನಿದು ಕೃತಕ ಮಳೆ ?

ಗುಡಿ-ಗುಂಡಾರಗಳ ಗಂಟೆ ಬಾರಿಸಿ, ಕಪ್ಪೆಗಳ ಮದುವೆ, ಕತ್ತೆಗಳ ಮೆರವಣಿಗ ನಡೆಸಿ ಬೂದಿಬಾಬಾಗಳ ಪವಾಡ, ಯಜ್ಞಗಳೂ ಠುಸ್ಸೆಂದು ಕೈಲಾಸಿ ವಾಸಿಯನ್ನು ತೋರಿಸುತ್ತಿರುವ ಕಾಲದಲ್ಲಿ ಈ ವಿಜ್ಞಾನಿಗಳ ಮಳೆ ಬರಿಸಿದ್ದು ಹೇಗೆ?

ಮೂರು ದಿನದಿಂದ ನಮ್ಮೂರಲ್ಲಿ ದಟ್ಟವಾದ ಕಪ್ಪು ಮೋಡ ತೇಲ್ತಾ ಇದೆ. ಆದರೆ ಒಂದು ಹನಿ ಕೂಡ ಮಳೆ ಇಲ್ಲ. ಇದೆಂತಹ ವಿಪರ್ಯಾಸ. ಪತ್ರಿಕೆಗಳಲ್ಲಿ ಪ್ರತಿದಿನ ಇಂತಹದೇ ಸುದ್ದಿ. ವೈದ್ಯರು ಹೆಮ್ಮೆಯಿಂದ ಹೇಳಿದರು: ಯಶಸ್ವಿ ಶಸ್ತ್ರ ಚಿಕಿತ್ಸೆಯಾಗಿದೆ ಆದರೆ ರೋಗಿ ಬದುಕಲಿಲ್ಲ! ಮೋಡ ಇದೆ.... ಮಳೆ ಇಲ್ಲ.

"ಏನ್ಮಾಡೋದು.. ಪ್ರೆಸಿಪಿಟೇಷ್ನ ಸರಿಯಾಗಿ ಆಗ್ತಾ ಇಲ್ಲ".. ಹವಾಮಾನ ತಜ್ಞರು ಹಲುಬುತ್ತಾರೆ. ಏನು ಹಾಗಂದ್ರೆ? ನಮ್ಮ ಹುಡುಗ(ಗಿ) ತಲೆ ಕೆರ್ಕೋತಾನೆ(ಳೆ). ಮೋಡದಲ್ಲಿ ತೇವಾಂಶ ಇರುತ್ತೆ ತಾನೆ? ಅದು ಹನಿಯಾಗಿ ಪರಿವರ್ತನೆಗೊಂಡು ಭೂಮಿಯ ಮೇಲೆ ಮಳೆ, ಆಲಿಕಲ್ಲು ಅಥವಾ ಇಬ್ಬನಿ ರೂಪದಲ್ಲಿ ಬೀಳುವುದನ್ನು ಅವಪತನ (Precipitation) ಎಂದು ಕರೆಯುತ್ತಾರೆ.

ಮೇಘಗಳಲ್ಲಿ ಹಲವಾರು ವಿಧ. ಭೂದು ಅಥವಾ ಬಿಳಿ ಮೋಡ; ಪದರ ಪದರವಾಗಿ ಅಲ್ಲಲ್ಲಿ ನೀಲಿ ಆಗಸಕ್ಕೆ ತೇಪೆ ಹಚ್ಚಿದಂತೆ ತೇಲೋ ಮೇಘಕ್ಕೆ, ಸ್ತರರಾಶಿ ಮೇಘ (Strato Cumulus) ಎಂದು ಹೆಸರು. ನೋಡೋಕ್ಕೆ ಚೆನ್ನ.... ಮಳೆ ಮಾತ್ರ ಸುರಿಯಲ್ಲ.

ಸೋನೆ ಮಳೆ, ಆಗಾಗ ಹತ್ತಿಯಂತೆ ಉದುರುವ ಹಿಮಕಣಗಳು ಅಥವಾ ಹಿಮದ ಹಳಕು ಸುರಿಸುವ ಮೋಡವೇ ಸ್ತರೀಮೇಘ (Stratus Cloud). ಪದರಪದರದ ಈ ಮೋಡದ ಹಿಂದೆ ಸೂರ್ಯ ಇರಬೇಕು! ಬೆಳ್ಳಿಯ ಬಾರ್ಡರಿನ ಈ ಮೋಡ ನೋಡುವುದೇ ಚಂದ.

ಮೇಲು ಭಾಗ ಘನವಾಗಿರುವಂತೆ ತೋರುವ ದಪ್ಪಮೋಡ. ಇನ್ನೇನು ಮಳೇ ಬಿದ್ದೇ ಬಿಡುತ್ತೆ ಅನ್ನೊ ಭ್ರಮೆ ಹುಟ್ಟಿಸುವ ಮೋಡಕ್ಕೆ ರಾಶಿ ಮೇಘ (Cumulus) ಎನ್ನುತ್ತಾರೆ. ಬಿಸಿಗಾಳಿಯಿಂದಾಗಿ ಮೇಲೇರುವ ಪರ್ವತಾಕಾರದ ಈ ಮೇಘ ನೋಡಲು ಅಂದ.

ಪರ್ವತ ಗಾತ್ರದ ಗಾಢ ಮತ್ತು ಕಪ್ಪು ಬಣ್ಣದ ರಾಶಿ ವರ್ಷ ಮೇಘ (Cumulo Nimbus) ಆಗಸದಲ್ಲಿ ಮಳೆ ಸುರಿಸಲು ಸಿದ್ಧವಾಗಿ ನಿಂತಿರುವ ಜಲರಾಶಿ. ರಾಕ್ಷಸ ಗಾತ್ರದಲ್ಲಿ ವಿನ್ಯಾಸಗೊಳ್ಳುತ್ತಿರುವ ರಾಶಿ ವರ್ಷ ಮೇಘ ಅಥವಾ ಮಳೆ ಮೋಡದ ಕೇಂದ್ರ ಭಾಗದಿಂದ ಪ್ರವಾಹೋಪಾದಿಯಲ್ಲಿ ಹಬೆ ಮೇಲಕ್ಕೆ ಚಿಮ್ಮುತ್ತದೆ. ಇದನ್ನು ಸರಿದೂಗಿಸಲು ಸುತ್ತಲಿನ ಗಾಳಿ ಕೆಳಕ್ಕೆ ನೂಕಲ್ಪಡುತ್ತದೆ. ಎದುರಿಸಬೇಕಾಗುತ್ತದೆ. ಇಂತಹ ವಾತಾವರಣದಲ್ಲಿ ಸಿಕ್ಕಿಹಾಕಿ ಕೊಂಡು ಹೊರಬಂದ ಮೇಲೆ ವಿಮಾನ ಚಾಲಕನಿಗೆ ಬೆಚ್ಚಿ ಬೀಳಿಸುವಂತಹ ಸುದ್ದಿ ಕಾದಿರುತ್ತದೆ. ಮೋಡದೊಳಗೆ ಹಾರುತ್ತಿದ್ದಾಗ ವಿಮಾನ ತಲೆಕೆಳಗಾಗಿ ಚಲಿಸುತ್ತಿರುತ್ತದೆ! ಜಲರಾಶಿ ಮಳೆ ಹನಿಯಾಗಿ ಕೆಳಕ್ಕೆ ಉದುರದೇ ಇದ್ದರೆ?

ಮೊಟ್ಟಮೊದಲಿಗೆ, 1946ರಲ್ಲಿ ವಿನ್ಸೆಂಟ್ ಜೆ.ಷೀಫರ್ ಎಂಬ ಭೌತವಿಜ್ಞಾನಿ ಮೋಡದೊಳಕ್ಕೆ ಶುಷ್ಕ ಬರ್ಫ (Dry Ice)ವನ್ನು ಬಿತ್ತಿ ನೀರು ಹನಿಗೂಡೀ ಮಳೆ ಬೀಳಿಸುವಂತಹ ಪ್ರಯತ್ನ ಮಾಡಿದ. ನೀರು ಹನಿರೂಪಕ್ಕೆ ತಿರುಗಲು ಅದು ಸಾಂದ್ರೀಕರಣಗೊಳ್ಳಬೇಕು. ಇದಕ್ಕೆ ಕೇಂದ್ರ ಬೀಜದ (Nucleus) ಅಗತ್ಯವಿದೆ. ಶುಷ್ಕ ಬರ್ಫದಲ್ಲಿನ ಹಿಮ ಕಣಗಳು ಕೇಂದ್ರ ಬೀಜದಂತೆ ಕೆಲಸ ಮಾಡುತ್ತವೆ. ಇದನ್ನೇ ಕೃತಕ ಮಳೆ ಅಥವಾ ಮೋಡವನ್ನು ಬಿತ್ತುವ (Seeding) ಪ್ರಯತ್ನ ಎನ್ನುತ್ತಾರೆ.

ಷೀಫರ್‌ಗೆ ನಿರೀಕ್ಷಿಸಿದ ಫಲ ದೊರೆಯಲಿಲ್ಲ. ಮುಂದೆ ಬೀಜ ಬಿತ್ತನೆಗೆ (ಭೂಮಿಯಲ್ಲಲ್ಲ.... ಮೋಡದಲ್ಲಿ!) ಸಿಲ್ವರ್ ಅಯೊಡೈಡ್ ಅನ್ನು ಬಳಸಿದರು. ಇದರ ಬೆಲೆ ಜಾಸ್ತಿ. ಇದರ ಹರಳುಗಳ ವಿನ್ಯಾಸ ಬರ್ಫ ಕಣಗಳ ವಿನ್ಯಾಸವನ್ನೇ ಹೋಲುತ್ತದೆ. ಎರಡೂ ಷಡ್ಭುಜಾಕೃತಿಯ ಪಾರಕ ಸ್ಪಟಿಗಳು. ಇದನ್ನು ಸುಟ್ಟರೆ ಆದರೆ ಹೊಗೆಯಲ್ಲಿ ಮೋಡದ ಬಿತ್ತನೆಗೆ ಅಗತ್ಯ ಗಾತ್ರದ ಸೂಕ್ಷ್ಮಕಣಗಳಿದ್ದು ಅವು ಮೋಡದಲ್ಲಿ ಹದವಾಗಿ ಬೆರೆಯುತ್ತವೆ.

ಸಿಲ್ವರ್ ಅಂಯೊಡೈಡ್ ಅಷ್ಟೆ ಪರಿಣಾಮಕಾರಿಯಾದ ಆದರೆ ಅಗ್ಗದ ವಸ್ತು ಸೋಡಿಯಮ್ ಕ್ಲೋರೈಡ್ (ಅಡಿಗೆ ಉಪ್ಪು).

ಪ್ರಯೋಗ ಇಷ್ಟೊಂದು ಸರಳವಾಗಿರುವಾಗ ಬೇಕಾದಾಗ ಮಳೆ ತರಿಸಲು ಯಾಕೆ ಸಾಧ್ಯವಾಗಿಲ್ಲ.


ಪ್ರಯೋಗ ಶಾಲೆಯಲ್ಲಿ ನಿಯಂತ್ರಿತ ಸ್ಥಿತಿಯಲ್ಲಿ ಕಂಡುಹಿಡಿದ ವೈಜ್ಞಾನಿಕ ಸೂತ್ರಗಳನ್ನು ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಅನಿಯಂತ್ರಿತ ನಿಸರ್ಗ ವಿದ್ಯಮಾನಕ್ಕೆ ಅಳವಡಿಸುವಾಗ ಯಶಸ್ಸು ಸಿಗುವುದು ಅತಿ ಕಷ್ಟ ಸಾಧ್ಯ. ಪ್ರಯೋಗದ ವಿನ್ಯಾಸ, ಜಾರಿಗೊಳಿಸುವುದು, ನಿಯಂತ್ರಣ ಮತ್ತು ವಿಶ್ಲೇಷಣೆಗೆ ಅತ್ಯಾಧುನಿಕ ಕಂಪ್ಯೂಟರ್ ನೆರವು ಬೇಕು. ಅತಿ ಹೆಚ್ಚಿನ ನೈಪುಣ್ಯತೆ ಮತ್ತು ಅನುಭವ ಇರಬೇಕು. ಯಾವ ರಾಸಾಯನಿಕ ವಸ್ತು ಬಿತ್ತನೆಗಾಗಿ ಆಯ್ದುಕೊಂಡ ಮೋಡಕ್ಕೆ ಹೊಂದುತ್ತದೆ ಅನ್ನುವ ಖಚಿತ ಮಾಹಿತಿಬೇಕು. ಗಾಳಿ ಬೀಸುತ್ತಿರುವ ದಿಕ್ಕು ಅದರ ವೇಗ, ಮಳೆ ಬೀಳಬೇಕಾದ ಪ್ರದೇಶದ ಭೌಗೋಳಿಕ

ಪುಟ 10 ಕ್ಕೆ

ಕೇರಳದ ವಿದ್ಯಾರ್ಥಿಗಳ ಹೋರಾಟಕ್ಕೆ ಚರಿತ್ರಾರ್ಹ ವಿಜಯ

ಸುಪ್ರೀಂಕೋರ್ಟ್ ತೀರ್ಪನ್ನೇ ಆಧಾರವಾಗಿಟ್ಟುಕೊಂಡು ಶಿಕ್ಷಣದ ಶುಲ್ಕಗಳನ್ನು ಹೆಚ್ಚಿಸಿದ ಸರ್ಕಾರದ ನೀತಿಗಳ ವಿರುದ್ಧ ಧೀರೋದ್ದಾತ ಹೋರಾಟವನ್ನು ವಿದ್ಯಾರ್ಥಿಗಳು ನಡೆಸಿದರು. ಅಂತೋಣಿ ಸರ್ಕಾರದ ದಮನಕಾಂಡವನ್ನು ಎದುರಿಸಿ ವಿಜಯ ಪಡೆದರು.

ಕೇರಳದ ಯುಡಿಎಫ್ ರಾಜ್ಯ ಸರ್ಕಾರ ಶೈಕ್ಷಣಿಕ ರಂಗವನ್ನು ಖಾಸಗೀಕರಣ ಮಾಡಲು ಹೊರಟಾಗ ಇದರ ವಿರುದ್ಧ ಕೇರಳದ ವಿಧ್ಯಾರ್ಥಿ ಸಮೂಹ ನಡೆಸಿದ ಧೀರೋದ್ದಾತ ಹೋರಾಟಕ್ಕೆ ಕಾಂಗ್ರೆಸ್ ನೇತೃತ್ವದ ಆಂಟೋನಿ ಸರ್ಕಾರ ತಲೆಬಾಗಬೇಕಾಯಿತು. 12 ದಿನಗಳ ಕಾಲ ನಡೆದ ವಿದ್ಯಾರ್ಥಿಗಳ ಈ ಹೋರಾಟವನ್ನು ಮುರಿಯಲು ಕಾಂಗ್ರೆಸ್ ಸರ್ಕಾರ ಹಿಂದೆಂದೂ ಕೇರಳ ಕಂಡರಿಯದ ರೀತಿಯಲ್ಲಿ ಭೀಕರ ಪೋಲಿಸ್ ದಬ್ಬಾಳಿಕೆ ನಡೆಸಿತು. ಕೇರಳದ ವಿಪ್ಲವ ಚರಿತ್ರೆಯಲ್ಲಿ ಒಂದು ಅವಿಸ್ಮರಣೆಯ ಅಧ್ಯಾಯವಾಗಿದೆ ಈ ವಿದ್ಯಾರ್ಥಿಗಳ ಹೋರಾಟ. ವಿದ್ಯಾರ್ಥಿಗಳಿಗಿಂತ ಹೆಚ್ಚಿನ ರೀತಿಯಲ್ಲಿ ವಿದ್ಯಾರ್ಥಿನಿಯರು ಈ ಹೋರಾಟದಲ್ಲಿ ಮುನ್ನುಗ್ಗಿ ಭಾಗವಹಿಸಿ ಪೋಲಿಸರ ಲಾಠಿ, ಬೂಟು ದಬ್ಬಳಿಕೆಯನ್ನು ಎದುರಿಸಿದ್ದು ಒಂದು ವಿಶೇಷ. ಸ್ವಾತಂತ್ರ್ಯ ಸಮರದ ದಿನಗಳ ಹೋರಾಟವನ್ನು ನೆನಪಿಗೆ ತರುವ ರೀತಿಯಲ್ಲಿ ಈ 12 ದಿನಗಳ ಕಾಲ ಹೋರಾಟ ನಡೆಯಿತು. ಹಗಲು ದರೋಡೆ ನಡೆಸುವ ಖಾಸಗಿ ಕಾಲೇಜುಗಳನ್ನು ನಿಯಂತ್ರಿಸುವುದು ಹಾಗೂ ಇದಕ್ಕಾಗಿ ಒಂದು



ಆಂಟೋಣಿ ಸರ್ಕಾರದ ಬರ್ಬರ ದಾಳಿ

ಕಾನೂನು ತರಬೇಕು, ಅನ್ಯಾಯದ ದುಬಾರಿ ವಿದ್ಯಾಭ್ಯಾಸದ ಶುಲ್ಕವನ್ನು ಹಿಂತೆಗೆದುಕೊಳ್ಳಬೇಕು, ಸಾರ್ವತ್ರಿಕ ವಿದ್ಯಾಭ್ಯಾಸ ನೀತಿಯನ್ನು ಕಾಪಾಡಲು ಕ್ರಮವಹಿಸಬೇಕು, ವಿದ್ಯಾರ್ಥಿಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಾಪಾಡಲು ಕ್ರಮ ವಹಿಸಬೇಕು, ಏಕೀಕೃತ ವಿಶ್ವವಿದ್ಯಾಲಯ ಕಾನೂನು ತರುವುದನ್ನು ನಿಲ್ಲಿಸಬೇಕು ಇತ್ಯಾದಿ ಬೇಡಿಕೆಗಳಿಗಾಗಿ ಕೇರಳದ ವಿದ್ಯಾರ್ಥಿ ಸಮೂಹ ಹೋರಾಟಕ್ಕಿಳಿಯಿತು.

ಆದರೆ ಎ.ಕೆ. ಆಂಟೋಣಿ ಸರ್ಕಾರ ಶಿಕ್ಷಣ ಮಾರಾಟಗಾರರ ಜೊತೆ ಶಾಮೀಲಾಗಿ, ವಿದ್ಯಾರ್ಥಿಗಳ ಪ್ರಕ್ಷೋಭೆಯನ್ನು ಪೋಲೀಸರ ಮೂಲಕ ದಮನ ಮಾಡುವುದಾಗಿ ಘೋಷಿಸಿದರು.

ಜುಲೈ1 ರಂದು ರಾಜಧಾನಿ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ನಡೆದ ವಿದ್ಯಾರ್ಥಿಗಳ ಮೆರವಣಿಗೆಯನ್ನು ಪೊಲಿಸರು ಶತ್ರು ರಾಷ್ಟ್ರಗಳ ವಿರುದ್ಧ ಆಕ್ರಮಣ ಮಾಡುವ ರೀತಿಯಲ್ಲಿ ಸದೆಬಡಿದರು. ಹೆಣ್ಣುಮಕ್ಕಳನ್ನು ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳ ತಲೆಗಳನ್ನು ಬೀದಿಯಲ್ಲಿ ಚೆಂಡಾಡಿ, ಇವರ ವಿರುದ್ಧ ಸುಳ್ಳು ಮೊಕದ್ದಮೆ ಹೂಡಿ ಜೈಲಿಗೆ ಕಳುಹಿಸಿದರು. 300ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಬಂಧನಕ್ಕೊಳಗಾದರು. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಮೇಲೆ ಪೊಲೀಸರು ಅತಿ ಕ್ರೂರ ರೀತಿಯಲ್ಲಿ ಆಕ್ರಮಣ ನಡೆಸಿದರು. ಪೊಲೀಸರ ಏಟುಗಳಿಂದ ವಿದ್ಯಾರ್ಥಿಗಳ ತಲೆಒಡೆದುಕೊಂಡು, ಕೈಕಾಲು ಮುರಿದುಕೊಂಡು ಬೀದಿಯಲ್ಲಿ ಬಿದ್ದಿದ್ದಾಗ ಇವರನ್ನು ಆಸ್ಪತ್ರೆಗೆ ಸೇರಿಸಲೂ ಪೊಲೀಸರು ತಯಾರಾಗಿರಲಿಲ್ಲ. ಜನಪ್ರತಿನಿಧಿಗಳ ಮಧ್ಯಪ್ರವೇಶದಿಂದಾಗಿ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ತೀವ್ರಗಾಯಗಳಿಂದ ಆಸ್ಪತ್ರೆ ದಾಖಲಾದ ವಿದ್ಯಾರ್ಥಿಗಳ ವಿರುದ್ಧ ಕೊ[...] ಪ್ರಯತ್ನದ ಕೇಸುಗಳನ್ನು ದಾಖಲಿಸಿ ಬಂಧನ[...] ಒಳಪಡಿಸಲಾಯಿತು. ಎಸ್.ಎಫ್.ಐ.ನ ಎ[...] ರಾಜ್ಯ ಮುಖಂಡರ ವಿರುದ್ಧ ಸುಳ್[...] ಮೊಕದ್ದಮೆಗಳನ್ನು ಹೂಡಲಾಯಿತು. ವಿದ್ಯಾರ್ಥಿಗಳ ಹೋರಾಟವನ್ನು ಪೊಲೀಸ[...] ಮೂಲಕ ದಮನ ಮಾಡಬಹುದು ಎಂದು ತಿ[...] ಆಂಟೋನಿ ಸರ್ಕಾರ, ಹೋರಾಟಕ್ಕೆ ಮಣಿದ[...] ನಾಚಿಕೆಯಿಲ್ಲದೆ ವಿದ್ಯಾರ್ಥಿಗಳ ಜೊತೆ ಮಾತುಕತೆ ಮುಂದಾಗಿ ವಿದ್ಯಾರ್ಥಿಗಳ ಬೇಡಿಕೆಗ[...] ಈಡೇರಿಸುವ ಒಪ್ಪಂದಕ್ಕೆ ಬಂದಿತು.

ವಿದ್ಯಾರ್ಥಿಗಳ ಹೋರಾಟವನ್ನು ಕ್ರೂ[...] ರೀತಿಯಲ್ಲಿ ದಮನ ಮಾಡಲು ಪೊಲೀಸ[...] ಶತ್ರುರಾಷ್ಟ್ರಗಳ ವಿರುದ್ಧ ಬಳಸುವ ಗ್ರೆನೇಡ[...] ಅಶ್ರುವಾಯು, ಎಲೆಕ್ಟ್ರಿಕ್ ಲಾಠಿ, ಕಬ್ಬಿಣದ ಮು[...] ಗಳುಳ್ಳ ಲಾಠಿ ಇವೆಲ್ಲ ಆಯುಧಗಳನ್ನು ಬಳಸಿದ[...]

ಪುಟ 11

ಓಟ್‌ನಲ್ಲಿ ಗೆದ್ಕಂಬಿಟ್ಟಿದ್ದೀವಿ ! ಇನ್ಯಾಕೆ ಲೆಕ್ಕ ತೋರ್ಸಬೇಕು

ದಕ್ಷಿಣಾ ಸಚಿವರ ರಕ್ಷಣಾ ಉಪಾಯ !

ಸ್ನೇಹಿತ್ರು : ಹಲೋ.... ಹಲೋ.... ಯಾಕ್ರಿ ಒಂದೇ ಉಸ್ರಿಗೆ ಓಡ್ತಾಯಿದ್ದೀರಿ. ನಿಂತ್ಕೊಳ್ರಿ, ನಿಂತ್ಕೊಳ್ರಿ.

ಆ ಆಸಾಮಿ ನಿಲ್ಲುವ ಪೈಕಿ ಅಲ್ಲವೆನ್ನಿಸಿತು. ಸ್ನೇಹಿತರಿಗೆ ಮತ್ತ ಕೂಗಿದರು.

"ಇಲ್ದೆ ಹೋದ್ರೆ ಬೀದಿ ನಾಯಿ ಹಿಂದೆ ಬೀಳ್ತವೆ".

ಮಂತ್ರಿ : ಅಯ್ಯೋ, ಅಯ್ಯೋ, ಹುಚ್ಚು ನಾಯ್ನ ಅಟ್ಟಿಸಿಕೊಂಡು ಬಂದಂಗೆ ಅಟ್ಟಾಡಿಸ್ತಾ ಅವ್ರೆ ಜಾಗ ಬಿಡಿ - ಜಾಗ ಬಿಡಿ.

ಸ್ನೇಹಿತ್ರು : ಅಲ್ರೀ.... ಯಾರ್ರೀ ನೀವು ನಿಲ್ರಿ. ನಿಲ್ರಿ... ಆ... ನೀವಾ ದಕ್ಷಣಾ ಸಚಿವ್ರು. ಏನಾಯ್ತು?

ಮಂತ್ರಿ : ಏನೂ ಇಲ್ಲಾರಿ, ಏನೂ ಆಗ್ಲಿಲ್ಲ.

ಸ್ನೇಹಿತ್ರು : ಅಯ್ಯೋ ಮತ್ಯಾಕೆ ಒಳ್ಳೆ ಜೂಲ್ ನಾಯಿ ಮುಖದ್ ಮೇಲೆ ಕೂದ್ಲು ಜೋತ್ ಬಿದ್ದಂಗೆ ಮುಖ ಜೋತಾಡ್ತಿದೆ.

ಮಂತ್ರಿ : ಅದೇ ಪಾರ್ಲಿಮೆಂಟಲ್ಲಿ ಗೆದ್ರೆ, ಇಲ್ಲಟ್ಟಿಸ್ಕೊಂಡ್ ಬಂದ್ರಲ್ಲ ಏನ್ ಮಾಡ್ಲಿ.

ಸ್ನೇಹಿತ್ರು : ಅಲ್ಲಾ ಕಣ್ರೀ, ನಿಮ್ಗೆ ಈ ಕಡಿಯೋ ಖಾಯಿಲೆ ಯಾವಾಗ್ನಿಂದ ಶುರುವಾಯ್ತು. ಕಚ್ಚಿದೇಕೆ ಆ ಮೇಲೆ ಈ ಫಜೀತಿ ಯಾಕೆ.

ಮಂತ್ರಿ: ಇಲ್ಲ ಇಲ್ಲ. ನಾನೇನು ಮಾಡ್ಲಿಲ್ಲ, ನಂದೇನು ತಪ್ಪಿಲ್ಲ.

ಸ್ನೇಹಿತ್ರು: ತಿನ್ನಬಾರದ್ದೆಲ್ಲ ತಿಂದ್‌ಬಿಟ್ಟು ಪಾರ್ಲಿಮೆಂಟ್ನೆ ಕಚ್ಚಕೋಗಿದ್ದುನ್ನ ದೇಶ ಎಲ್ಲ ನೋಡ್ಲಿಲ್ವ. ತಪ್ಪೇ ಇಲ್ಲಾ ಅಂತಾ ನಿರಾಕರಿಸ್ತೀರಲ್ಲಾ ಆ ಹಾಳಾದೋರ್ ಜೊತೆ ಸೇರಿ ನೀವು ದಗಲ್ಬಾಜಿ ಕಲ್ತ್‌ಬಿಟ್ರಾ.

ಮಂತ್ರಿ : ನಾನೊಬ್ನೆ ಏನ್ ತಿಂದಿಲ್ಲ. ಎಲ್ಲಾ ಹಂಚ್ಕೊಂಡೆ ತಿಂದಿದ್ದು. ಆದ್ರೆ ಲೆಕ್ಕ ಮಾತ್ರ ನಾನ್ ಕೊಡ್ಬೇಕಾ.

ಸ್ನೇಹಿತ್ರು : ಓಹೋ- ತಿನ್ನಬಾರದ್ದುನ್ನ ಎಲ್ರು ಪಾಲ್ ಬೇರೆ ಮಾಡ್ಕೊಂಡ್ ತಿಂದ್ರಾ - ಅದಕ್ಕೇ ಅಂಥ ಒಗ್ಗಟ್ಟು. ನಿಮ್ಗೇ ಓಟು, ಅಲ್ವಾ.

ಮಂತ್ರಿ : ಹಸ್ತ ತೋರ್ಸ್ತೋರೇನು ತಿಂತಿರಲಿಲ್ಲವಾ ನಾವು ಅದನ್ನೇ ಮುಂದ್ವರ್ಸಿದ್ದು.

ಸ್ನೇಹಿತ್ರು : ನಾನಲ್ಲಿ ಇಲ್ಲ ಅಂದೆ. ಅವ್ರು ಬೆರಳು ನುಂಗ್ತಿದ್ರು, ನೀವು ಹಸ್ತನೇ ನುಂಗ್ತಿದ್ದೀರಾ ಅಂದೆ.

> **ಶಸ್ತ್ರಾಸ್ತ್ರ ಖರೀದಿ ಲೆಕ್ಕ ಕೊಡ್ದಲೆ ಬಾಯೊಡ್ದು ವಿಶ್ವಾಸಮತ ಗೆದ್ದು ದಕ್ಷಿಣಾ ಸಚಿವರು ಬೀಗ್ತಾ ಬೀದಿಗೆ ಬಂದ್ರು. ಆದ್ರೆ ಜನ ನೋಡಿದವ್ರು ಅಟ್ಟಿಸ್ಕೊಂಡ್ ಬಂದ್ರು. ಹೀಗೆ ಓಡ್ತಾ ಇದ್ದಾಗ ನಡುವಿನಲ್ಲಿ ಸ್ನೇಹಿತ್ರೊಬ್ರು ಕೈಗೆ ಸಿಕ್ ಬಿದ್ರು. ಇಬ್ರು ಸೇರಿ ಮಾತುಕತೆ ನಡ್ಸೋವಾಗ 'ನಗಾರಿ'ಯುವರು ಅಲ್ಲೇ ಇದ್ರು. ಸುದ್ದಿ ತಂದ್ರು.... ಸಿಕ್ಕಿಬಿದ್ದ ಆಸಾಮಿ ಹೇಳಿದ್ದೇನು?**

ಅಷ್ಟೇ.

ಮಂತ್ರಿ: ಎಲ್ಲ ಸೇರ್ಕೊಂಡು ನನ್ನ ಬಾಯಿಗೆ ಬಂದಂಗೆ ಬಯ್ತಾ ಅವ್ರಲ್ಲ ಸರೀನಾ.

ಸ್ನೇಹಿತ್ರು: ತಪ್ಪೇನಿಲ್ಲಾ ಬಿಡು. ಹೌದು ನಿಮ್ಗೆ ಬೈಯ್ಗಳ, ಟೀಕೆ ಇವೆಲ್ಲಾ ಅರ್ಥ ಆಗುತ್ತಾ.

ಮಂತ್ರಿ : ಹೂಂ. ಒಂದೊಂದು ಅರ್ಥ ಆಗ್ತವೆ. ಆ ದೇವೇಗೌಡ್ರು ನನ್ನ, ಬರ್‌ಬರ್ತಾ ರಾಯರ ಕುದ್ರೆ ಕತ್ತೆ ಆಗೋಯ್ತು ಅಂದ್ರು ಆರೆಸ್ಸೆಸ್‌ನೋರಿಗಿಂತ ಶಾರ್ಟ್ ಚೆಡ್ಡಿ ಹಾಕ್ಕೊಂತಿಯ ನಾಚ್ಕೆ ಆಗಲ್ವಾ ಅಂತ ಬೇರೆ ಬೈದ್ರು.

ಸ್ನೇಹಿತ್ರು : ಇನ್ನೂ ಚೆನ್ನಾಗಿ ಬೈಯ್ಬೇಕಾಗಿತ್ತು. ಪಾರ್ಲಿಮೆಂಟು ಅಂದ್ರೆ ಎಲ್ಲಾ ನುಂಗೋರೆ ಇರದು ಅಂತ ತಿಳ್ಕೊಂಬಿಟ್ಟಿದ್ದಾ. ಆಡಿದ್ದೇ ಆಟ, ಹೂಡಿದ್ದೆ ಲಗ್ಗೆ ಆಗ್ಬಿಟ್ಟಿತ್ತು ನಿಮ್ಗೆ. ಸೋಮ್‌ನಾತ್ ಚಟರ್ಜಿ ಲೆಕ್ಕ ಕೊಟ್ ಮಾತಾಡು ಅಂತಿದ್ರಲ್ಲ ಅವಾಗೇನೇಳ್ದಿ

ಸ್ನೇಹಿತ್ರು: ಚಲ್ಲ ಆರ್ಸ್ಸಿ ಸನ್ನತ್ರ ಇರಬೇಕಾದ ಲೆಕ್ಕ

ಬೊಗ್ಳು. ಹಸ್ತ ತೋರ್ಸಿ ತಪ್ಪುಸ್ಕಳದಲ್ಲ.

ಮಂತ್ರಿ: ಲೆಕ್ಕ ಕೊಟ್ರೆ ದೇಶುದ್ದು ಮಾನ ಮರ್ಯಾದೆ, ಗೋಪ್ಯತೆ ಎಲ್ಲಾ ಹೋಗ್ಬಿಡುತ್ತೆ ಅಂದೆ.

ಸ್ನೇಹಿತ್ರು: ಅಮೇರಿಕಾದೋರು ಕೇಳಿದ್ರೆ ಭಾರತಾಂಬೆನೆ ಮಾರಾಟಕ್ಕಿಟ್ಟಿದ್ದೀವಿ ಕೊಂಡ್ಕಳಿ ಅಂತಿರಾ. ಲೆಕ್ಕ ಕೇಳಿದ್ರೆ ಮಾತ್ರ ಭಾರತಮಾತೆ ಮಾನ ಹೋಗುತ್ತಾ.

ಮಂತ್ರಿ : ಅಯ್ಯೋ ನಿಜ ಅದಲ್ಲ. ಲೆಕ್ಕ ಎಲ್ಕೈತೆ ನನ್ನತ್ರ ಕೊಡಕೆ. ಎಲ್ಲರತ್ರ ಸ್ವಲ್ಪ ಸ್ವಲ್ಪ ಸೇರ್ಕೊಂಬಿಟ್ಟೈತೆ ನಾನೇನ್ ಮಾಡ್ಲಿ.

ಸ್ನೇಹಿತ್ರು: ಹಾಳ್ ಬಾವಿಗೆ ಬಿದ್ ಸಾಯಿ, ಕಾಯೋ ಕೆಲ್ಸಕ್ಕೆ ತಾನೆ ನಿನ್ನ ನೇಮ್ಕ ಮಾಡಿರದು. ನೆಟ್‌ಗೆ ನೀನೆ ಈ ಕೆಲ್ಸ ಮಾಡಕ್ಕಾಗಲ್ವಾ.

ಮಂತ್ರಿ: ಅದೊಂದೆ ಕೆಲ್ಸ ಅಲ್ಲ ನನಗೆ. ನಮ್ದು ಇಪ್ಪತ್‌ನಾಲ್ಕು ಪಾರ್ಟಿ ಕೂಟ. ದಿನಾ ಕಾಯ್ಸಿ ಕಾಯ್ಸಿ ಬಳಸ್ಬೇಕು. ಇಲ್ಲಾ ಅಂದ್ರೆ ಹಳಸೋಗುತ್ತೆ. ಈ ಕೆಲ್ಸನೂ ನನ್ದೆ. ಜೊತೆಗೆ ಕಾಯಕೆಲ್ಸ- ಗೊತ್ತಾ. ಎಲ್ಲಾ ಮಾಡ್ತಿದ್ದೀನಲ್ಲಾ.

ಸ್ನೇಹಿತ್ರು: ಮಾಡ್ತಿದ್ದೀಯ ಮಣ್ಣು. ಬಿಡಬಾರ್ದೋರ್ನೆಲ್ಲಾ ಒಳಗಡೆ ಬಿಡದು. ಬಂದೂಕು ಪಿಸ್ತೂಲು ಕದ್ದು ಮಾರದು. ಹೊಸ ಖರೀದಿ ಮಾಡ್ದೆ ಅಂತ ಸುಳ್ಳು ಲೆಕ್ಕ ಕೊಡದು ರೌಡಿಗುಳು, ಪುಂಡ್ರು-ಪೋಕ್ರಿಗಳಿಗೆಲ್ಲಾ ತ್ರಿಶೂಲ, ಮಚ್ಚು ಹಂಚಿಕ್ ಬಿಟ್ಬಿಟ್ಟು ಕೈ ಕಟ್‌ಕೊಂಡು ನಿಂತ್ಕಳದು. ಇದೇ ನೀನ್ ಮಾಡ್ತಿರದು.

ಯಾಕಪ್ಪಾ ಸಮಾಜವಾದಿ ಈ ರೀತಿ ಮಾಡ್ತೀಯಲ್ಲಾ ಅಂದ್ರೆ, ವಾಜಪೇಯಿ ಥರ ಸಮರ್ಥನೆ ಮಾಡ್ಕಳದು ಅಲ್ವಾ.

ಮಂತ್ರಿ: ನಾನು ಅವಾಗ ಸಮಾಜವಾದಿ ಈಗ ಮಜಾವಾದಿ.



ದುಡ್ಡು ಅವರಿವ್ರತ್ರ ಯಾಕೋಯ್ತು.

ಮಂತ್ರಿ: ಅವರೆಲ್ರೂ ಸೇರಿ ತಾನೆ ನನ್ನ ರಕ್ಷಣಾ ಮಂತ್ರಿ ಅಂತ ಕಾಯಕ್ಕಿಟ್‌ಕಂಡಿರದು.

ಸ್ನೇಹಿತ್ರು: ಓ ಹೋ ಹೋ... ನಿನ್ನ[...] ನೇಮಿಸ್ಕೊಂಡಿರದು ಅವರನ್ನ ಕಾಯಕೆ, ದೇ[...] ಕಾಯಕಲ್ಲ. ಈಗರ್ಥ ಆಯ್ತು ಬಿಡು. ಅದ[...] ನೀನವರಿಗೆ ಋಣ ತೀರಿಸ್ತಿದ್ದೀಯಾ.

ಮಂತ್ರಿ: ನಿನ್ನತ್ರ ಮುಚ್ಚಿಡದೇನು. ನಾನೂ[...] ಅಷ್ಟೋ ಇಷ್ಟೋ ಮಾಡ್ಕೊಂಡು ಅವರಿಗು[...] ಬೇಕಾದಷ್ಟು ಬಿಟ್‌ಕೊಟ್ಟೆ.

ಸ್ನೇಹಿತ್ರು: ರಕ್ಷಣಾ ಬಜೆಟ್ ಯಾಕ[...] ಅಷ್ಟೊಂದು ಜಾಸ್ತಿಯಾಯ್ತು ಅಂತ[...] ಈಗ್ಗೊತ್ತಾಯ್ತುಬಿಡು. ಅದ್ಸರಿ ಅಧಿಕಾ[...] ಕೊಟ್ಟೋರು ಜನ ಅಲ್ವಾ, ಅವರಿಗೇನ್ ಕೊಟ್ಟೆ

ಮಂತ್ರಿ : ಇಷ್ಟೊತ್ತು ಹೇಳಿದ್ನಲ್ಲ ಬೇಕಾದ[...] ಕೊಟ್ಟಿದ್ದೀನಿ ಅಂತ.

ಸ್ನೇಹಿತ್ರು : ದೇಶ ಅಂದ್ರೆ ಅವ್ರೆ. ಆಯ್ತು ಈಗೇ[...] ಕೋಟ್ಯಾಂತರ ರೂಪಾ[...] ಶಸ್ತ್ರಾಸ್ತ್ರ ಖರೀದಿ [...] ಯಾವಾಗ ಕೊಡ್ತೀಯಾ.

ಮಂತ್ರಿ : ಇನ್ಯಾಕ್ ಕೊ[...] ಇನ್ನ ಕೊಡಲ್ಲ. ಓಟ್‌ನ[...] ಗೆದ್ಬಿಟ್ಟೆ. ಎಂ.ಪಿ. ಗೋ[...] ಓಟ್ ಸಾಲ್ದ, ಇನ್ಮೇಲೆ ಲೆಕ್ಕ ಇಲ್ಲ ಪಕ್ಕನು ಇಲ್ಲ.

ಸ್ನೇಹಿತ್ರು : ಚುನಾವಣೆ [...] ಇರು ಜನ ನಿನ್ [...] ಮುರಿತರೆ.

ಮಂತ್ರಿ : ನಾನು ಓಟ್ ಕೇ[...] ಬರಲ್ಲ. ದುಡ್ಡು ಮಾಡ್ಕೊಂಡಿಲ್ವ. ಹಿಂ[...] ಬಾಗ್ಲಿಂದ ಪಾರ್ಲಿಮೆಂಟಿಗೆ ಬರ್‍ತಿನಿ.

ದಕ್ಷಿಣಾ ಸಚಿವರ ಭಂಡತನ ಸ್ನೇಹಿ[...] ರೇಗಿಸಿತು. ಅಷ್ಟರಲ್ಲೇ ಸಿಪಿಐ(ಎಂ)ನ ಜ[...] ವ್ಯಾನು ಬಂತು. ನೋಡಿದವನೇ ಮತ್ತೆ ಓ[...] ಮಜಾವಾದಿ! ಇವರಿಗೆ ಬುದ್ಧಿ ಕಲಿಸಬೇ[...] ಮುಂದಿನ ಚುನಾವಣೆನೇ ಎಂದು ಪ್ರಚಾರ[...] ಹೋರು ಸ್ನೇಹಿತರು.

ಪ್ರಧಾನಮಂತ್ರಿಗಳ ಮೋಸದಾಟ ನಡೆಯುವುದೇ ?

ಹರ್ಕಿಶನ್ ಸಿಂಗ್ ಸುರ್ಜಿತ್

ಪ್ರಧಾನಿಯವರ ಕೆಂಪು ಕೋಟೆಯ ಭಾಷಣ ಕಳಾಹೀನ. ನಿಜ ಸಂಗತಿಯೆಂದರೆ ವಾಜಪೇಯಿಯವರಿಗೆ ತನ್ನ ಆಳ್ವಿಕೆಯ ಕಳೆದ ನಾಲ್ಕು ವರುಷಗಳ ಸಾಧನೆ ತೋರಿಸಲು ಏನೂ ಇರಲಿಲ್ಲ. ಬೊಗಳೆಯೊಂದನ್ನು ಬಿಟ್ಟು...

ಈ ಬಾರಿಯ ಪ್ರಧಾನಮಂತ್ರಿಗಳ ಸ್ವಾತಂತ್ರ್ಯದಿನದ ಭಾಷಣ ಇದುವರೆಗಿನ ಈ ಸಂದರ್ಭದ ಭಾಷಣಗಳಲ್ಲೇ ಅತ್ಯಂತ ಕಳಾಹೀನ ಎಂದು ಇತಿಹಾಸದಲ್ಲಿ ದಾಖಲಾಗುತ್ತದೆ. ನಿಜ, ಮಳೆ ಕೆಂಪು ಕೋಟೆಯಬಳಿ, ಸೇರಿದ್ದ ಸಣ್ಣ ಜನಜಂಗುಳಿಯ ಉತ್ಸಾಹ ಕುಂದಿಸಿತ್ತು. ಆದರೆ ಮಳೆ ಈ ಸಮಯದಲ್ಲಿ ಸಾಮಾನ್ಯ ತಾನೇ? ನಿಜಸಂಗತಿಯೆಂದರೆ ವಾಜಪೇಯಿಯವರಿಗೆ ತನ್ನ ಆಳ್ವಿಕೆಯ ಕಳೆದ ನಾಲ್ಕು ವರ್ಷಗಳ ಸಾಧನಗಳ ಬಗ್ಗೆ ತೋರಿಸಲು ಏನೂ ಇರಲಿಲ್ಲ.

ಪ್ರಧಾನಮಂತ್ರಿಗಳು ಎಂದಿನಂತೆ ಜಂಭಕೊಚ್ಚಿಕೊಂಡುದರಲ್ಲಿ ಆಶ್ಚರ್ಯವಿಲ್ಲ. ಏನಾದರೂ ಹೇಳಲೇಬೇಕಲ್ಲವೇ? ಆದರೆ ಪತ್ರಿಕೆಗಳು ಹೇಳಿದಂತೆ, ಬಹಳ ಹೊಸ ಅಂಶಗಳೇನೂ ಅದರಲ್ಲಿರಲಿಲ್ಲ, ಉದಾಹರಣೆಗೆ ಕಳೆದ 50 ವರ್ಷಗಳಲ್ಲಿ ನಿರ್ಮಿಸಿದಷ್ಟು ರಸ್ತೆಗಳನ್ನು ಕಳೆದ 5 ವರ್ಷಗಳಲ್ಲಿ ನಿರ್ಮಿಸಿದ್ದಾರಂತೆ. ಈ ಮಾತು ಅದರ ಹಿಂದಿನ ಎರಡು ಸ್ವಾತಂತ್ರ್ಯದಿನದ ಭಾಷಣಗಳಲ್ಲೂ ಇತ್ತು. ಇದನ್ನು ನಿಜವೆಂದಿಟ್ಟುಕೊಂಡರೂ ದಿಲ್ಲಿಯ ಸ್ವಲ್ಪ ಹೊರಗೆ ಹೊರಗೆ ಹೋಗಿ ಗ್ರಾಮೀಣ ರಸ್ತೆಗಳ ದುಸ್ಥಿತಿಯನ್ನು ನೋಡಿದರೆ ಸಾಕು. ನಿಜಸ್ಥಿತಿ ಅರ್ಥವಾಗುತ್ತದೆ. ರಾಷ್ಟ್ರೀಯ ರಾಜಧಾನಿಯ ಸಮೀಪವೇ ಈಗಿರುವಾಗ ಪೂರ್ವ ಯು.ಪಿ, ಬಿಹಾರ್, ಝಾರ್ಖಂಡ್, ಒರಿಸ್ಸಾ, ಮತ್ತಿತರ ಕಡೆಗಳ ಬಗ್ಗ ಹೇಳದಿರುವುದೇ ಒಳ್ಳೆಯದು.



ಉಪವಾಸವೇ ಕುಂತು ಮಾತು ಕೇಳದ ಮಕ್ಕಳು

ಹೀಗಿರುವಾಗ ಜನಸಾಮಾನ್ಯರಿಗೆ ಇಂತಹ ಸಂದರ್ಭಗಳಲ್ಲಿ ನಮ್ಮ ಅಳರಸರ ಎಂದಿನ ಭಾಷಣದಲ್ಲಿ ಆಸಕ್ತಿ ಉಳಿಯದಿರಲು ಬೇರೆ ಕಾರಣಗಳು ಬೇಕಿಲ್ಲ. ಅಲ್ಲಿನ ಸಭಿಕರಲ್ಲಿ ಎರಡು ಗುಂಪುಗಳಿದ್ದವು. ಒಂದು, ಸರ್ಕಾರಿ ಸೇವಕರದ್ದು, ಅವರು ಅಲ್ಲಿರಬೇಕಿತ್ತು. ಇನ್ನೂ ಅಲ್ಲಿದ್ದವರು 11-13 ವಯೋಗುಂಪಿನ ಮಕ್ಕಳು ಹಿಂದುಸ್ತಾನ್ ಟೈಮ್ಸ್ ವರದಿಯ ಪ್ರಕಾರ ಅವರನ್ನು ಹಿಂದಿನ ದಿನ ಶಾಲೆಗಳಲ್ಲಿಯೇ ಉಳಿಸಿಕೊಂಡು ಆಗಸ್ಟ್ 15ರ ಬೆಳಿಗ್ಗೆ ಕೆಂಪು ಕೋಟೆಯ ಬಳಿ ಒಯ್ಯಲಾಯಿತಂತೆ. ಬರಿ ಹೊಟ್ಟೆಯಲ್ಲೇ. ಉಪಾಹಾರಕೊಟ್ಟದ್ದು ಪ್ರಧಾನ ಮಂತ್ರಿಗಳು ಭಾಷಣ ಮಾಡಿ ಹೊರಟು ಹೋದಮೇಲೆಯೇ.


ನಾಳೆಯ ಭಾರತವನ್ನು ನಿರ್ಮಿಸಬೇಕಾದವರು" ಬರೀ ಹೊಟ್ಟೆಯಲ್ಲೇ ಇಂದಿನ ಆಳರಸು ಭಾಷಣ ಕೇಳಬೇಕಾಗಿ ಬಂದದ್ದು ಕ್ರೂರ ಅಪಹಾಸ್ಯವೇ ಸರಿ.

ರೈತರ ಬಗ್ಗೆ - ಹೇಳುವುದೊಂದು, ಮಾಡುವುದೊಂದು.

ಪ್ರಧಾನ ಮಂತ್ರಿಗಳ ಇನ್ನೊಂದು ಅಭಯ ಹೇಳಿಕೆಯೆಂದರೆ ರೈತರ ಆದಾಯ ಮುಂದಿನ ಏಳು ವರ್ಷಗಳಲ್ಲಿ ದ್ವಿಗುಣವಾಗುತ್ತದೆ ಎಂಬುದು. ಮುಂದಿನ 5 ವರ್ಷಗಳಿಗೆ ಮತ ಯಾಚಿಸುವಂತಿದೆಯಲ್ಲವೇ? ಆದರೆ ಈ ಭ್ರಮೆಯನ್ನು ಸೃಷ್ಟಿಸುತ್ತಿರುವುದು ಕೃಷಿಕರಂಗದಲ್ಲಿ ಅತ್ಯಂತ ಆತಂಕಕಾರಿ ಘಟನೆಗಳ ಹಿನ್ನೆಲೆಯಲ್ಲಿ. ಒಂದೆಡೆ ಸರಕಾರದ ಗೋದಾಮುಗಳಲ್ಲಿ 6 ಕೋಟಿ ಟನ್ ಆಹಾರ ಧಾನ್ಯಗಳು ಕೊಳೆಯುತ್ತಿದ್ದ ಒರಿಸ್ಸಾ,ರಾಜಸ್ತಾನ, ಮತ್ತಿತರ ರಾಜ್ಯಗಳಲ್ಲಿ ಜನ ಹಸಿವಿನಿಂದ ಸಾಯುತ್ತಿದ್ದಾರೆ. ಗೋದಾಮುಗಳಲ್ಲಿ ಧಾನ್ಯಗಳನ್ನು ಬಡಜನರಿಗೆ ಪರಿಹಾರ ನೀಡಲು ಬಳಸುವ ಬದಲು ಅವರಿಂದ ಕೇಳುವ ಬೆಲೆಗಿಂತಲೂ ಕಡಿಮೆ ಬೆಲೆಗೆ ರಫ್ತು ಮಾಡಲಾಗುತ್ತಿದೆ, ಈ ದಾಸ್ತಾನಿನ ಕೊಳೆತ ಭಾಗವನ್ನು ಸಮುದ್ರಕ್ಕೆಸೆಯಲಾಗುತ್ತಿದೆ? ಇಷ್ಟೇ ಅಲ್ಲ ಪಂಜಾಬ್, ಮಹಾರಾಷ್ಟ್ರ, ಕರ್ನಾಟಕ, ಆಂಧ್ರದಂತಹ ಇತರರಿಗಿಂತ ಹೆಚ್ಚು ಸಮೃದ್ಧಿಶೀಲ ರಾಜ್ಯಗಳಲ್ಲೂ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದೂ ಈ ವಾಜಪೇಯಿ ಆಳ್ವಿಕೆಯಲ್ಲೇ. ಏಕೆಂದರೆ ಈ ಆತ್ಮಹತ್ಯೆಗಳಿಗೆ ಒಂದು ಕಾರಣ ವಾಜಪೇಯಿ ಸರ್ಕಾರದ ನೀತಿಗಳಿಂದಾಗಿ ಈ ರೈತರ ಉತ್ಪನ್ನಗಳು ಪಾಶ್ಚಿಮಾತ್ಯ ದೇಶಗಳ ಸರಕಾರಗಳಿಂದ ವಿಪರೀತ ಸಬ್ಸಿಡಿಗಳನ್ನು ಪಡೆದು ಬಹಳ ಅಗ್ಗವಾಗಿರುವ ಉತ್ಪನ್ನಗಳೊಂದಿಗೆ ಸ್ಪರ್ಧಿಸಬೇಕಾಗಿದೆ. ವಾಜಪೇಯಿ ಸರಕಾರ ಸಬ್ಸಿಡಿಗಳನ್ನು ನೀಡುವ ಬದಲು ಅದನ್ನು ಸಹಜವಾಗಿ ಕಡಿತಗೊಳಿಸುತ್ತಾ ಸಾಗಿದೆ!.

ಕೋಟಿ ಉದ್ಯೋಗಗಳಲ್ಲಿ!

ಇನ್ನೊಂದು ಬೊಗಳೆ ಉದ್ಯೋಗಕ್ಕೆ ಸಂಬಂಧಪಟ್ಟದ್ದು, ಇದರಲ್ಲೂ ಹೊಸತಿಲ್ಲ. ಕಳೆದ ವರ್ಷದಲ್ಲೂ ಒಂದು ಕೋಟಿ ಉದ್ಯೋಗ ನಿರ್ಮಾಣದ ಮಾತು ಹೇಳಿದ್ದರು. 10 ನೇ ಯೋಜನೆಯ 5 ವರ್ಷಗಳಲ್ಲಿ 5 ಕೋಟಿ ಉದ್ಯೋಗಗಳ ನಿರ್ಮಾಣದ ಮಾಡಿದೆ. 1999ರ ಚುನಾವಣಾ ಭರವಸೆಗಳಲ್ಲೊಂದಾದ ಇದು ಇನ್ನೂ ಮಾತಿನ ಮಟ್ಟದಲ್ಲೇ ಉಳಿದಿದೆ. ಇಲ್ಲಿ ವಾಸ್ತವವಾಗಿ ಇರುವ ಉದ್ಯೋಗಾವಕಾಶಗಳನ್ನು ಕೊಲ್ಲಲಾಗುತ್ತಿದೆ. ಸರಕಾರ ಆಗಸ್ಟ್ 7 ರಂದು ರಾಜ್ಯ ಸಭೆಗೆ ನೀಡಿದ ಅಂಕಿ-ಅಂಶಗಳ ಪ್ರಕಾರವೇ ಶೇರು ಮಾರಾಟ ಮತ್ತು ರಿಟ್ರೆಂಚ್‌ಮೆಂಟ್‌ಗಳ ಹಿನ್ನೆಲೆಯಲ್ಲಿ 2000 ದಿಂದ 2001ರ ನಡುವೆ ಶೇ. 23.8 ರಿಟ್ರೆಂಚ್‌ಮೆಂಡ್‌ಗಳು ನಡೆದವು. 2001ರಿಂದ 2002ರ ನಡುವೆ ಹಾಗೂ 2002ರಿಂದ 2003ರ ನಡುವೆ ಮತ್ತೆ ಶೇ. 10 ರಿಟ್ರೆಂಚ್‌ಮೆಂಟ್‌ಗಳು ನಡೆದವು. ಇಷ್ಟೇ ಅಲ್ಲ, 712 ವಲಯಗಳಲ್ಲಿ ಇನ್ನು ಮುಂದೆ ಯಾರನ್ನೂ ನೌಕರಿಗೆ ಸೇರಿಸಿಕೊಳ್ಳಬಾರದು ಎಂಬ ಪ್ರಸ್ತಾವಕ್ಕೆ ಸರ್ಕಾರ ಅಸ್ತು ಎಂದಿದೆ. ಇದರಲ್ಲಿ ಶಿಕ್ಷಣ ಮತ್ತು ಆರೋಗ್ಯ ವಲಯಗಳಿಗೂ ಸೇರಿವೆ. ಅಲ್ಲದೆ ಯಾವುದೇ ಖಾಸಗಿ ಅಥವಾ ಸಾರ್ವಜನಿಕ ಉದ್ದಿಮೆ 15 ದಿನಗಳ ಕೂಲಿ ನೀಡಿ ಯಾವುದೇ ಕಾಂಟ್ರಾಕ್ಟ್ ಕಾರ್ಮಿಕರನ್ನು ಇನ್ನು ಮುಂದೆ ರಿಟ್ರೆಂಚ್‌ಮಾಡಬಹುದು. ಮೊದಲು 45 ದಿನಗಳ ಕೂಲಿಕೊಡಬೇಕಾಗಿತ್ತು.



ಒಟ್ಟಿನಲ್ಲಿ ವಾಜಪೇಯಿ ಸರಕಾರದ ನೀತಿಗಳು ಉದ್ಯೋಗಗಳನ್ನು ನಿರ್ಮಿಸುವ ಬದಲು ಇದ್ದ ಉದ್ಯೋಗಗಳನ್ನೇ ನಗರಗಳಲ್ಲೂ, ಗ್ರಾಮಾಂತರಗಳಲ್ಲೂ ಕೊಲ್ಲುತ್ತಿದೆ.

ಸ್ಮಶಾನಮೌನ

ಈ ಚಿತ್ರದ ಇನ್ನೊಂದು ಮಗ್ಗಲು ಕೂಡ ಆತಂಕಕಾರಿ ಸರಕಾರ ಕಾರ್ಮಿಕ ಕಾನೂನುಗಳಲ್ಲಿ ಪ್ರತಿಗಾಮಿ ಬದಲಾವಣೆಗಳನ್ನು ತರಲು ಸರ್ವಪ್ರಯತ್ನ ನಡೆಸುತ್ತಿದೆ. ಈ ಬದಲಾವಣೆಗಳು ಮಾಲಿಕರಿಗೆ ತಮ್ಮ ಮನಬಂದಂತೆ ಕಾರ್ಮಿಕರನ್ನು ದುಡಿಸುವ, ತೆಗೆದು ಹಾಕುವ ಅಧಿಕಾರ ನೀಡಿದಂತೆ, ಕಾರ್ಮಿಕರನ್ನು ಮಾಲಿಕರ ಆಕ್ರಮಣಗಳೆದುರು ನಿಸ್ಸಹಾಯಕರನ್ನಾಗಿ ಮಾಡುತ್ತವೆ. ಆದ್ದರಿಂದಲೇ ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣಕ್ಕೆ ಶಾಸನ ತರುವ ಸಾಧ್ಯತೆಗಳನ್ನು ಪರಿಶೀಲಿಸುವ ಸರಕಾರ ಸುಪ್ರಿಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಕಾರ್ಮಿಕರ ಮುಷ್ಕರದ ಹಕ್ಕನ್ನು ರಕ್ಷಿಸುವ ಬಗ್ಗೆ ಸ್ಮಶಾನ ಮೌನ ತಳೆದಿದ್ದರೆ ಆಶ್ಚರ್ಯವೇನಿಲ್ಲ. ಇದು ದೇಶದಲ್ಲಿ ನಿರುದ್ಯೋಗ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ ಎಂಬುದರಲ್ಲಿ ಸಂದೇಹವಿದೆಯೇ?

ವೈವಿಧ್ಯತೆ ಐಕ್ಯತೆ

ವಾಜಪೇಯಿಯವರು ಭಾರತದ ವೈವಿಧ್ಯತೆಯಲ್ಲಿ ಏಕತೆಯು ನಮ್ಮ ಶಕ್ತಿ ಎಂದು ತಮ್ಮ ಭಾಷಣದಲ್ಲಿ ಮಾತನಾಡಿದರು. ನಿಜ, ಇದು ನಮ್ಮ ಶಕ್ತಿಯಮೂಲ. ಆದರೆ ವಾಜಪೇಯಿಯವರಂತವರು ಈ ಬಗ್ಗೆ ಮಾತನಾಡುತ್ತಿದ್ದಾರೆ ಮುಂದೆ ತಮ್ಮ ಬಂಟರು ಎಸಗುತ್ತಿರುವ ಹೀನ ಕೃತ್ಯಗಳನ್ನು ಮರೆಮಾಡಲು ಏನೋ ಹುನ್ನಾರ ನಡೆಸಿದ್ದಾರೆ ಎಂದು ಅರ್ಥ. ಏಕೆಂದರೆ ರೋಮನ್ ಸಾಮ್ರಾಜ್ಯ ಕ್ರಿಶ್ಚಿಯನ್ ಧರ್ಮವನ್ನು ಅಂಗೀಕರಿಸುವ ಮೊದಲೇ ಭಾರತಕ್ಕೆ ಬಂದು ಕ್ರಿಶ್ಚಿಯನ್ ಧರ್ಮವಲಂಬಿಗಳ ಮೇಲೆ, ಅವರ ಸಂಖ್ಯೆ ಅತ್ಯಲ್ಪವಿದ್ದರೂ ಅವರ ಮೇಲೆ ಅತ್ಯಂತ ಹೆಚ್ಚು ಹಲ್ಲೆಗಳು ನಡೆಯದಿರುವುದು ವಾಜಪೇಯಿ ಆಳ್ವಿಕೆಯಲ್ಲೇ ಪ್ರಧಾನಮಂತ್ರಿಗಳು ಅವನ್ನು ನಿಲ್ಲಿಸುವ ಬದಲು ಮತಾಂತರದ ಬಗ್ಗೆ ಚರ್ಚೆ ನಡೆಯಬೇಕೆಂದು ಉಪದೇಶ ಪ್ರಾರಂಭಿಸಿದರು.

ಇವರ ಆಳ್ವಿಕೆಯಲ್ಲೇ ಗುಜರಾತಿನಲ್ಲಿ ಮುಸಲ್ಮಾನರ ಅತ್ಯಂತ ಬೀಕರ ಕೊಲೆಗಳು ನಡೆದವು. ಆದರೆ ಕಾನೂನು ವ್ಯವಸ್ಥೆಯ ಹೆಸರಲ್ಲಿ ಎರಡು ಬಾರಿ ಬಿಹಾರ ಸರಕಾರವನ್ನು ವಜಾ ಮಾಡಲು ಮುಂದಾದ ನಮ್ಮ ಪ್ರಧಾನಮಂತ್ರಿಗಳಿಗೆ ಗುಜರಾತಿನಲ್ಲಿ ಕಾನೂನು ವ್ಯವಸ್ಥೆಯಲ್ಲಿ ಏನೂ ತೊಂದರೆ ಕಾಣಲಿಲ್ಲ. ಬೇರೆಯವರಿಗೆ ಉಪದೇಶ ನೀಡುವುದಷ್ಟೇ ಅವರ ಕೆಲಸ.

ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳಲ್ಲೆಲ್ಲಾ ಕೇಸರಿ ಪಡೆಯನ್ನು ತಲುಪಿಸುವ ಅಪಖ್ಯಾತಿಯನ್ನು ಈ ಸರಕಾರ ಹೊತ್ತಿದೆ. ಅದು ಈ ಸಂಸ್ಥೆಗಳಿಗೆ ತುಂಬಿಸಿದವರಿಗೆಲ್ಲಾ ಇರುವ ಒಂದೇ ಅರ್ಹತೆಯೆಂದರೆ ಅವರು ಫ್ಯಾಸಿಸ್ಟ್ ಮಾದರಿಯ ಆರ್.ಎಸ್.ಎಸ್.ಗೆ ವಿಧೇಯರಾಗಿರುವವರು. ಇದೀಗ ಶಿಕ್ಷಣ ಕೇಸರೀಕರಣ ಎಂದು ಟೀಕೆಗೊಳಗಾಗಿದೆ. ಇದರ ಪಠ್ಯಪುಸ್ತಕಗಳಲ್ಲಿ ಹಿಂದುಸ್ತಾನವೆಂಬುದು ಹಿಂದುಸ್ಥಾನವಾಗಿದೆ. ಅರಬ್ಬಿ ಸಮುದ್ರವು ಸಿಂಧು ಸಾಗರವಾಗಿದೆ. ಮಹಾನ್ ಅಕ್ಟೋಬರ್ ಕ್ರಾಂತಿ ಇವರ ಪಠ್ಯಗಳಲ್ಲಿ ಕೇವಲ ಒಂದು ದಂಗೆಯಾಗಿದ್ದರೆ ಅದು ಸಂಘಪರಿವಾರದ ಪಕ್ಷಪಾತದ ಉದಾಹರಣೆಯೆನ್ನಬಹುದು. ಆದರೆ ಪ್ರಸಿದ್ಧ ಕ್ರಾಂತಿಕಾರಿ ರಾಸ್ ಬಿಹಾರಿ ಬೋಸ್‌ರವರು ಸುಭಾಶ್ ಚಂದ್ರ ಬೋಶ್‌ರವರ ಅಣ್ಣನಾಗಿ ಬಿಟ್ಟರೆ? ನಮ್ಮ ಯುವಜನಾಂಗಕ್ಕೆ ಕಲಿಸುವುದು ಇದನ್ನೇ ಏನು?

ಕೇಸರೀಕರಣದ ಉದ್ದೇಶ ಸ್ಪಷ್ಟ. ಕೇಸರೀ ಪಡೆಗಳಿಗೆ ತಮ್ಮ ಯೋಜನೆಯನ್ನು ಈಡೇರಿಸಲು ಅನುಕೂಲವಾಗುವಂತೆ ಧರ್ಮಾಂಧರ, ವಿವೇಚನಾಹೀನರ ಒಂದು ತಲೆಮಾರನ್ನೇ ಸೃಷ್ಟಿಸುವುದು.

ಜೊತೆಗೆ ಶಿಕ್ಷಣದ ವ್ಯಾಪಾರೀಕರಣ ಈ ಚಿತ್ರವನ್ನು ಪೂರ್ಣಗೊಳಿಸುತ್ತದೆ. ಗುಜರಾತಿನಲ್ಲಿ ವಿವಿಧ ಕೋರ್ಸುಗಳಿಗೆ ಶುಲ್ಕವನ್ನು ಏರಿಸಿದ್ದು ಇದಕ್ಕೊಂದು ಉದಾಹರಣೆ.

ಪ್ರತಿಪಕ್ಷಗಳ ರಾಜ್ಯ ಸರಕಾರಗಳ ವಿರುದ್ಧ ಪಕ್ಷಪಾತಮಾಡಿಲ್ಲ ಎಂಬ ಪ್ರಧಾನಮಂತ್ರಿಗಳ ಮಾತು ಪರಿಶೀಲನೆಗೂ ಅರ್ಹವಲ್ಲ ರಾಜಸ್ತಾನ ಗಂಭೀರ ಬರ ಎದುರಿಸುತ್ತಿದ್ದು ಜನ ಹಸಿವಿನಿಂದ ನರಳುತ್ತಿದ್ದರೂ ಅಲ್ಲಿಗೆ ಹೆಚ್ಚಿನ ಧಾನ್ಯಗಳನ್ನು ಕಳಿಸಲು ಕೇಂದ್ರ ಸರಕಾರಕ್ಕೆ ಹಲವು ವಾರಗಳೇ ಬೇಕಾಯಿತು. ತ್ರಿಪುರಾದಲ್ಲಿ ಹಲವು ಸೇನಾ, ಅರೆಸೇನಾ ಪಡೆಗಳನ್ನು ಹಿಂತೆಗೆದುಕೊಂಡು ಉಗ್ರಗಾಮಿಗಳು ಮುಗ್ಧ ಜನರನ್ನು ಕೊಲ್ಲಲು ಪ್ರೋತ್ಸಾಹ ನೀಡಲಾಯಿತು.

ರಾಷ್ಟ್ರೀಯ ಐಕ್ಯತೆಯೆಂಬುದು ಇಂದು ಹಿಂದೆಂದಿಗಿಂತಲೂ ಹೆಚ್ಚು ಅಪಾಯಕಕೊಳಗಾಗಿದೆಯೆಂಬುದು ಸ್ಪಷ್ಟ.

ನಿಜಸಮಸ್ಯೆಗಳನ್ನು ಬದಿಗೊತ್ತಲು

ಹಿಗೆ ಹೇಳಿಕೊಳ್ಳಬಹುದಾದ ಸಾಧನೆಗಳೇನೂ ಇರದಿರುವಾಗ ಈ ಆಳ್ವಿಕೆ ಜನರ ಗಮನವನ್ನು ಅವರು ಬಾದಿಸುತ್ತಿರುವ ನಿಜಸಮಸ್ಯೆಗಳಿಂದ ಬೇರೆಡೆಗೆ ಸೆಳೆಯಲು ಆರ್.ಎಸ್.ಎಸ್. ತನ್ನೆಲ್ಲಾ ಪಡೆಗಳನ್ನು ಈ ಆಟಕ್ಕಿಳಿಸಿದೆ. ಇಂತಹ ಪ್ರಶ್ನೆ (ಪ್ರಶ್ನೆಯೇ ಅಲ್ಲದ ಪ್ರಶ್ನೆ)ಯೆಂದರೆ ಗೋಹತ್ಯೆ ನಿಷೇಧದ ಕೂಗು. ಇದೂ ಹೊಸತಲ್ಲ, ನವಂಬರ್ 1966ರಲ್ಲಿ ಈ ಹೆಸರಲ್ಲಿ ಹಲವಾರು ಸಾಧುಗಳನ್ನು


ಪುಟ 10 ಕ್ಕೆ

ನಿರುದ್ಯೋಗ : ಚುನಾವಣೆಗಾಗಿ ಜಾಣಕುರುಡು!

ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಕೆಂಪು ಕೋಟೆಯಿಂದ ಮಾತನಾಡುತ್ತ ದೇಶದ ಗ್ರಾಮೀಣ ಪ್ರದೇಶಗಳಲ್ಲಿ 20 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಮಾತನ್ನಾಡಿದ್ದಾರೆ. ಕೋಟ್ಯಾಂತರ ಜನ ನಿರುದ್ಯೋಗಿಗಳಾಗಿರುವಾಗ ಕೆಲಸ ಇರುವವರೂ ಕೆಲಸ ಕಳೆದುಕೊಳ್ಳುತ್ತಿರುವಾಗ, ಆರ್ಥಿಕ ಅಭಿವೃದ್ಧಿಯ ದರವೇ ಕೆಳಗಿಳಿದಿರುವಾಗ ದೇಶ ಮತ್ತೆ ಪ್ರಗತಿಪಥದಲ್ಲಿ ಬರಲು ಕೋಟಿ ಕೋಟಿ ಉದ್ಯೋಗಗಳನ್ನು ಸೃಷ್ಟಿಸಬೇಕಾಗಿತ್ತು. ಇಪ್ಪತ್ತು ಲಕ್ಷ ಯಾವ ಮೂಲೆಗೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ಇಂತಹ ಯಾವುದೇ ಕಾಳಜಿಗಳಿಲ್ಲ ಎಂಬುದು ಸ್ಪಟಿಕದಷ್ಟೇ ಸ್ಪಷ್ಟ. ಐವತ್ತೇಳನೇ ಸ್ವಾತಂತ್ರ್ಯ ದಿನಾಚರಣೆಯನ್ನು ನಾವು ಆಚರಿಸುವಾಗ ಇನ್ನೂ ಇಷ್ಟೊಂದು ಬಡತನವಿದ್ದರೆ, ಹಳ್ಳಿಯಜನ ಊಟವಿಲ್ಲದೆ ಹಸಿದು ಸಾಯುತ್ತಿದ್ದರೆ ಸಾಲ ಮಾಡಿದ ರೈತ ಸಾಲದ ಭಾರ ತಾಳದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ಯಾವುದೇ ನಾಗರಿಕ ಸರ್ಕಾರ ಎಚ್ಚೆತ್ತುಕೊಂಡು ಕಾರ್ಯಪ್ರವೃತ್ತವಾಗುತ್ತಿತ್ತು.

ಆದರೆ ಈ ಸರ್ಕಾರದ ನೀತಿಗಳನ್ನು ನೋಡಿ ಉತ್ಸಾಹವನ್ನು ನೋಡಿ ಇಪ್ಪತ್ತು ಲಕ್ಷ ಗ್ರಾಮೀಣ ಉದ್ಯೋಗಗಳಿಂದ ಏನಾದೀತು? ಕೆಲಸ ಕಳೆದುಕೊಂಡಷ್ಟೆ ಸಂಖ್ಯೆಯ ಜನರಿಗೂ ಬಹುಶಃ ಉದ್ಯೋಗ ದೊರೆಯಲಿಕ್ಕಿಲ್ಲ. ಹಾಗಿರುವಾಗ ಹೆಚ್ಚಿದ ಜನರಿಗಾಗಲಿ ಉಳಿದ ನಿರುದ್ಯೋಗಿಗಳಿಗಾಗಲಿ ಉದ್ಯೋಗಗಳು ದೊರೆವ ಸಾಧ್ಯತೆಗಳೆಷ್ಟು?



ಇದಲ್ಲದೆ ನದಿಗಳನ್ನು ಜೋಡಿಸುವ ಮಹಾತ್ವಾಕಾಂಕ್ಷೆಯಿಂದ ಯೋಜನೆಯನ್ನು ಅವರು ಉದ್ಘಾಟಿಸಿದರು. ಯೋಜನೆಯ ಸಾಧಕ ಬಾಧಕಗಳನ್ನೇ ಅಳೆದು, ಅದರ ಲಾಭದ ಅಂದಾಜನ್ನು ಮಾಡಲಾಗಿಲ್ಲ. ಈ ಯೋಜನೆಯ ಅನುಷ್ಠಾನದಲ್ಲಿ ಹಲವು ಬಿಗಿಯಾದ ತೊಡಕುಗಳು ಬರಬಹುದೆಂಬುದು ನಿರೀಕ್ಷೆ, ಇಂತಹ ತೊಡಕುಗಳಿಗೆ ಏನು ಮಾಡಬಹುದು ಎಂಬ ಬಗ್ಗೆ ಸ್ಪಷ್ಟ ವಿಚಾರಗಳು ಈ ಸರ್ಕಾರಕ್ಕೆ ಇರುವಂತಿಲ್ಲ.

ಒಟ್ಟಾರೆಯಾಗಿ ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಮತಗಳಿಕೆಯ ಲಾಭ ಪಡೆಯುವುದೇ ಅದರ ಉದ್ದೇಶವಿರುವಂತಿದೆ. ಜನಸಾಮಾನ್ಯರಿಗೆ ಉಪಯೋಗವಾಗುವ, ಬಡತನವನ್ನು ಕಡಿಮೆ ಮಾಡುವ ಯಾವುದೇ ಯೋಜನೆಗಳು ಸರ್ಕಾರಕ್ಕೆ ಇರುವಂತಿಲ್ಲ. ಹೀಗಿರುವಾಗ ಐವತ್ತೇಳನೇ ಸ್ವಾತಂತ್ರ್ಯ ದಿನಾಚರಣೆಗೆ ಎಂತಹ ಅರ್ಥಪೂರ್ಣತೆ ಬರಲು ಸಾಧ್ಯ?

ಇದಲ್ಲವೆ ಜಾಣ ಕುರುಡು?

ಏನಿದು ಕೃತಕ ಮಳೆ?

ಪುಟ 7 ರಿಂದ

ಮಾಹಿತಿಗಳಿಗೆ ಅನುಗುಣವಾಗಿ ರಸಾಯನಿಕ ಆಯ್ಕೆ ಮತ್ತು ಪ್ರಮಾಣಗಳನ್ನು ನಿರ್ಧರಿಸಬೇಕು.

ಮೋಡದ ಉಷ್ಣತೆ ಕಡಿಮೆಯಾದಾಗ ನೀರಾವಿ ಘನೀಭವಿಸಿ ಮೋಡದಲ್ಲಿನ ನೀರು ಮಳೆಹನಿಯಾಗಲು ಅವಕಾಶ ನೀಡುವುದಿಲ್ಲ. ರಸಾಯನಿಕ ಬೀಜಗಳು ಮೋಡದ ಅತಿ ಶೈತ್ಯ ಸ್ಥಿತಿಯನ್ನು ನಿಯಂತ್ರಿಸಲು ನೆರವಾಗುತ್ತವೆ.

ಎಷ್ಟೇ ಎಚ್ಚರ ವಹಿಸಿದರೂ, ಭೌತವಸ್ತುಗಳು ಅತಿ ಉಷ್ಣ, ಅತಿಶೀತ, ಅತಿ ಪರ್ಯಾಪ್ತ ಸ್ಥಿತಿಯಲ್ಲಿ ವಿಚಿತ್ರ ರೀತಿಯಲ್ಲಿ ವರ್ತಿಸುತ್ತವೆ. ಉದಾಹರಣೆಗೆ ನೀರಿಗೆ ಕುದಿಬಿಂದು ಇರುವ ವಿಷಯ ಜ್ಞಾಪಿಸಿಕೊಳ್ಳಿ. ಅತಿ ಶುದ್ಧ ನೀರನ್ನು ಅತಿ ಶುದ್ಧ ಪಾತ್ರೆಯಲ್ಲಿ ಕಾಯಿಸಿದಾಗ ನಿರೀಕ್ಷಿತ ಕುದಿ ಬಿಂದುವಿನಲ್ಲಿ ಅದು ಕುದಿಯುವುದಿಲ್ಲ.

ನಿಸರ್ಗದಲ್ಲಿನ ಅತಿ ಸಹಜಕ್ರಿಯೆ-ಮಳೆ ಬೀಳುವುದು. ಇದನ್ನೆ ಕೃತಕವಾಗಿ ತರಿಸಬೇಕಾದರೆ? ನೀವೇ ಊಹಿಸಿ.

ಪ್ರೊ.ಎಚ್.ಆರ್. ರಾಮಕೃಷ್ಣರಾವ್
ಬೆಂಗಳೂರು.

ಪ್ರಾದೇಶಿಕ ಅಸಮಾನತೆಗಳನ್ನು ಬೆಳೆಸಿದರೆ ಲಾಭ!?

ಯಾರಿಗೆ ಎಂದಿರಾ? ಕೇಂದ್ರದ ಅಧಿಕಾರದಲ್ಲಿರುವ ಬಿಜೆಪಿಗೆ. ಯಾಕೆಂದರೆ ಇಂತಹ ಅಸಮಾನತೆಗಳನ್ನು ತನ್ನ ಬಂಡವಾಳ ಮಾಡಿಕೊಂಡು ಜನತೆ ಸಂಕುಚಿತ ವಿಷಯಗಳ ಮೇಲೆ ಪರಸ್ಪರರೊಳಗೆ ಹೊಡೆದಾಡುವಂತೆ ಮಾಡಿ ಅದರ ಲಾಭ ಪಡೆಯುವುದೇ ಅದರ ಉದ್ದೇಶ.

ವಿಶ್ವಬ್ಯಾಂಕಿನ ವರದಿ ಮತ್ತು ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಭಾರತದಲ್ಲಿ ಪ್ರಾದೇಶಿಕ ಅಸಮತೋಲನ ಹೆಚ್ಚುತ್ತಲೇ ಹೋಗುತ್ತಿದೆ. ಉತ್ತರ ಪ್ರದೇಶ ಬಿಹಾರ, ಮದ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳು ಬಡತನದ ಹೆಚ್ಚಳವನ್ನೇ ಕಾಣುತ್ತಿವೆ ಎಂಬುದು ಈ ವರದಿಗಳ ತಾತ್ಪರ್ಯ. ಸಾಮಾಜಿಕ ಅಭಿವೃದ್ಧಿಯ ಸೂಚಿ ಎಂದೇ ತೆಗೆದುಕೊಳ್ಳಬಹುದಾದ ಮಹಿಳಾ ಸಾಕ್ಷರತೆ ಈ ರಾಜ್ಯಗಳಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿದೆ ರಾಜಸ್ತಾನದಲ್ಲಿ ಶೇ.7 ಮಧ್ಯಪ್ರದೇಶದಲ್ಲಿ ಶೇ.9 ರಷ್ಟಿರುವ ಇದು ಅಭಿವೃದ್ಧಿಯ ನೆರಳೂ ಈ ರಾಜ್ಯಗಳ ಮೇಲೆ ಬೀಳುತ್ತಿಲ್ಲ ಎಂಬುದನ್ನು ಎತ್ತಿ ತೋರಿಸುತ್ತಿದೆ.

ವಾಯುವ್ಯ ಭಾರತದ ಹಲವು ರಾಜ್ಯಗಳಲ್ಲೂ ಅಭಿವೃದ್ಧಿ ಕುಂಠಿತಗೊಂಡೇ ಇವೆ.

ದಕ್ಷಿಣದ ರಾಜ್ಯಗಳು ಇಂತಹ ಹಿಂದುಳಿದಿರುವಿಕೆಯಿಂದ ಮುಕ್ತವಾಗಿವೆ. ಈ ರಾಜ್ಯಗಳಲ್ಲಿ ಬಿಜೆಪಿ ಪಕ್ಷ ಹೆಚ್ಚು ಸಫಲವಾಗಿಲ್ಲ ಯಾವುದು ಸತ್ಯ.

ಅತ್ಯಂತ ಹೆಚ್ಚಿನ ಬಡತನವಿರುವುದು ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದ ಜನರಲ್ಲಿ ಎಂಬುದೂ ಈ ವರದಿಗಳ ಅಂಬೋಣ. ಮೇಲ್ಜಾತಿಯ ರಾಜಕೀಯವನ್ನೇ ಮಾಡುವ ಬಿಜೆಪಿ ಈ ಸಾಮಾಜಿಕ ಕೆಳಸ್ತರದ ಜನತೆಯ ಅಭಿವೃದ್ಧಿಯ ವಿಚಾರ ಮಾಡುವ ಸಾಧ್ಯತೆಯೇ ಇಲ್ಲವಲ್ಲವೇ?

ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳ ನಡುವಣ ಅಂತರವೂ ಹೆಚ್ಚಾಗುತ್ತಿದೆ ಎಂದೂ ಈ ವರದಿಗಳು ಬೆರಳು ಮಾಡಿ ತೋರಿವೆ. ಇಂತಹ ಅಸಮಾನತೆ ಹೆಚ್ಚಿನ ಸಮಸ್ಯೆಗಳನ್ನು ಉಂಟು ಮಾಡಬಲ್ಲವು. ಗ್ರಾಮೀಣ ಪ್ರದೇಶಗಳಿಂದ ಜನ ಪಟ್ಟಣಗಳತ್ತ ಕೆಲಸ ಹುಡುಕುತ್ತ ಹೊರಟರೆ ಪಟ್ಟಣಗಳಲ್ಲಿ ಜನದಟ್ಟಣೆ ಹೆಚ್ಚುತ್ತದೆ. ಇದರಿಂದ ಅಂತರ್‍ರಚನಾ ಸೌಕರ್ಯಗಳ ಮೇಲೆ ಒತ್ತಡ ಬೀಳುತ್ತದೆ. ಬಡತನವೇನೂ ಕಡಿಮೆಯಾಗ ವುದಿಲ್ಲ. ಬದಲಿಗೆ ಅದು ಹೆಚ್ಚಾಗುತ್ತದೆ. ಹೀ ಸಮಸ್ಯೆಗಳ ಸರಮಾಲೆಯೇ ಆಗುತ್ತದೆ.

ಬಹುಶಃ ಬಿಜೆಪಿಗೆ ರಾಮಜನ್ಮಭೂಮಿಯಂತ ವಿಷಯದ ಲಾಭ ಪಡೆದುಕೊಳ್ಳಲು ಇಂತ ಪರಿಸ್ಥಿತಿಯೇ ಬೇಕಾಗಿರುವುದೇನೋ ಅಲ್ಲವೆ?

.... ಮೋಸದಾಟ ನಡೆಯುವುದೇ ?

ಪುಟ 9 ರಿಂದ

ದಿಲ್ಲಿಗೆ ತಂದು ಹೊಲಸು ಗಲಭೆ ಎಬ್ಬಿಸಲಾಗಿತ್ತು. ಆಗಿದ್ದ ಉದ್ದೇಶ ಮಾರ್ಚ್ 1967ರಲ್ಲಿ ಸಾರ್ವತ್ರಿಕ ಚುನಾವಣೆಗಳು. ಆ ತಂತ್ರ ಸಂಪೂರ್ಣ ವಿಫಲವಾಯಿತು ಎಂಬುದು ಬೇರೆ ಮಾತು.

ಆದರೆ ಚುನಾವಣೆಯ ವೈತರಣಿಯನ್ನು ದಾಟಲು ಆರ್.ಎಸ್.ಎಸ್. ಬಿಜೆಪಿ ಆಡುತ್ತಿರುವ ಅತಿ ಹೊಲಸು ಆಟವೆಂದರೆ ಮತ್ತೆ ಅಯೋಧ್ಯೆಯ ಹೆಸರಲ್ಲಿ ಜನಗಳಲ್ಲಿ ಭಾವೋನ್ಮಾದ ಎಬ್ಬಿಸುವುದು. ಆದರೆ ಈ ಆಟದಲ್ಲಿ ಅದು ಯಶಸ್ವಿಯಾದೀತೆ? ಭವಿಷ್ಯವೇ ಹೇಳಬೇಕು. ಬಹಳ ಮಟ್ಟಿಗೆ ಅದು ಯಶಸ್ವಿಯಾಗಲಿಕ್ಕಿಲ್ಲ. ಹಿಂದುಸ್ತಾನ ಟೈಮ್ಸ್ ನಡೆಸಿದ ಇತ್ತೀಚಿನ ಒಂದು ಸಮೀಕ್ಷೆಯಲ್ಲಿ ಶೇ. 84 ಮಂದಿ ಈ ವಿಚಾರಕ್ಕೆ ಒಂದು 'ಧರ್ಮನಿರಪೇಕ್ಷ ಪರಿಹಾರ' ಬಯಸಿದ್ದರೆ ಈ ವಿಷಯದಲ್ಲಿ ಕಾನೂನಿನ ದಾರಿಯೇ ಒಳ್ಳೆಯದು ಎಂದು ಅರ್ಧಕ್ಕೂ ಹೆಚ್ಚು ಜನ ಅಭಿಪ್ರಾಯಪಟ್ಟಿದ್ದಾರೆ.

ಕಲಾಂರ ಸಲಹೆ

ಇಲ್ಲಿ ನಮ್ಮ ರಾಷ್ಟ್ರಪತಿಗಳು, ಡಾ। ಎ.ಪಿ.ಜೆ. ಅಬ್ದುಲ್ ಕಲಾಂ ಆಗಸ್ಟ್ 14 ರಂದು ತಮ್ಮ ಭಾಷಣದಲ್ಲಿ ಎತ್ತಿದ ಅಂಶ ಗಮನಾರ್ಹ. ಸಾಮಾನ್ಯವಾಗಿ ಬಿಜೆಪಿ ಇವರನ್ನು ತನ್ನ ಉದಾರ ಮುಖವಾಗಿ ಪ್ರದರ್ಶಿಸಲು ಪ್ರಯತ್ನಿಸಿದೆ. ಆದರೆ ಅಂದು ರಾಷ್ಟ್ರಪತಿಗಳು ಈ ಆಳ್ವಿಕೆಗೆ ಒಂದು ಉನ್ನತ ಸಲಹೆ ನೀಡಿದರು. ನಮ್ಮ ಮುಂದಿನ ಪೀಳಿಗೆ ನಾವು ಎಷ್ಟು ಮಂದಿರಗಳನ್ನು, ಮಸೀದಿಗಳನ್ನು ಕಟ್ಟಿದವು ಎಂಬುದರ ಮೇಲೆ ನಮ್ಮನ್ನು ನೆನೆಸಿಕೊಳ್ಳುವುದಿಲ್ಲ, ನಾವು ದೇಶವನ್ನು ಅಭಿವೃದ್ಧಿ ಪಥದಲ್ಲಿ ಹೇಗೆ ಕೊಂಡೊಯ್ದೆವು ಎಂದಷ್ಟೇ ನೋಡುತ್ತಾರೆ ಎಂದು ಅವರು ಹೇಳಿದರು. ರಾಷ್ಟ್ರಪತಿಗಳ ಈ ಸಲಹೆಗೆ ಅಧಿಕಾರಸ್ಥರು ಸ್ವಲ್ಪವಾದರೂ ಗಮನ ನೀಡಿದ್ದರೆ?

ಇಲ್ಲವೆಂದು ಕಾಣುತ್ತದೆ. ಏಕೆಂದರೆ ಮರುದಿನ ವಾಜಪೇಯಿಯವರ ಭಾಷಣ ಕೇಳಿದರೆ ಈ ಸಲಹೆಯನ್ನು ಅವರು ಗಮನಕ್ಕೆ ತಗೊಂಡಂತೆ ಕಾಣುವುದಿಲ್ಲ. ನಿಜ, ಅವರ ಭಾಷಣ ಮಂದಿರ, ಮಸೀದಿ ಪ್ರಶ್ನೆಯನ್ನು ಎತ್ತಲಿಲ್ಲ. ಆದರೆ ಅಷ್ಟೇ ಸಾಕೇ? ಅವರು ಸಂವಿಧಾನದ, ದೇಶದಲ್ಲಿ ಶಾಂತಿ ಮತ್ತು ಸಾಮರಸ್ಯದ ರಕ್ಷಕನ ಪಾತ್ರ ವಹಿಸುತ್ತಾರೆ ಎಂದು ದೇಶ ನಿರೀಕ್ಷಿಸಿತ್ತು; ರಾಷ್ಟ್ರೀಯ ಐಕ್ಯತೆಯನ್ನು ಒಡೆಯಲು ಬಿಡುವುದಿಲ್ಲ ಎಂದು ಕೋಮುವಾದಿ ಶಕ್ತಿಗಳಿಗೆ ಸ್ಪಷ್ಟ ಎಚ್ಚರಿಕೆ ನೀಡುತ್ತಾರೆ ಎಂದು ನಿರೀಕ್ಷಿಸಿತ್ತು. ಆದರೆ ವಾಪೇಯಿಯವರು ಅಂತಹದ್ದೇನನ್ನೂ ಮಾಡಲಿಲ್ಲ. ಇದು ಅವರು ಮೊದಲು ಒಬ್ಬ 'ಸ್ವಯಂಸೇವಕರು' ನಂತರವೇ ಪ್ರಧಾನ ಮಂತ್ರಿ ಎಂದು ಅವರೇ ಈ ಹಿಂದೆ ಹೇಳಿದ್ದನ್ನು ಮತ್ತೊಮ್ಮೆ ದೃಢಪಡಿಸಿದೆಯಲ್ಲವೇ?

ಒಟ್ಟಿನಲ್ಲಿ ವಾಜಪೇಯಿಯವರ ಆಗಸ್ಟ್ 15ರ ಭಾಷಣ ಉದ್ದಕ್ಕೂ ಒಂದು ಮೋಸದಾಟ. ದುರದೃಷ್ಟವಶಾತ್ ಕೆಲವು ಪತ್ರಕರ್ತರು, ಕೆಲವು ಪ್ರಗತಿಪರ ಪತ್ರಕರ್ತರೂ ಕೂಡಾ ಅವರ ಶಬ್ದಾಡಂಬರಕ್ಕೆ ಮಾರುಹೋಗಿ ಅದನ್ನು ಹಾಡಿ ಹೊಗಳಿದ್ದಾರೆ. ಈ ಹೊಗಳಿಕೆಗೆ ಏನೇನೂ ಆಧಾರವಿಲ್ಲ.

ಅವಿಶ್ವಾಸ ನಿರ್ಣಯ

ಈ ಸನ್ನಿವೇಶದಲ್ಲೇ ಪ್ರತಿಪಕ್ಷಗಳು ಸರಕಾರದ ವಿರುದ್ಧ ಅವಿಶ್ವಾಸ ಠರಾವು ತಂದವು. ಇದು 13ನೇ ಲೋಕಸಭೆಯ ಮೊದಲ ಅವಿಶ್ವಾಸ ಠರಾವು. ಪ್ರತಿ ಪಕ್ಷಗಳು ಸವಾಲು ಸ್ವೀಕರಿಸಿದವು. ಬೇರೆ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಮರೆತು ರಾಷ್ಟ್ರೀಯ ಐಕ್ಯತೆಯ ರಕ್ಷಣೆಗೆ ಒಂದಾಗಿವೆ. ಪ್ರಮುಖ ಸಂಗತಿಯೆಂದರೆ ಪ್ರತಿಪಕ್ಷಗಳು ಬಹಳ ಉತ್ಸಾಹದಲ್ಲಿವೆ. ಅಧಿಕಾರ, ರಕ್ಷಣಾ ವ್ಯವಹಾರಗಳ ಬಗ್ಗೆ ಸಿವಿಸಿ ವರದಿ, ಬೆಸ್ಟ್ ಬೇಕರಿ ಕೇಸಿನಲ್ಲಿ ವಿಚಾರಣೆಯೆಂಬ ನಾಟಕ, ಮುಷ್ಕರಗಳ ಬಗ್ಗೆ ಸುಪ್ರಿಂಕೋರ್ಟ್ ತೀರ್ಪು, ಪ್ರಸ್ತಾವಿತ ಕಾಮಿ - ವಿರೋಧಿ ಶಾಸನಗಳು ಮತ್ತಿತರ ಹಲ ವಿಷಯಗಳ ಮೇಲೆ ಸರಕಾರವನ್ನು ಟೀ ಗುರಿಯಾದವು. ಎಲ್ಲಕ್ಕೂ ಮುಖ್ಯವಾಗಿ ಠರಾವಿನ ಮೇಲಿನ ಚರ್ಚೆ ಯಾವ ಪಕ್ಷ ನಿಂತಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತ

ಉದ್ಯೋಗ ವಂಚಿತ ಕೃಪಾಂಕ ನೌಕರರ ಪುನರ್‌ನೇಮಕಕ್ಕೆ ವಿಶೇಷ ಆದೇಶ

ಪತ್ರಿಕೆ ಮುದ್ರಣಕ್ಕೆ ಸಿದ್ಧಗೊಳ್ಳುತ್ತಿರುವಾಗಲೇ ಸಂತಸದ ಸುದ್ದಿಯೊಂದು ದೊರೆತಿದೆ. ಸುಪ್ರೀಂಕೋರ್ಟ್‌ನ ತೀರ್ಪಿನನ್ವಯ ವಜಾಗೊಂಡಿದ್ದ ಗ್ರಾಮೀಣ ಕೃಪಾಂಕ ನೌಕರರನ್ನು ವಿಶೇಷವಾಗಿ ಸೂಪರ್ ನ್ಯೂಮರಿ ಪೋಸ್ಟ್ ಎಂದು ಒಂದು ಬಾರಿಗೆ ಪುನರ್‌ನೇಮಕಾತಿ ಮಾಡಿಕೊಳ್ಳಲು ಕರ್ನಾಟಕ ಸರ್ಕಾರದ ಸಚಿವ ಸಂಪುಟ ನಿರ್ಧರಿಸಿದೆ. ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ನೇತೃತ್ವದಲ್ಲಿ ಹಲವಾರು ಹಂತ ಹೋರಾಟಗಳನ್ನು ನಡೆಸಿ ಕೊನೆಗೆ ಅಂತಿ ಇತ್ಯರ್ಥಕ್ಕಾಗಿ ಆಗಸ್ಟ್ 20 ರಿಂದ ಬೆಂಗಳೂರಿ ನಿರಂತರ ಅನಿರ್ದಿಷ್ಟಾವಧಿಯ ಧರಣಿ ಸತ್ಯಾ ಆರಂಭಿಸಲಾಗಿತ್ತು. ಸರ್ಕಾರದ ನಿರ್ಧಾ ಹೋರಾಟಕ್ಕೆ ಸಂದ ಜಯ. ಇದಕ್ಕೆ ಶ್ರ ಬೆಂಬಲಿಸಿದ ಎಲ್ಲರಿಗೂ ಅಭಿನಂದನೆಗಳು. ಸಂದರ್ಭದಲ್ಲಿ ಕೃಪಾಂಕದ ನೀತಿ ಉಳಿ ಹೋರಾಟವು ಮುಂದುವರಿಯಬೇಕಿದೆ.



ರಕ್ತಪಿಪಾಸು ಏರಿಯಲ್ ಶೆರೂನ್ ಭೇಟಿ - ಭಾರತಕ್ಕೆ ಕಳಂಕ

ಭಾರತಕ್ಕೆ ಕುಖ್ಯಾತ ಇಸ್ರೇಲ್‌ನ ಪ್ರಧಾನಮಂತ್ರಿ ಶೆರೂನನ್ನು ವಾಜಪೇಯಿ ಸರ್ಕಾರ ಆಹ್ವಾನಿಸಿದೆ. ಶೆರೂನ್ ಪ್ರತಿನಿಧಿಸುವ 'ಲಿಕ್ಕುಡ್' ಪಕ್ಷದ ನೀತಿಗಳೂ ಸಂಘ ಪರಿವಾರಕ್ಕೂ ಬಹಳ ಸಾಮ್ಯ-ಸಹಮತವಿದೆ. ಅದು ಅಮಾನವೀಯ ಜನಾಂಗ ದ್ವೇಷ. ಈ ಶೆರೂನ್‌ನ ಭಾರತಕ್ಕೆ ಬರಕೂಡದು ಪಾಲೆಸ್ತೀನಿಯಯನ್ ಜನತೆಯ ಸ್ವಾತಂತ್ರ್ಯ ಹರಣ ಮಾಡಿ ಬರ್ಬರ ದಮನ ನಡೆಸುವವ ಇಸ್ರೇಲ್ ಜೊತೆ ಯಾವುದೇ ಸಂಬಂಧ ಹೊಂದಿರಕೂಡದು. ಈ ಶೆರೂನ್ ಎಂತಹವ? ಓದಿ

ವಿಶ್ವ ಭೂಪಟದಲ್ಲಿ ಭಾರತಕ್ಕೆ ವಿಶೇಷವಾದ ಸ್ಥಾನವೊಂದಿತ್ತು. ಮೂರನೇ ಜಗತ್ತಿನ ರಾಷ್ಟ್ರಗಳು, ಅಲಿಪ್ತ ನೀತಿಯ ಹರಿಕಾರ ಭಾರತ ದೇಶವನ್ನು ನೆಚ್ಚಿನ ಮಿತ್ರನಂತೆ ಗೌರವಿಸುತ್ತಿದ್ದವು. ಆದರೆ ಬಿಜೆಪಿಯ ನೇತೃತ್ವದ ವಾಜಪೇಯಿ ಸರ್ಕಾರ ಸಾಮ್ರಾಜ್ಯಶಾಹಿಗೆ ಅಡಿಯಾಳಾಗುವ ನೀತಿಯತ್ತ ವಾಲುತ್ತಿದೆ. ಅದರ ಭಾಗವಾಗಿಯೇ ಪ್ಯಾಲೆಸ್ಟೀನ್ ಜನತೆಯ ನ್ಯಾಯಬದ್ಧ ಹೋರಾಟವನ್ನು ದಮನಗೊಳಿಸುತ್ತಿರುವ ಇಸ್ರೇಲ್ ಪ್ರಧಾನಿ ಏರಿಯಲ್ ಶೆರೂನ್ ಅವರಿಗೆ ರತ್ನಗಂಬಳಿ ಹಾಸಿ ಸ್ವಾಗತಿಸುತ್ತಿದೆ. ವಾಜಪೇಯಿ ಸರ್ಕಾರದ ಆಹ್ವಾನದ ಮೇರೆಗೆ ರಕ್ತಪಿಪಾಸು ಶೆರೂನ್ ಸೆಪ್ಟೆಂಬರ್ 9 ರಂದು ದೆಹಲಿಗೆ ಬರಲಿದ್ದು, ಮುಂಬೈ ಅಥವಾ ಬೆಂಗಳೂರು ನಗರಗಳಿಗೂ ಭೇಟಿ ನೀಡುವ ಸಾಧ್ಯತೆಗಳಿವೆ.

ಪ್ಯಾಲೆಸ್ಟೇನ್ ಜನತೆಯ ಹೋರಾಟವನ್ನು ಭಾರತ ಬೆಂಬಲಿಸುತ್ತಲೇ ಬಂದಿತ್ತು. ಪ್ಯಾಲೆಸ್ಟೇನ್‌ನನ್ನು ವಸಾಹತುವನ್ನಾಗಿ ಮಾರ್ಪಡಿಸುವ ಅಮೆರಿಕಾ ಬೆಂಬಲಿತ ಇಸ್ರೇಲ್ ಕ್ರಮವನ್ನು ಭಾರತ ವಿರೋಧಿಸುತ್ತಾ ಬಂದಿತ್ತು. ಮಹಾತ್ಮಗಾಂಧಿ ಆದಿಯಾಗಿ ಎಲ್ಲಾ ಮುಖಂಡರು ಪ್ಯಾಲೆಸ್ಟೇನ್ ಹೋರಾಟವನ್ನು ಬೆಂಬಲಿಸಿದ್ದರು. ವಾಜಪೇಯಿ ಸರ್ಕಾರ ಮಾತ್ರವೇ ರಕ್ಷಣಾ ಒಪ್ಪಂದ ಮಾಡಿಕೊಂಡಿದ್ದು, ಇದೀಗ ಅಲ್ಲಿನ ಕ್ರಿಮಿನಲ್ ಪ್ರಧಾನಿಯನ್ನು ಆಹ್ವಾನಿಸುವ ಮಟ್ಟಕ್ಕೆ ಹೋಗಿದೆ.

ಇಸ್ರೇಲ್ ಪ್ರಧಾನ ಮಂತ್ರಿಯನ್ನು ಜಗತ್ತಿನ ಬಹುತೇಕ ರಾಷ್ಟ್ರಗಳು ಆಹ್ವಾನಿಸುವುದಿಲ್ಲ. ಏಕೆಂದರೆ ಅಲ್ಲಿನ ಜನರು, ಅದರಲ್ಲೂ ಯುರೋಪಿಯನ್ನರು ತೀವ್ರ ಪ್ರತಿಭಟನೆ ನಡೆಸುತ್ತಾರೆ.


ಇಸ್ರೇಲ್ ಹತ್ಯಾಕಾಂಡದೆದುರು ಪ್ಯಾಲೆಸ್ಟೇನ್ ಜನರ ನಿಲ್ಲದ ಹೋರಾಟ

ಸಂಘ ಪರಿವಾರದ ನೀತಿಗೂ, ಶೆರೂನ್ ಪ್ರತಿನಿಧಿಸುವ ಇಸ್ರೇಲ್‌ನ ಆಡಳಿತ ಲಿಕ್ಕುಡ್ ಪಕ್ಷದ ನೀತಿಗೂ ಸಾಮಿಪ್ಯವಿದೆ. ಅದಕ್ಕಾಗಿಯೇ ಅವರನ್ನು ಭಾರತಕ್ಕೆ ಆಹ್ವಾನಿಸಿರಬೇಕು. 'ಹಿಂದುಗಳು ಭಾರತದ ಮೂಲನಿವಾಸಿಗಳು, ಉಳಿದವರು ವಿದೇಶದಿಂದ ಬಂದವರು' ಎಂದು ಸಂಘ ಪರಿವಾರ ಕಥೆ ಕಟ್ಟುವಂತೆ, 'ಪ್ಯಾಲೆಸ್ಟೇನ್ ಜನರು ವಾಸಿಸುತ್ತಿರುವ ಬಹುತೇಕ ಪ್ರದೇಶಗಳು ಚಾರಿತ್ರಿಕವಾಗಿ ಹಾಗೂ ಧಾರ್ಮಿಕವಾಗಿ ಯೆಹೂದಿ(ಇಸ್ರೇಲ್)ಗಳಿಗೆ ಸೇರಿದ್ದು' ಎಂದು ಲಿಕ್ಕುಡ್ ಪಕ್ಷ ವಾದಿಸುತ್ತದೆ. ಸಂಘ ಪರಿವಾರಕ್ಕೆ ಮತ್ತು ಇಸ್ರೇಲ್‌ನ ಲಿಕ್ಕುಡ್ ಪಕ್ಷಕ್ಕೆ ಸಮಾನ ವೈರಿ 'ಇಸ್ಲಾಂ' ಜನಾಂಗ ದ್ವೇಷ. ಬಹುಶಃ ಈ ಕಾರಣಗಳಿಂದಲೇ ಸ್ನೇಹ ಗಟ್ಟಿಗೊಂಡಿರಬೇಕು.

1977 ರಲ್ಲಿ ಇಸ್ರೇಲ್‌ನಲ್ಲಿ ಲಿಕ್ಕುಡ್ ಪಕ್ಷ ಅಧಿಕಾರಕ್ಕೆ ಬಂದಾಗ ಜಗತ್ತಿನಾದ್ಯಂತ ಬುದ್ಧಿಜೀವಿಗಳು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದರು. ಆಲ್ಬರ್ಟ್ ಐನ್‌ಸ್ಟೀನ್ ಸೇರಿದಂತೆ ಯೆಹೂದಿ ಮೂಲದ ಅನೇಕ ಬುದ್ಧಿಜೀವಿಗಳು ಸಹ 'ಇದು ನಮ್ಮ ಕಾಲದ ಆತಂಕಕಾರಿ ರಾಜಕೀಯ ಬೆಳವಣಿಗೆ' ಎಂದಿದ್ದರು.

ಶೆರೂನ್ ಯಾರು?

ಇಂತಹ ಫ್ಯಾಸಿಸ್ಟ್ ಪಕ್ಷಕ್ಕೆ ಸೇರಿದ ಶೆರೂನ್ ಆತನ ಹಿನ್ನೆಲೆ ತಿಳಿದುಕೊಳ್ಳುವುದು ಅವಶ್ಯ. 1942 ರಲ್ಲಿ ಯೆಹೂದಿಗಳಿಗೆ ಪ್ರತ್ಯೇಕ ರಾಷ್ಟ್ರ ಬೇಕೆಂಬ ಭಯೋತ್ಪಾದಕ ಚಳುವಳಿಯಲ್ಲಿ ಶೆರೂನ್ ಭಾಗವಹಿಸಿದ್ದು ಅಂದಿನಿಂದಲೇ ಪ್ಯಾಲೆಸ್ಟೇನ್‌ರ ರಕ್ತದ ರುಚಿ ಕಂಡಿದ್ದರು.

1953 ರಲ್ಲಿ ಶೆರೂನ್ ಸೇನೆಯ ಒಂದು ಘಟಕದ ಮುಖಂಡರಾಗಿದ್ದಾಗ ಪ್ಯಾಲೆಸ್ಟೇನ್‌ನ ಪಶ್ಚಿಮ ದಂಡೆಯಲ್ಲಿನ ಕಿಬಿಯಾ ಎಂಬ ಹಳ್ಳಿಯಲ್ಲಿ 69 ನಾಗರಿಕರನ್ನು ಬಲಿತೆಗೆದುಕೊಂಡಿದ್ದರು.

1982 ರಲ್ಲಿ ಆತ ನಡೆಸಿದ ಕ್ರಿಮಿನಲ್ ಅಪರಾಧಗಳಿಗೆ ಲೆಕ್ಕವೇ ಇಲ್ಲ. ಆ ಹೊತ್ತಿಗಾಗಲೇ ರಕ್ಷಣಾ ಮಂತ್ರಿಯ ಪದವಿಯನ್ನೇರಿ, ಪಾಲೇಸ್ಟೇನ್ ನಿರಾಶ್ರಿತರಿಗೆ ಆಶ್ರಯ ನೀಡಿದ್ದಾರೆಂಬ ಕಾರಣ ನೀಡಿ ಲೆಬನಾನ್‌ನ ರಾಜಧಾನಿ ಬೆರೂತ್ ಮೇಲೆ ಧಾಳಿಗೆ ಆದೇಶ ನೀಡಿದ್ದರು. ಜೂನ್ 6, 1982 ರಂದು ಧಾಳಿ ಆರಂಭವಾಗಿದ್ದು, ಸೆಪ್ಟೆಂಬರ್ 16 ರಂದು ಪಶ್ಚಿಮ ಬೆರೂತ್‌ನ್ನು ವಶಪಡಿಸಿಕೊಳ್ಳುವವರೆಗೂ 17,825 ಲೆಬನಾನ್ ಜನರು ಸತ್ತಿದ್ದು, 30,000 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. 40,000 ಕ್ಕೂ ಹೆಚ್ಚು ಮನೆಗಳು ಧ್ವಂಸಗೊಂಡಿದ್ದವು.

ಲೆಬನಾನಿನಲ್ಲಿ ಪ್ಯಾಲೆಸ್ಟೇನಿನ ನಿರಾಶ್ರಿತರ ಆಶ್ರಯ ತಾಣವಾಗಿದ್ದ ಸಾಬ್ರ ಮತ್ತು ಶತಿಲಾ ಪ್ರದೇಶಗಳಿಗೆ 300 ರಿಂದ 400 ಗೂಂಡಾಪಡೆಗಳನ್ನು ಕಳುಹಿಸಿ ಕೊಚ್ಚಿ ಹಾಕಿದ್ದರು. ಈ ಎಲ್ಲಾ ಕೃತ್ಯಗಳು ನಡೆಯುವಾಗಲೂ ಶೆರೂನ್ ಬೆರೂತ್‌ನಲ್ಲೇ ಉಳಿದುಕೊಂಡು ಆದೇಶ ನೀಡುತ್ತಿದ್ದ. ಇಂತಹ ರಕ್ತಪಿಪಾಸು ಭಾರತಕ್ಕೆ ಬಂದರೆ ಈ ನೆಲ ಕಳಂಕವಾಗದೇ ಉಳಿದೀತೆ?

1982 ರ ನಿರಾಶ್ರಿತ ಕ್ಯಾಂಪುಗಳಲ್ಲಿ ನಡೆದ ಮಾರಣಹೋಮದ ವಿರುದ್ಧ, ಬದುಕುಳಿದಿರುವ ಕೆಲವರು ಬೆಲ್ಜಿಯಂ ದೇಶದ ನ್ಯಾಯಾಲಯಗಳಲ್ಲಿ ಕೇಸುಗಳನ್ನು ಹಾಕಿದ್ದು, ವಿಚಾರಣೆ ನಡೆಯುತ್ತಿದೆ. ಅಂದಿನ ಇಸ್ರೇಲ್‌ನ ಅಧ್ಯಕ್ಷರು ನೇಮಿಸಿದ್ದ ವಿಚಾರಣಾ ಆಯೋಗ ಕೂಡಾ ಶೆರೂನ್ ಅವರನ್ನು ತಪ್ಪಿತಸ್ತರೆಂದು ಛೀಮಾರಿ ಹಾಕಿತ್ತು.


ಶೆರೂನ್ ಪ್ರಧಾನ ಮಂತ್ರಿಯಾದ ನಂತರ ದೌರ್ಜನ್ಯದ ದರ ಇನ್ನಷ್ಟು ಹೆಚ್ಚಿದೆ. ಏಪ್ರಿಲ್ 2002 ರಲ್ಲಿ ಪಶ್ಚಿಮ ದಂಡೆಯ ಪಟ್ಟಣದಲ್ಲಿದ್ದ ನಿರಾಶ್ರಿತರ ಕ್ಯಾಂಪುಗಳ ಮೇಲೆ ಧಾಳಿ ನಡೆಸಿ ಮಾರಣಹೋಮ ನಡೆಸಿದುದು ಇನ್ನೂ ಹಸಿರಾಗಿಯೇ ಇದೆ. ಇಂತಹ ನರಹಂತಕ ಫ್ಯಾಸಿಸ್ಟ್ ಪ್ರಧಾನ ಮಂತ್ರಿಯನ್ನು ಭಾರತಕ್ಕೆ ಆಹ್ವಾನಿಸಿದ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಧಿಕ್ಕಾರವಿರಲಿ. ಪ್ರಜಾಪ್ರಭುತ್ವವನ್ನು ಪ್ರೀತಿಸುವ ಜನರೆಲ್ಲರೂ ಪ್ರತಿಭಟಿಸಲೇಬೇಕು.

.. ಹೋರಾಟಕ್ಕೆ ಚರಿತ್ರಾರ್ಹ ವಿಜಯ

ಟ 8 ರಿಂದ

ದಮನವನ್ನು ಕೆಚ್ಚೆದೆಯಿಂದ ಎದುರಿಸಿ ೋರಾಟವನ್ನು ದೃಢವಾಗಿ ಮುಂದುವರಿಸಿದ ರಳದ ವಿಪ್ಲವ ವಿದ್ಯಾರ್ಥಿ ಸಂಘಟನೆಗೆ ಕೆಂಪು ಂದನೆ ಹೇಳಲೇಬೇಕು.

ವಿದ್ಯಾರ್ಥಿಗಳು ಹೋರಾಟಕ್ಕೆ ಮುಂದಿಟ್ಟ ೇಡಿಕೆಗಳೆಲ್ಲವನ್ನು ಕಾಂಗ್ರೆಸ್ ಸರ್ಕಾರ ಈ ೀರೋದ್ದಾತ ಹೋರಾಟಕ್ಕೆ ಮಣಿದು ಪ್ಪಿಕೊಳ್ಳಲೇಬೇಕಾಯಿತು. ಇತ್ತೀಚಿನ ಸುಪ್ರಿಂ ೋರ್ಟ್ ತೀರ್ಪನ್ನು ಆಧಾರವಾಗಿಟ್ಟಕೊಂಡು ರ್ಕಾರ ಹೆಚ್ಚಿಸಿದ ವಿದ್ಯಾಬ್ಯಾಸ ಶುಲ್ಕ ಹಾಗೂ ಟುಗಳ ಪ್ರಶ್ನೆಯನ್ನು ಜಾರಿಮಾಡಲು ುಡಿಎಫ್ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಶೇ. ರಷ್ಟು ಮೆರಿಟ್ ಸೀಟುಗಳನ್ನು ುಂದುವರಿಸುವುದಾಗಿ ಹಾಗೂ ಸುಪ್ರಿಂಕೋರ್ಟ್ ರ್ಪಿನ ಪ್ರಕಾರ ವಿದ್ಯಾಭ್ಯಾಸ ಶುಲ್ಕವನ್ನು ರಳದಲ್ಲಿ ಜಾರಿ ಮಾಡುವುದಿಲ್ಲವೆಂದು ುಡಿಎಫ್ ಸರ್ಕಾರ ಒಪ್ಪಿಕೊಳ್ಳುವುದು ಈ ೋರಾಟದಿಂದಾಗಿ ಅನಿವಾರ್ಯವಾಯಿತು.


ಗಾಯಗೊಂಡ ವಿದ್ಯಾರ್ಥಿಗಳು

ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕವನ್ನು ರೂ. 30 ರಿಂದ 60ಕ್ಕೆ ಹೆಚ್ಚಿಸಿದ್ದನ್ನು ಪಠ್ಯಪುಸ್ತಕಗಳ ದರವನ್ನು ಸಹಾ ಹೆಚ್ಚಿಸಿದ್ದನ್ನು ಅರ್ಧದಷ್ಟು ಕಡಿತ ಮಾಡಲು ಸರ್ಕಾರ ಒಪ್ಪಿಕೊಂಡಿತು. 8ನೇ ತರಗತಿಯಿಂದ ಕಂಪ್ಯೂಟರ್ ವಿದ್ಯಾಬ್ಯಾಸವನ್ನು ಖಾಸಗೀ ಸಂಸ್ಥೆಗಳ ಮೂಲಕ ಏರ್ಪಡಿಸಲು ಹೊರಟು ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಂದ ತಲಾ ರೂ. 250 ಶುಲ್ಕ ವಸೂಲು ಮಾಡುವ ಆದೇಶವನ್ನು ಸರ್ಕಾರ ಹಿಂತೆಗೆದುಕೊಂಡಿದೆ. ಈ ರೀತಿ ಯುಡಿಎಫ್ ಸರ್ಕಾರದ ಹಲವು ಜನ ವಿರೋಧಿ ಕ್ರಮಗಳಿಗೆ ತಡೆಒಡ್ಡಲು ಕೇರಳದ ವಿದ್ಯಾರ್ಥಿ ಸಮೂಹಕ್ಕೆ ಸಾಧ್ಯವಾಯಿತು. ಈ ಹೋರಾಟದಲ್ಲಿ ಕೊಲೆ ಪ್ರಯತ್ನದ ಆರೋಪ ಹೊರಿಸಿ ಜಾಮೀನು ರಹಿತ ಮೊಕದ್ದಮೆಗಳನ್ನು ದಾಖಲಿಸಿ ಜೈಲಿಗೆ ಕಳುಹಿಸಿದ ಎಸ್.ಎಫ್.ಐ. ನ ರಾಜ್ಯ ನಾಯಕ ಪ್ರಸಾದ್ ರಾಜೇಂದ್ರನ್ ನ್ಯಾಯಾಲಯದಿಂದ ವಿಶೇಷ ಅನುಮತಿ ಪಡೆದು ಬಿಎಸ್ಸಿ ಪರೀಕ್ಷೆ ಬರೆದಿರುತ್ತಾರೆ.

ಈ ಹೋರಾಟದಲ್ಲಿ ಬಂಧಿಸಲಾಗಿದ್ದ ವಿದ್ಯಾರ್ಥಿ- ವಿದ್ಯಾರ್ಥಿನಿಯರ ಕೈಗೆ ಬೇಡಿ ತೊಡಿಸಿ ಅವರ ತಂದೆ ತಾಯಿಗಳ ಮುಂದೆ ಬೀದಿಯಲ್ಲಿ ನಡೆಸಿಕೊಂಡು ಹೋದ ಬರ್ಬರ ಪೋಲಿಸ್ ನೀತಿಯನ್ನು ಕೇರಳದ ಜನತೆ ಕಂಡಿತು. ವಿದ್ಯಾರ್ಥಿಗಳು ಬೇಡಿಕೆಗೋಸ್ಕರ ಮೇಲೆರಿಸಿದ ಕೈಗಳ ಎಳೆಯ ಮೂಳೆಗಳನ್ನು ಪೋಲೀಸರು ಹೊಡೆದು ಪುಡಿಮಾಡಿರುತ್ತಾರೆ. ರಕ್ತ ಮತ್ತು ಕಣ್ಣೀರಿನಿಂದ ತೊಯ್ದ ವಿದ್ಯಾರ್ಥಿಗಳ ಬಿಳಿಯ ಬಾವುಟದಲ್ಲಿನ ಕೆಂಪುನಕ್ಷತ್ರಗಳು ರಾರಾಜಿಸಿದ್ದನ್ನು ಸಹಾ ಕೇರಳದ ಜನತೆ ಕಂಡಿತು.

ಕೋಕಾಕೋಲಾ - ಪೋಲಾ ....

ಪುಟ 4 ರಿಂದ

ಪ್ರಸ್ತಾವಿಕ ಭಾಷಣ ಮಾಡಿದ ಡಿ.ವೈ.ಎಫ್.ಐ ನಾಯಕ ಸಂತೋಷ್ ನೀತಿನಗರ ರವರು ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ಧ ಡಿ.ವೈ.ಎಫ್.ಐ ದೇಶಾದ್ಯಂತ ನಡೆಸಿರುವ ಹೋರಾಟಗಳನ್ನು ಎಳೆ ಎಳೆಯಾಗಿ ಬಿಡಿಸಿದರು.

ಹೋರಾಟದಲ್ಲಿ ಪ್ರಗತಿಪರ ಚಿಂತಕರಾದ ಎಂ. ದೇವುದಾಸ್, ವಿಚಾರವಾದಿ ಸಂಘದ ನರೇಂದ್ರನಾಯಕ್, ಕಲಾವಿದ ಜೀವನಾರಾಂ ಸುಳ್ಯ, ಸಿಪಿಐ(ಎಂ) ಬಾಲಕೃಷ್ಣ ಶೆಟ್ಟಿ ಮುಂತಾದವರು ಭಾಗವಹಿಸಿರುವುದು ಹೊಸ ಮೆರುಗನ್ನು ನೀಡಿತು.

ಹೋರಾಟದ ನೇತೃತ್ವವನ್ನು ಡಿ.ವೈ.ಎಫ್.ಐ. ಮಂಗಳೂರು ನಾಯಕರಾದ ಮುನೀರ್ ಕಾಡಿಪಾಳ್ಯ, ಸಂತೋಷ್ ನೀತಿನಗರ, ದಯಾನಂದಶೆಟ್ಟಿ, ವಾಸುದೇವ, ಸಂದೀಪ್ ಬಜಾಲ್, ದೀಪಕ್ ಬಜಾಲ್, ಜಯಪ್ರಕಾಶ್, ಯಾದವ ಕೊಂಚಾಡಿ, ಮನ್ಸೂರ್, ದಬ್ಬಾರ್, ಇಮ್ತಿಯಾಜ್ ಮುಂತಾದವರು ವಹಿಸಿದ್ದರು.

'ನಿಷಿ' ಮಂಗಳೂರು.

ಸಾಂಕ್ರಾಮಿಕ ರೋಗ ಹತೋಟಿಗೆ ಜನಾರೋಗ್ಯ ಕ್ರಮಗಳು



19ನೇ ಶತಮಾನದವರೆಗೆ, ಜಗತ್ತಿನಾದ್ಯಂತ ಸಾಂಕ್ರಾಮಿಕ ರೋಗಗಳ ಹಾವಳಿ ಹೆಚ್ಚಿನ ಸಾವುಗಳಿಗೆ ಕಾರಣವಾಗಿದ್ದವು. 20 ನೇ ಶತಮಾನದ ಪ್ರಾರಂಭದ ಹೊತ್ತಿಗೆ ಸಾಂಕ್ರಾಮಿಕ ರೋಗಗಳಿಂದ ಉಂಟಾದ ಸಾವುಗಳ ಸಂಖ್ಯೆ ಕಡಿಮೆಯಾಯಿತು. ಅದೇ ವೇಳೆಗೆ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆ ಅಪಾರವಾಗಿದ್ದರಿಂದ ಔಷಧಿಗಳು, ಲಸಿಕೆಗಳು, ವಿಟಮಿನ್‌ಗಳ ಆವಿಷ್ಕಾರಗಳಿಂದ ಸಾಂಕ್ರಾಮಿಕ ರೋಗಗಳ ಹತೋಟಿ ಸಾಧ್ಯವಾಯಿತು ಎಂಬ ತೀರ್ಮಾನಕ್ಕೆ ನಾವೆಲ್ಲರೂ ಬರುವುದು ಸಹಜ. ಆದರೆ ಈ ಸಾಂಕ್ರಾಮಿಕ ರೋಗಗಳ ಹತೋಟಿ, ಸಾವುಗಳು ಕಡಿಮೆಯಾದ್ದು ಸ್ವಚ್ಛ ಕುಡಿಯುವ ನೀರಿನ ಉಪಯೋಗ, ಪೌಷ್ಟಿಕ ಆಹಾರದ ಉಪಯೋಗ, ಸುಧಾರಿತ ಒಳಚರಂಡಿ ವ್ಯವಸ್ಥೆ, ಬೇದಿ, ಆಮಶಂಕೆ, ಟೈಫಾಯಿಡ್ ರೋಗಗಳ ಹತೋಟಿಯಿಂದ ಎಂದು ಕಂಡುಬಂದಿದೆ. ಈ ಎಲ್ಲಾ ಅಂಶಗಳನ್ನು ಜನಾರೋಗ್ಯ ಸುಧಾರಣೆಯಲ್ಲಿ ನಾವು ಈಗ ಬಳಸುತ್ತಿದ್ದೇವೆ. ಸಾಂಕ್ರಾಮಿಕ ರೋಗಗಳ ಹತೋಟಿಯಲ್ಲಿ ಔಷಧಿ, ಲಸಿಕೆ, ವಿಟಮಿನ್‌ಗಳ ಬದಲು ಜನಾರೋಗ್ಯ ಕ್ರಮಗಳೇ ಪ್ರಮುಖ ಪಾತ್ರವಹಿಸಿವೆ.

ಸಿನಿಮಾ



ಕವಿತಾ ಲಂಕೇಶರ ಈ ಪ್ರಯತ್ನ ಪ್ರಶಂಸಾರ್ಹ. ವಾಸ್ತವಕ್ಕೆ ದೂರವೆನಿಸಿದರೂ ಅಸಮಂಜಸವೇನೂ ಅಲ್ಲದಂತಹ ನೂತನ ಕಥೆಯನ್ನು ತೆರೆಗಿಳಿಸಿದ್ದಾರೆ. ಹಿರಿ ಜೀವಗಳ ನೋವು-ನಲಿವುಗಳನ್ನು ನೋಡುಗನ ಮನದಾಳಕ್ಕೆ ನಾಟುವಂತೆ ಚಿತ್ರಿಸಿದ್ದಾರೆ.

ಲವಲವಿಕೆಯ ಚಿತ್ರ


ಒಂಟಿತನ, ಎಲ್ಲವೂ ಇದ್ದರೂ ಏನೂ ಇಲ್ಲದಂತಹ ವೇದನೆ. ಪ್ರೀತಿ, ವಿಶ್ವಾಸ, ಆರೈಕೆ ಇದಾವುದಕ್ಕೂ ಮಕ್ಕಳು ಕೊರತೆ ಮಾಡಿಲ್ಲ. ಆದರೆ ಹಿರಿ ಜೀವದ ಒಂಟಿತನವನ್ನು ದೂರ ಮಾಡುವ ಶಕ್ತಿ ಮಕ್ಕಳಿಗಿಲ್ಲ. ಆ ಶಕ್ತಿ ಇರುವುದು ಸ್ನೇಹಕ್ಕೆ, ಗೆಳತನಕ್ಕೆ ಮಾತ್ರ. ಇದ್ದ ಗೆಳೆಯರು ಒಬ್ಬೊಬ್ಬರೇ ಖಾಲಿಯಾಗುತ್ತಿರುವಾಗ ತಾನೆಲ್ಲಿ ಒಂಟಿಯಾಗುತ್ತೇನೋ ಎಂಬ ಭಯ! ಪ್ರೀತಿಗಾಗಿ ಹಂಬಲಿಕೆ, ಒಲವಿನ ಸಂಗಾತಿ ಸಿಕ್ಕಾಗ ತೃಪ್ತ ಭಾವನೆ, ಕಿರಿಯರ (ಹಿರಿಯರಲ್ಲ) ಕಣ್ಣು ತಪ್ಪಿಸಿ ಕದ್ದುಮುಚ್ಚಿ ಒಡನಾಟ, ಸನಿಹಕ್ಕಾಗಿ ಹಾತೊರೆಯುವ ಮನಸ್ಸು. ಇದರಲ್ಲಿ ಬೇರಾವುದೇ ಅಭಿಲಾಷೆಯಾಗಲೀ, ಸ್ವಾರ್ಥವಾಗಲಿ ಇಲ್ಲ. ಕೇವಲ ಗೆಳತನ, ನೋವು ನಲಿವು ಹಂಚಿಕೊಳ್ಳುವ ಸ್ನೇಹ ಮಾತ್ರ. ಆದರೆ ಬೇರೆಯವರ ದೃಷ್ಟಿಯಲ್ಲಿ? ಅದೂ ಸ್ವಂತ ಮಕ್ಕಳಿಗೇ ಗುಮಾನಿ! ಕಣ್ಣುಮುಚ್ಚಾಲೆಯ ಈ ಸ್ನೇಹ ಸಂಬಂಧದಲ್ಲಿ ನೋವುಂಟು-ನಲಿವುಂಟು, ಮನದ ವೇದನೆಗೆ ಆರೈಕೆ ಉಂಟು. ಪ್ರೇಮ ಪತ್ರಗಳೇನು, ಕದ್ದು ಮುಚ್ಚಿ ಸಿನಿಮಾ ನೋಡುವುದೂ ಉಂಟು.

ಮಕ್ಕಳಿಂದ ಇಂತಹ ಒಡನಾಟಕ್ಕೆ ವಿರೋಧ, ಮನೆತನದ ಗೌರವ-ಘತನೆಯ ಪ್ರಶ್ನೆ! ಆದರೆ ಮೊಮ್ಮಕ್ಕಳಿಂದ ಅವರಿಗೆ ಬೆಂಬಲ, ಅವರ ಒಡನಾಟಕ್ಕೆ ಸಹಕಾರ. ಮೊಮ್ಮಕ್ಕಳಿಗೆ ಅರ್ಥವಾದದ್ದು ಮಕ್ಕಳಿಗೆ ಅರ್ಥವಾಗುವುದಿಲ್ಲ. ಆದರೆ ಎರಡು ಹಿರಿಯ ಜೀವಗಳು ಮುಂದಿನ ಭವಿಷ್ಯದ ದಿನಗಳನ್ನು ಒಟ್ಟಿಗೇ ಕಳೆಯಲು ನಿರ್ಧಾರ. ಇದು ಕವಿತಾ ಲಂಕೇಶ 'ಪ್ರೀತಿ ಪ್ರೇಮ ಪ್ರಣಯ' ಚಿತ್ರದ ಒಟ್ಟು ಸಾರಾಂಶ.

ಹಿರಿಯ ಜೀವಗಳಿಗೆ ಕಾಡುವ ಒಂಟಿತನಕ್ಕೆ ಕವಿತಾ ಲಂಕೇಶರು ಸೂಚಿಸುವ ಪರಿಹಾರ ಚಿತ್ರ ನೋಡುವಾಗ ಸಮಂಜಸವೆನಿಸಿದರೂ ವಾಸ್ತವವಾಗಿ ಮತ್ತು ತಾರ್ಕಿಕವಾಗಿ ಯೋಚಿಸಬೇಕಾದ ವಿಚಾರ. ಅನೇಕ ಮನೆಗಳಲ್ಲಿ ಮಕ್ಕಳು-ಸೊಸೆಯಂದಿರು ಹಿರಿಯರನ್ನು ಗೌರವಯುತವಾಗಿ ನಡೆಸಿಕೊಳ್ಳುವುದಿಲ್ಲ ಎಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಬಾಳ ಪಯಣದ ಅಂತಿಮ ಘಟ್ಟ ಸುಖ-ಸಂತೋಷವಾಗಿರಬೇಕೆಂದು ಅವರು ಬಯಸುವುದರಲ್ಲಿ ತಪ್ಪೇನಿಲ್ಲ. ಒಂಟಿಯಾದ ಜೀವಕ್ಕೆ ಇನ್ನೊಂದು ಒಂಟಿ ಜೀವ ಸಿಕ್ಕಲ್ಲಿ, ಪರಸ್ಪರ ಒಲವಿದ್ದಲ್ಲಿ ಅಂತಹ ಒಡನಾಟಕ್ಕೆ ಯಾಕೆ ವಿರೋಧ ಮಾಡಬೇಕು?

ಇಂದು ನಮ್ಮ ಸಮಾಜ ಅನೇಕ ಕಟ್ಟುಪಾಡುಗಳು, ರೀತಿ-ರಿವಾಜುಗಳ ಸಂಕೋಲೆಗಳಿಂದ ಬಂಧಿಸಲ್ಪಟ್ಟಿದೆ. ಅದರಲ್ಲೂ ಸಂಸ್ಕೃತಿ, ಭಾರತೀಯತೆ, ಹಿಂದುತ್ವ ಎಂದು ಒತ್ತಾಯ ಪೂರ್ವಕವಾಗಿ ಜನರ ಮೇಲೆ ನೀತಿ ಸಂಹಿತೆ ಹೇರಲ್ಪಡುತ್ತಿದ್ದಾರೆ ಧರ್ಮಾಂಧರು. ಇಂತಹ ಸಂದರ್ಭದಲ್ಲಿ ಇವೆಲ್ಲಾ ಕಟ್ಟಳೆಗಳನ್ನು ಮೀರಿ ನಿಲ್ಲಲು ಸಾಧ್ಯವಿದೆಯೇ ಎಂಬುದು ಪ್ರಶ್ನೆ. ಸಂಸ್ಕೃತಿಯ ಹೆಸರಿನಲ್ಲಿ ಇಂತಹ ಸಂಬಂಧಗಳನ್ನು ಬಾಳಲು ಬಿಡುತ್ತಾರೆಯೇ?

ಆದರೆ ಕವಿತಾ ಲಂಕೇಶರ ಈ ಪ್ರಯತ್ನ ಪ್ರಶಂಸಾರ್ಹ. ವಾಸ್ತವಕ್ಕೆ ದೂರವೆನಿಸಿದರೂ ಅಸಮಂಜಸವೇನೂ ಅಲ್ಲದಂತಹ ನೂತನ ಕಥೆಯನ್ನು ತೆರೆಗಿಳಿಸಿದ್ದಾರೆ. ಹಿರಿ ಜೀವಗಳ ನೋವು-ನಲಿವುಗಳನ್ನು ನೋಡುಗನ ಮನದಾಳಕ್ಕೆ ನಾಟುವಂತೆ ಚಿತ್ರಿಸಿದ್ದಾರೆ. ಅದಕ್ಕೆ ತಕ್ಕನಾಗಿ ಹಿರಿಯ ತಾರೆಗಳಾದ ಅನಂತನಾಗ್ ಭಾರತಿ ಒಡನಾಡಿಗಳಾಗಿ ಉತ್ತಮ ಅಭಿನಯವನ್ನೇ ನೀಡಿದ್ದಾರೆ. ಉಳಿದವರೂ ಕೂಡಾ, ಅನಂತನಾಗ್ ಮಕ್ಕಳಾಗಿ ಪ್ರಕಾಶ್ ರೈ, ಅರುಣ್, ಸೊಸೆಯರಾಗಿ ಸುಧಾರಾಣಿ ಭಾವನ ಮತ್ತು ಮೊಮ್ಮಗನಾಗಿ ಸುನಿಲ್ ಪಾತ್ರವರಿತು ಅಭಿನಯಿಸಿದ್ದಾರೆ. ಭಾರತಿಯ ಮೊಮ್ಮಗಳಾಗಿ ಅಭಿನಯಿಸಿರುವ ಅನು ಪ್ರಭಾಕರ್ ಸ್ವಲ್ಪ ಹೆಚ್ಚೇ ಅನ್ನಿಸುವಷ್ಟು ಗ್ಲಾಮರ್ ಬೊಂಬೆಯಾಗಿ ಕಾಣಿಸಿಕೊಂಡಿದ್ದರೂ ಅಭಿನಯ ಕಡೆಗಣಿಸುವಂತಿಲ್ಲ. ಇನ್ನು ಕಥೆಗೆ ಹೊಂದಿಕೆಯಾಗದ ಕೆಲವು ಹಾಡುಗಳು, ಹಸಿ-ಬಿಸಿ ದೃಶ್ಯಗಳು ತೂರಿಕೊಂಡಿವೆ. ಇ... ಚಿತ್ರಕ್ಕೆ ತೀರಾ ಅಗತ್ಯವಾದುವುಗಳೇನೂ ಅ... ಆದರೆ ಮನಸ್ಸಿಗೆ ಮುದ ನೀಡಿ, ಕಚಗುಳಿಯಿ... ನಗಿಸುವ ಲವಲವಿಕೆ, ತಾಜಾತನ ಚಿತ್ರದಲ್ಲಿ...




ನಿರ್ದಿಷ್ಟ ದಾರ್ಮಿಕತೆಯನ್ನು ಸಂಸ್ಕೃತಿ ಯೊಂದಿಗೆ, ಈ ಸಂಸ್ಕೃತಿಯನ್ನು ರಾಷ್ಟ್ರೀಯತೆ ಯೊಂದಿಗೆ ವಿಕೃತವಾಗಿ ಸಮೀಕರಿಸುವ ಪ್ರಸ್ತುತ ಅಪಾಯಕಾರಿ ಬೆಳವಣಿಗೆಗಳ ಮಧ್ಯೆ ಕೊಸಾಂಬಿಯವರ ಸಂಸ್ಕೃತಿಯ ವಿರಾಟ್‌ದರ್ಶನವಾದ 'ಪುರಾಣ ಮತ್ತು ವಾಸ್ತವ' ಓದಲೇಬೇಕಾದ ಪುಸ್ತಕ.

ಸಂಸ್ಕೃತಿಯ ವಿರಾಟ್ ದರ್ಶನ

ದಾಮೋದರ ಧರ್ಮಾನಂದ ಕೋಸಾಂಬಿಯವರ Myth and Reality ಯ ಮೂಲ ಕೃತಿಯನ್ನು ಅಂಶಿಕವಾಗಿ ಮೈಸೂರಿನ ಶ್ರೀ ಟಿ.ಎಸ್.ವೇಣುಗೋಪಾಲ್ ಹಾಗೂ ಶೈಲಜಾ ದಂಪತಿಗಳು ಕನ್ನಡಕ್ಕೆ ಸಮರ್ಥವಾಗಿ ಅನುವಾದಿಸಿದ್ದಾರೆ.

ಭಾರತೀಯ ದರ್ಶನ ಮೂಡಿಬಂದ ಜೈವಿಕ ಕ್ರಿಯೆಯನ್ನು ಕಡೆಗಣಿಸುವ ಸಾಂಪ್ರದಾಯಿಕ ವಿಶ್ಲೇಷಣೆಗಳಿಗಿಂತ ಈ ಕೃತಿ ಹೇಗೆ ಭಿನ್ನ ಎಂದು ವಿವರಿಸುವ ಪ್ರವೇಶಿಕೆಯ ಜೊತೆಗೆ ಮೂರು ಅಧ್ಯಾಯಗಳನ್ನು ಒಳಗೊಂಡಿವೆ. ಶಂಕರ, ಬುದ್ಧ, ಮಧ್ವ, ರಾಮಾನುಜರು ಪ್ರತಿಪಾದಿಸಿದ ಶಾಸ್ತ್ರ ಮೀಮಾಂಸೆಗಳನ್ನು ಗ್ರಾಂಥಿಕವಾಗಿ ಅಧ್ಯಯನ ಮಾಡಿದರೆ ಬೆಳವಣಿಗೆಯ ಸ್ವರೂಪ ತಿಳಿಯುವುದಿಲ್ಲ. ದೈವೀವಾದದ ಅತ್ಯುಚ್ಚ ಪರಿಕಲ್ಪನೆಯಿಂದ ಹಿಡಿದು ಸಾಮಾನ್ಯ ಮನುಷ್ಯನ ದೈನಂದಿನ ಬದುಕಿನ ಶೈಲಿಯವರೆಗೂ ಈ ದೇಶದಲ್ಲಿ ದಾರ್ಶನಿಕರು ತಮ್ಮ ವಾದವನ್ನು ಖಂಡನ ಮಾಡಿದ್ದಾರೆ. ಮಂಡನವನ್ನು ಬಂಡನ ಮಾಡಿದವರೂ ಇದ್ದಾರೆ. ಇಲ್ಲಿ ಶಂಕರನೂ ಇದ್ದ. ಚಾರ್ವಾಕನೂ ಇದ್ದ. ಭಯ, ಭ್ರಮೆಯಿಂದ ವಾಸ್ತವದತ್ತ ಮನುಷ್ಯ ಬಂದ ದಾರಿ ಸಂಘರ್ಷ ಪೂರ್ಣವಾಗಿತ್ತು. ವಿಜ್ಞಾನದ ವೇಗ ಮೌಢ್ಯತೆ ಯನ್ನು ಪ್ರಶ್ನಿಸುವ, ಪ್ರಶ್ನೆಗೆ ಕಣ್ಣಾರೆ ಉತ್ತರ ದೊರಕಿಸಿ ಕೊಡುವ ಈ ದಿನಗಳಲ್ಲೂ ಮೂಢರಿದ್ದಾರೆ.



ಚಿಂತನ ಪ್ರಕಾಶನ, ಶಿರಸಿ
ಬೆಲೆ : 125

'ಪುರಾಣ ಮತ್ತು ವಾಸ್ತವ' ಕೃತಿ ಬಿಚ್ಚಿಕೊಳ್ಳುತ್ತಲೇ ಹೆಚ್ಚು ಆಸಕ್ತಿ ಹುಟ್ಟಿಸುತ್ತದೆ. ಮಾನವ ಸಮಾಜದ ಬೆಳವಣಿಗೆಯ ಹಲವಾರು ಹಂತಗಳಲ್ಲಿ ಶಕ್ತಿ, ಶಿವ, ವಿಷ್ಣು, ವಾನರ, ನಾಥ ಪ್ರತಿಮಾ ಸೃಷ್ಟಿಗಳಿಗೆ ವಾಸ್ತವದ ಅರ್ಥ ಹುಡುಕುತ್ತಲೇ ಹಲವಾರು ಜಾಗತಿಕ ಸಾಮ್ಯತೆಗಳನ್ನು ತೋರಿಸಿಕೊಡುತ್ತದೆ.

ಕೃತಿಯ ಮೊದಲನೆ ಅಧ್ಯಾಯ ಭಗವದ್ಗೀತೆಯ ಆರ್ಥಿಕ ಮತ್ತು ಸಾಮಾಜಿಕ ಅಂಶಗಳ ಒಟ್ಟು ಸ್ವರೂಪವನ್ನು ತೆರೆದಿಡುತ್ತದೆ.

ಗೀತೆಯ ರಚನೆಗೆ ಬಳಸಲಾದ ಸಂಸ್ಕೃತಭಾಷೆ ಅದರ ಪ್ರೌಢಿಮೆಯಿಂದ ಗುಪ್ತರ ಕಾಲಮಾನದ್ದೆಂದು ತೀರ್ಮಾನಿಸಬಹುದಾಗಿದೆ ಎಂದು ಕೋಸಾಂಬಿ ಹೇಳುತ್ತಾರೆ. ಧರ್ಮ ವಿಸ್ತಾರಕ್ಕೆ ಪುರಾಣಗಳ ರಚನೆ, ಪುನರ್ರಚನೆ ನಿರಂತರವಾಗಿ ನಡೆಯುತ್ತ ಬಂದಿದೆ. ಗೀತೆಯಲ್ಲಿ ಬಳಸಲಾದ ಕರ್ಮಯೋಗ ಬೌದ್ಧಧರ್ಮದ ಹಲವಾರು ಅಂಶಗಳನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದೆ. ಸರ್ದೇಸಾಯಿಯವರ ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆಯ ಪ್ರಾರಂಭಿಕ ಅಧ್ಯಾಯಗಳಲ್ಲಿ ವೈದಿಕ ಶೋಷಣೆಯ ವಿರುದ್ಧ ಬೌದ್ಧ ಧರ್ಮ ಮೂಡಿ ಬಂದ ಸಂದರ್ಭದ ಸಾಮಾಜಿಕ, ಆರ್ಥಿಕ ವಿಶ್ಲೇಷಣೆಯ ಸಾಮ್ಯತೆಯನ್ನು ಕೋಸಾಂಬಿಯವರ 'ಗೀತಾ' ರಚನೆಯ ಕಾಲಘಟ್ಟದ ವಿದ್ಯಮಾನಗಳ ವಿವರಣೆಯಲ್ಲೂ ಕಾಣಬಹುದಾಗಿದೆ.

ಆಶ್ರಯದಾತರನ್ನು ತಮ್ಮ ಹಲವಾರು ಸಾಮಾಜಿಕ ಚಟುವಟಿಕೆಗೆ ಒಪ್ಪಿಸುವ, ಪ್ರೇರೇಪಿಸುವ ಸಾಧನವಾಗಿ ಕೃಷ್ಣನ ಮುಖವಾಣಿಯ ನಿರ್ದೇಶನಗಳನ್ನು ಆ ಕಾಲದ ಬ್ರಾಹ್ಮಣರು ತಮ್ಮ ಉದ್ದೇಶಕ್ಕೆ ಬಳಸಿಕೊಂಡರು. ಮತ್ತು ಆ ಮೂಲಕ ತಮ್ಮ ಮೇಲಾಗುತ್ತಿದ್ದ ದಾಳಿಗಳಿಗೆ ಗೀತೆಯನ್ನು ಗುರಾಣಿಯಾಗಿ ಹಿಡಿದರು. ಗೀತೆಯಲ್ಲಿ ಮೊದಲಾದ ಉತ್ಪಾದಕ ಶಕ್ತಿಗಳ ಅವಹೇಳನ ಅದರ ಒಟ್ಟು ವರ್ಗ ಆಸಕ್ತಿಯನ್ನು ಪ್ರತಿನಿಧಿಸುತ್ತದೆ. ಭೌತಿಕ ವಾಸ್ತವಕ್ಕೆ ಧರ್ಮದ ಉಡುಪು ತೊಡಿಸುವ ಪ್ರಯತ್ನಗಳು, ವಿಜ್ಞಾನಕ್ಕೆ ಧರ್ಮ ಬೇಕು ಎಂದು ಹೇಳುವ ಪ್ರವೃತ್ತಿಗಳು ಇನ್ನೂ ಜೀವಂತವಿರುವಾಗ ವಿಜ್ಞಾನ ಕೊಡಮಾಡುವ ಸಮಾಜವಾದಿ ದೃಷ್ಟಿಕೋನ ಅಥವಾ ಸಮಾಜವಾದದ ವೈಜ್ಞಾನಿಕ ದೃಷ್ಟಿಕೋನ ಮಾತ್ರ ಬದುಕಿನ ವೇದಶಾಸ್ತ್ರವಾಗಬೇಕು. ಕೊಸಾಂಬಿಯವರ ಸ್ಪಷ್ಟ ನುಡಿ.

ಎರಡನೆ ಅಧ್ಯಾಯದ ಊರ್ವಶಿ ಪುರು... ಪ್ರಸಂಗ ಕಥಾವಸ್ತುವೊಂದರ ವಿ... ವಿಶ್ಲೇಷಣೆಯನ್ನು ಋಗ್ವೇದದ ಋಕ್ಕು... ಕಾಲಾಂತರದಲ್ಲಿ ಅಪಭ್ರಂಶ ಹೊಂದಿರುವ... ಹೇಳುತ್ತದೆ. ಮಾತೃದೇವತೆಗಳ ಸೃ... ಸಾಮಾಜಿಕ ಜಾಡನ್ನು ಹಿಡಿದು ಕೊಸಾ... ಸಾಗುತ್ತಾರೆ. ಅಧ್ಯಾಯ ನಿರೂಪಿಸುವ ಪ್ರ... ಸ್ವಲ್ಪ ಕ್ಲಿಷ್ಟವಾಗಿದ್ದರೂ, ಸಂಕೀರ್ಣವಾಗಿ... ಅನುವಾದದ ಭಾಷೆ ವಿಷಯವನ್ನು ಓ... ಹಿಡಿದಿಡುತ್ತದೆ.

ಮೂರನೇ ಹಾಗೂ ಕೊನೆಯ ಅಧ್ಯಾಯ... ಮಾತೃದೇವತೆಗಳ ಸಾಮಾಜಿಕ ಅಧ್ಯಯನ ಹಾ... ಆ ಪಂಥದವರ ಆರ್ಥಿಕ ಸ್ವರೂಪದ ಹಲ... ಜಾಡುಗಳನ್ನು ಸ್ಥಳ ವಿಶೇಷದ ಹಿನ್ನೆಲೆಯಲ್ಲಿ ... ದೇಶದ ಬೇರೆ ಬೇರೆ ಭಾಗಗಳಲ್ಲಿ ಬಳಕೆಯ... ಆಚರಣೆಯ ಬೆಳಕಿನಲ್ಲಿ ಕೋಸಾ... ವಿಶ್ಲೇಷಿಸುತ್ತಾರೆ.

ಕೋಸಾಂಬಿಯವರ ಒಟ್ಟು ಗ್ರಹಿಕೆ ... ಸಾಹಿತ್ಯಿಕ ಪರಂಪರೆಯೊಂದೇ ಅಲ್ಲ ಜ... ಜಾನಪದ ಹಾಗೂ ಪ್ರಾಕ್ತನ ಶಾಸ್ತ್ರ... ಒಳಗೊಂಡಿರುವುದರಿಂದ ಪುರಾಣದ ಮಿಥ್ಯ... ಬಿಡಿಸಿಡುವ ಅವರ ವಾದ ಓದುಗರಿಗೆ ... ಸಮರ್ಥನೆ ಎನಿಸುತ್ತದೆ. ನಿರ್ದಿಷ್ಟ ಧಾ... ಯನ್ನು ಸಂಸ್ಕೃತಿ ಯೊಂದಿಗೆ, ಈ ಸಂಸ್ಕೃತಿ... ರಾಷ್ಟ್ರೀಯತೆ ಯೊಂದಿಗೆ ಸಮೀಕರಿಸುವ ಅಪಾಯಕಾರಿ ಬೆಳವಣಿಗೆಗಳ ... ಕೊಸಾಂಬಿಯವರ ಸಂಸ್ಕೃತಿಯ ವಿರಾಟ್... ವಾದ 'ಪುರಾಣ ಮತ್ತು ವಾಸ್ತವ' ಓದಲೇಬ... ಪುಸ್ತಕ.

ಮಹಾನ್ ವಿದ್ವಾಂಸರಾದ ಕೋಸಾಂಬಿ... ಚಿಂತನೆಗಳನ್ನು ಕನ್ನಡಕ್ಕೆ ತಂದ ಉತ್ತರ... ಚಿಂತನ ಪ್ರಕಾಶನಕ್ಕೆ ಅಪಾರ ಅಭಿನಂದ...

ವಿಜಯಕು...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH